ಅನುವಾದಕ:

ಉಡುಪಿ ಲಕ್ಷ್ಮೀನಾರಾಯಣ ಆಚಾರ್ಯ, ಎಂ. ಎ., ಎಲ್. ಟಿ.

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್

ಅದೃಷ್ಟಶಾಲಿ ರಾಷ್ಟ್ರನಾಯಕ
ಜಾರ್ಜ್ ವಾಶಿಂಗ್‌ಟನ್

ಲೇಖಕಿ

ಜೀನೇ ಇಯೇಟನ್

ಅನುವಾದಕರು

ಉಡುಪಿ ಲಕ್ಷ್ಮೀನಾರಾಯಣ ಆಚಾರ್ಯ, ಎಂ. ಎ., ಎಲ್. ಟಿ;

1958

ಪ್ರಕಾಶಕರು

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್,

ಉಡುಪಿ.

LEADER BY DESTINY

GEORGE WASHINGTON, MAN AND PATRIOT

By Jeanette Eaton

Translated into Kannada by

U. Laxminarayana Acharya

ಮುದ್ರಕರು

ನವಯುಗ ಪ್ರೆಸ್,

ಉಡುಪಿ.

ಬೆಲೆ

ಒಂದೂಕಾಲು ರೂಪಾಯಿ

(ರೂ. 1=25)

ಅದೃಷ್ಟಶಾಲಿ ರಾಷ್ಟ್ರನಾಯಕ

ಜಾರ್ಜ್ ವಾಶಿಂಗ್‌ಟನ್.

ಲೇಖಕಿ ಜೀನೇ ಇಯೋಟೆನ್‌ರ ಕುರಿತು

ಓಹಿಯೋ ಸ್ಟೇಟಿನ ಕೊಲಂಬಸ್‌ನಲ್ಲಿ ಜನ್ಮವೆತ್ತಿ, ಉತ್ತಮ ವಿದ್ಯಾಭ್ಯಾಸ, ಕಲಾಸಕ್ತಿಗಳ ಸನ್ನಿವೇಶದಲ್ಲಿ ಈಕೆ ಬೆಳೆದರು. ವಾಸ್ಸಾರ್ ಕಾಲೇಜಿನಿಂದ ಪದವೀಧರರಾದನಂತರ ಓಹಿಯೋ ವಿಶ್ವವಿದ್ಯಾಲಯದ ಎಮ್.ಎ; ಪದವಿಯನ್ನೂ ಪಡೆದರು. ಜೀವನ ನಿರ್ವಹಣೆಗಾಗಿ ಹಲವು ಉದ್ಯೋಗಗಳನ್ನು ಕೈಗೊಂಡರೂ ಈಕೆ ಪತ್ರಿಕೆಗಳಿಗೆ ಕಥೆಗಳನ್ನೂ, ಇತರ ಚಿಕ್ಕ ಲೇಖನಗಳನ್ನೂ ಬರೆಯುತ್ತಲೇ ಇದ್ದರು. 'ಚಿಕ್ಕ ಮಕ್ಕಳಿಗಾಗಿ ಜೀವನ ಕಥೆಗಳನ್ನು ಬರೆಯುವುದೇ ನನ್ನ ಉದ್ದೇಶ'ವೆಂಬುದಾಗಿ ಇವರೇ ಹೇಳಿರುತ್ತಾರೆ. ಇಂಥ ಜೀವನ ಸಾಹಿತ್ಯವನ್ನೊದಗಿಸುವುದರಿಂದ ಚಿಕ್ಕ ಮಕ್ಕಳಿಗೆ ದೊಡ್ಡ ದೊಡ್ಡ ಮಹಾನುಭಾವರ ಆದರ್ಶಗಳನ್ನು ತಿಳಿಸಿದಂತಾಗುತ್ತದೆ ಎಂಬುದೇ ಇವರ ಭಾವನೆ.

ಈ ಪುಸ್ತಕದ ಕುರಿತು

ಅಮೇರಿಕದ ಮೊದಲ ಅಧ್ಯಕ್ಷನ—ಜಾರ್ಜ್ ವಾಶಿಂಗ್‌ಟನ್‌ನ—ಜೀವನ ಚರಿತ್ರೆಯಿದು. ಈತನ ಬಾಲ್ಯ, ಯೌವನದ ಸಾಹಸಮಯ ಜೀವನವನ್ನು ಚಿತ್ರಿಸಿ, ಮುಂದೆ ಈತ ಹೇಗೆ ಅಮೇರಿಕದ ಜನರ ಮನದಿಂಗಿತವನ್ನು ಅರಿತು ಅದಕ್ಕೆ ತಕ್ಕಂತೆ ಸ್ವಾತಂತ್ರ್ಯ ಸ್ಥಾಪನೆಗಾಗಿ ಹೆಣಗಿದನು ಎಂಬುದನ್ನು ಈ ಜೀವನ ಚರಿತ್ರೆಯಲ್ಲಿ ವಿವರಿಸಲಾಗಿದೆ. ವಾಶಿಂಗ್‌ಟನ್‌ನ ನಿಕಟವರ್ತಿ ಆತ್ಮೀಯರೊಬ್ಬರೇ ಇದನ್ನು ಬರೆದಿರುತ್ತಾರೆ ಎನ್ನುವಷ್ಟು ಈ ಜೀವನ ಚರಿತ್ರೆಯು ರಮ್ಯವಾಗಿದೆ, ರೋಚಕವಾಗಿದೆ, ಹಾಗೂ ವ್ಯಾಪಕವಾಗಿದೆ.

ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ್ ವಾಶಿಂಗ್‌ಟನ್

* * * * *

ಅಧ್ಯಾಯ ೧

ರಾತ್ರಿಯೆಲ್ಲಾ ತುಷಾರಸೇಚನ ಪಡೆದ ನದೀಕೂಲದ ಶಾದ್ವಲವೆಲ್ಲವೂ ತೊಯ್ದುಹೋಗಿದೆ. ಇದನ್ನು ಹಾದು ಅವಸರವಸರವಾಗಿ ನಡೆಯುತ್ತ ಬಾಲಕನೊಬ್ಬನು ನದಿಯ ದಂಡೆಯತ್ತ ಬರುತ್ತಿದ್ದಾನೆ. ಇನ್ನೂ ಸೂರ್ಯೋದಯಕ್ಕೆ ಅರೆತಾಸಿರಬಹುದು. ಆದರೂ ಈ ನಸು ಬೆಳಕಿನಲ್ಲೂ ಆತನ ತುಸು ದೊಡ್ಡದಾದ ತಲೆ ಮತ್ತು ಭವ್ಯವಾದ ಅಂಗ ಸೌಷ್ಠವಗಳನ್ನು ಸುಲಭವಾಗಿ ಕಾಣಬಹುದಿತ್ತು. ಈತನು ನದಿಯ ದಂಡೆಯನ್ನು ತಲಪುವಷ್ಟರಲ್ಲೇ, ಅಲ್ಲೇ ಹಿಂದೆ ವಿಶಾಲವಾಗಿ ಬೆಳೆದ ವಿಲ್ಲೋ (willow) ವೃಕ್ಷದ ಕೊಂಬೆಗಳನ್ನೆಲ್ಲ ಆಚೆ ಈಚೆಗೆ ದೂಡುತ್ತ, ಭರದಿಂದ ಮುಂದೆ ಸಾಗುತ್ತ ಬಂದ ಆತನ ತಮ್ಮ ಜಾಕಿಯು ಅಣ್ಣನಿಗಿಂತಲೂ ಮುಂಚಿತವಾಗಿ ನದಿಯ ಸೈಕತ ರಾಶಿಗೆ ಹಾರಿ, 'ಅಬ್ಬಾ, ನೀನು ಎದ್ದು, ಬಟ್ಟೆ ಹಾಕಿ, ಹೊರಟು ಬರುವಾಗಲೂ ಕೂಡ ನನ್ನನ್ನು ಕೂಗಲೇ ಇಲ್ಲವಲ್ಲ?' ಎಂದು ಮೂದಲಿಸಿದನು.

ಮೇಲೆ ಒತ್ತುತ್ತಿದ್ದ ಮುಗುವನ್ನು ತಡೆಯುತ್ತ ಅಣ್ಣ ಜಾರ್ಜನು "ಜಾಕಿ, ಪಾಪ ಗಾಢ ನಿದ್ದೆಯಲ್ಲಿದ್ದೆ ನೀನು, ಹೇಗೆ ಎಬ್ಬಿಸಲಿ ಎಂದೆನಿಸಿತು. ಇರಲಿ ಬಿಡು, ಉಪಾಹಾರಕ್ಕೆ ಮುಂಚೆ ಇನ್ನೂ ಬಿಡುವಿದೆ; ಬಾ, ಈಜೋಣವಂತೆ", ಎಂದು ಸಮಾಧಾನಕರವಾದ ಉತ್ತರವನ್ನಿತ್ತನು.

ಇಬ್ಬರೂ ದಡವನ್ನು ಸೇರಿ ಕಾಲು ಮಾರ್ಗವಾಗಿ ನದೀತಟದಲ್ಲಿನ ಆಳು ಮಕ್ಕಳ ಕೊಪ್ಪವನ್ನು ದಾಟುತ್ತ, ನದಿಯು ತನ್ನ ಅಂಕುಡೊಂಕು

ಅಗಲ ಕಿರಿದಾದ ಅವಸ್ಥೆಯನ್ನು ತೊರೆದು, ತನ್ನ ಪಾತ್ರೆಯನ್ನೆಲ್ಲಾ ತುಂಬಿದ್ದ ಭಾಗವನ್ನು ಸೇರಿದರು. ಆವಸರವಾಗಿ ಕಾಲು ಹಾಕುತ್ತಿದ್ದ ಅಣ್ಣನನ್ನು ಅನುಸರಿಸಲು ತಮ್ಮನು ಓಡಲೇ ಬೇಕಾಯಿತು.

ಸ್ನಾನದ ಘಟ್ಟವನ್ನು ಸೇರಿದೊಡನೆಯೇ, ಇಬ್ಬರೂ ಬಟ್ಟೆ ಕಳಚಿದರು. ತಮ್ಮನು ತಪ್ಪಿಸಲೆತ್ನಿಸುತ್ತ, ಕಿರುಚುತ್ತ ಮೈಯನ್ನು ಬಾಗಿಸಿ, ಬಳುಕಿಸಿ, ಅಣ್ಣನು ತನ್ನನ್ನೆತ್ತದಂತೆ ಮಾಡಲೆಳಸಿದರೂ, ಜಾರ್ಜನು ಜಾಕಿಯನ್ನೆತ್ತಿ ನೀರಿಗೆ ಹಾಕಿದನಲ್ಲದೆ, ತಾನೂ ದಕ್ಕೆಯನ್ನೇರಿ, ಆದರ ಉದ್ದಕ್ಕೂ ಓಡಿ ನೀರಿಗೆ ದುಮುಕಿದನು. ಮುಳುಗು ಹಾಕಿ— ಈಸುತ್ತ, ಮೆಲ್ಲನೆ ತಮ್ಮನು ಈಸುತ್ತಿದ್ದ ಭಾಗದಲ್ಲೇ ಮೇಲಕ್ಕೆ ತಲೆ ಹಾಕಿದನು. ಅಂತೂ ಇಬ್ಬರೂ ಮನಬಂದಂತೆ ಒಂದು ಅರ್ಧ ತಾಸು ಈಸುತ್ತ, ನೀರಿನಿಂದ ಮೇಲಕ್ಕೆ ಬಂದು ಮನೆಗೆ ಹೊರಡಲು ಬಟ್ಟೆ ಹಾಕಲುಪಕ್ರಮಿಸಿದರು. ಬೂಟುಗಳ ದಾರಗಳನ್ನು ಬಿಗಿಯುತ್ತ, ತಮ್ಮ ಜಾಕಿಯು ಹೇಳಲಾರಂಭಿಸಿದನು.

“ವೇಕ್‌ಫೀಲ್ಡಿಗೆ (ಮನೆಗೆ) ನನ್ನೊಂದಿಗೆ ಬರುತ್ತಿಯಾ ಜಾರ್ಜ್? ನನಗೇನೋ ಇಲ್ಲೇ ಇರುವ ಎನಿಸುತ್ತಿದೆ, ಕಾರಣ, ಮನೆಯಲ್ಲಿ ಅಮ್ಮನು ತೋರುವ ಸಲುಗೆಗಿಂತ ಹೆಚ್ಚಿನ ಸಲುಗೆಯನ್ನು ಇಲ್ಲಿ ಆಸ್ಟಿನ ಅಣ್ಣ (ಭ್ರಾತೃವ್ಯ, cousin) ಮತ್ತು ಆತನ ಪತ್ನಿ ಆನ್ ತೋರುತ್ತಿದ್ದಾರೆ''. ಅಣ್ಣ ಗೋಣು ಅಲ್ಲಾಡಿಸುವುದನ್ನು ಕಂಡು ಈತ ಮತ್ತೂ ಮುಂದುವರಿದನು, “ಅಲ್ಲಿ ಫೆರ್ರಿ ಫಾರಂನಲ್ಲಿ ನಮ್ಮ ಸೋದರಿ ಬೆಟ್ಟಿ ಮತ್ತು ತಾಯಿ ನಿನ್ನನ್ನು ಇದಿರು ನೋಡುತ್ತಿದ್ದಾರೆ. ಎಂದು ಬರುವೆ ಜಾರ್ಜ್!”

“ನಾನು ಬಹುಶಃ ಕಡು ಬೇಸಗೆಯಲ್ಲಷ್ಟೇ ಬರಬಹುದು. ರಾಬಿನಿಗೆ ಆತನ ಸ್ಥಳ ಟೊಟೇಂಕಿಗೆ ಬರುವುದಾಗಿಯೂ ಮಾತು ಕೊಟ್ಟಿದ್ದೆ. ಅಲ್ಲದೆ ನನ್ನ ಪಾಠಗಳ ಅವಾಂತರ ಮುಗಿಯಬೇಕಲ್ಲ? ಅವನ್ನು ಮುಗಿಸದೆ ಉಪಾಧ್ಯಾಯ ವಿಲಿಯಮ್‌ರು ನನ್ನನ್ನು ಹೋಗಗೊಡುವರೆ” ಎಂದು ಹೇಳುತ್ತಿರುವಂತೆ, ಜಾರ್ಜನ ಮುಖವು ತುಸು ಗಂಭೀರವಾಯಿತು.

ಜಾಕಿ ಮತ್ತೂ ಪ್ರಶ್ನಿಸಿದನು, "ಜಾರ್ಜ್, ನೀನು ಆಗಸ್ಟಿನ್, ಲಾರೆನ್ಸ್‌ರಂತೆ ವಿದ್ಯೆಗಾಗಿ ಇಂಗ್ಲಂಡಿಗೆ ಹೋಗುವೆಯಾ?"

"ಇಲ್ಲ; ಲೆಕ್ಕ ಪತ್ರಗಳನ್ನಿಡುವ ಪಾಠದ ವಿನಾ, ಇನ್ನಾವುದೂ ನನಗೆ ರುಚಿಸುತ್ತಿಲ್ಲ. ಹಣವೂ ಸಾಲದು. ತಂದೆಯು ನನ್ನ ಪಾಲಿಗೆ ಬಿಟ್ಟುಹೋದ ಭೂಮಿಯು ಅವಳಿರುವತನಕ ತಾಯಿಗೇ ಎಂದ ಬಳಿಕ, ನಾನಾದರೂ ಆದಷ್ಟು ಬೇಗನೆ ಸ್ವಾವಲಂಬಿಯಾಗಬೇಕಲ್ಲವೆ?"

ಈ ಮಕ್ಕಳ ತಂದೆ ಆಗಸ್ಟಿನ್ ವಾಶಿಂಗ್‌ಟನ್ ಸತ್ತು ಆಗತಾನೇ ನಾಲ್ಕು ವರ್ಷಗಳಾಗಿದ್ದುವು. ಸಾಯುವಾಗ ಇವರು ನಾಲ್ಕು ಪ್ರತ್ಯೇಕ ದೇಶಗಳಲ್ಲಿನ ತನ್ನ ಆಸ್ತಿಗಳಲ್ಲಿನ ಮೊದಲನೆಯ ಹೆಂಡತಿಯ ಮಕ್ಕಳಾದ ಲಾರೆನ್ಸ್ ಮತ್ತು ಆಗಸ್ಟಿನ್‌ರಿಗೆ ಉತ್ತಮವಾದ ಜಮೀನು ಗಳನ್ನೂ ಉಳಿದುದನ್ನೆಲ್ಲಾ ತನ್ನ ದ್ವಿತೀಯ ಪತ್ನಿ ಮೇರಿ ಬಾಲ್ ವಾಶಿಂಗ್‌ಟನ್ ಮತ್ತು ಅವಳ ಐದು ಮಕ್ಕಳಿಗೆ ಹಂಚಿಹೋಗಿದ್ದರು. ಮೇರಿ ವಾಶಿಂಗ್‌ಟನ್ನಳು ತನ್ನ ಮಗಳು ಬೆಟ್ಟಿ ಮತ್ತು ಚಿಕ್ಕ ಮೂರು ಮಕ್ಕಳೊಂದಿಗೆ ರಾಪ್‌ನೋಕ್ ತೀರದ ಫೆರ್ರಿಫಾರಂನಲ್ಲಿ ವಾಸವಾಗಿದ್ದಳು. ಅವಳ ಹಿರಿಯ ಮಗನೇ ಜಾರ್ಜ್ ವಾಶಿಂಗ್‌ಟನ್, ಅದೃಷ್ಟಶಾಲಿ ಜನನಾಯಕ ಮತ್ತು ನಮ್ಮ ಕಥಾನಾಯಕ.

ಜಾರ್ಜ್ ವಾಶಿಂಗ್‌ಟನ್ನನ್ನು ಎಲ್ಲರೂ ಪ್ರೀತಿಸುತ್ತಿದ್ದರು. ಈತ ನಾದರೋ ತನ್ನ ಹೆಚ್ಚಿನ ಸಮಯವನ್ನು ತನ್ನ ಮಲ—ಅಣ್ಣ ಆಸ್ಟಿನ್ (ಇದು ಆಗಸ್ಟಿನ್‌ನ ಚಿಕ್ಕ ಹೆಸರು) ನೊಂದಿಗೆ ವೇಕ್ ಫೀಲ್ಡ್‌ನಲ್ಲೇ ಕಳೆಯುತ್ತಿದ್ದನು. ಕೆಲವು ತಿಂಗಳು ತಾಯಿಯೊಡನೆಯೂ ಮತ್ತೂ ಹೆಚ್ಚಿನ ಸಮಯವನ್ನು ದೊಡ್ಡಣ್ಣ ಲಾರೆನ್ಸ್‌ನೊಡನೆ ಮೌಂಟ್ ವೆರ್ನಾನಿನಲ್ಲಿಯೂ ಕಳೆಯುತ್ತಿದ್ದನು.

"ಉಪಾಹಾರಕ್ಕೆ ಹೊತ್ತಾಯಿತಲ್ಲವೆ!" ಎಂದು ಜಾಕಿ ಮನೆಗೆ ಓಡಲಾರಂಭಿಸಿದನು. ಸ್ವಲ್ಪ ಸಮಯದಲ್ಲೇ ಇಬ್ಬರೂ ಮನೆಸೇರಿ ಊಟದ ಮನೆಯನ್ನು ಪ್ರವೇಶಿಸುತ್ತ ತಮ್ಮತ್ತಿಗೆ ಆನ್ ಆಯ್‌ಲೆಟ್ ವಾಶಿಂಗ್‌ಟನ್‌ಳಿಂದ ಸ್ವಾಗತವನ್ನು ಪಡೆದರು.

ಇವರ ಪ್ರಾತಃವಂದನೆಗಳನ್ನು ಸ್ವೀಕರಿಸುತ್ತ ಇವರತ್ತಿಗೆ, "ಇಂದು ಭಾವ ಲಾರೆನ್ಸ್ ಬರಲಿದ್ದಾರಂತೆ", ಎಂಬ ಶುಭವಾರ್ತೆಯನ್ನು ಅರುಹಿದಳು.

"ನಿಜವೆ? ಏನಂತೆ? ಏನು ಬರಲಿದ್ದಾರೆ?", ಎಂದು ಚಕಿತನಾದ ಜಾರ್ಜ್ ಒಂದೇ ಉಸುರಿನಿಂದ ಪ್ರಶ್ನಿಸಿದನು.

"ಬಹುಶಃ ಅವರು ಸ್ವಲ್ಪ ಮುಂಚಿತವಾಗಿಯೇ ವಿಲಿಯಮ್ಸ್ ಬರ್ಗಿಗೆ, ವಿಧಾಯಕ ಸಭೆಗೆ ಹೋಗಲಿರುವರೋ ಏನೋ! ಇಂದೂ ಮಧ್ಯಾಹ್ನ ಊಟಕ್ಕೇನೇ ಅವರನ್ನು ನಿರೀಕ್ಷಿಸಬಹುದು," ಎಂದುತ್ತರಿಸುತ್ತಿದ್ದಂತೆ, ಆನ್ ತನ್ನ ಗಂಡ ಆಸ್ಟಿನ್ ಉಪಾಹಾರಗೃಹವನ್ನು ಪ್ರವೇಶಿಸುವುದನ್ನು ಕಂಡು ತುಸು ಉತ್ತೇಜಿತ ಸ್ವರದಿಂದಲೆಂಬಂತೆ ಮುಂದುವರಿಸಿದಳು, "ಇದೋ ನೋಡಿದಿರಾ! ಜಾರ್ಜಿನ ಮುಖವೆಷ್ಟು ಹಿಗ್ಗಿದೆ? ಲಾರೆನ್ಸ್ ಬರುವರೆಂದೇ ಈ ಹಿಗ್ಗು. ಅಲ್ಲದೆ ನಾಳೆಯೇ ಅಣ್ಣ ಲಾರೆನ್ಸ್‌ನೊಡನೆಯೇ ಹೋಗುವ ಉತ್ಸುಕತೆಯೂ ಈತನಲ್ಲಿ ಕಂಡುಬರುತ್ತಿದೆ."

ತನ್ನತ್ತಿಗೆಯಾದರೋ ಸತ್ಯವನ್ನೇ ಹೇಳುತ್ತಿದ್ದಳು ಎಂದು ಜಾರ್ಜ್ ಮನಸ್ಸಿನಲ್ಲೇ ಅಂದುಕೊಂಡನು. ಇವರೊಡನೆ ವೇಕ್‌ಫೀಲ್ಡ್‌ನಲ್ಲೇ ಆತ ತನ್ನ ಹೆಚ್ಚಿನ ಸಮಯವನ್ನು ಕಳೆದಿದ್ದರೂ ಮೌಂಟ್ ವೆರ್ನಾನ್ ಆತನಿಗೆ ತುಂಬಾ ಹಿಡಿಸಿದ ಜಾಗವಾಗಿತ್ತು. ಉಪಾಹಾರವನ್ನು ಮುಗಿಸಿ ಆಸ್ಟಿನ್ ಎದ್ದನು.

"ಜಾರ್ಜ್, ಫೀಬಸ್ ಕುದುರೆಯನ್ನು ಇಂದಲ್ಲವೆ, ನೀನು ಸವಾರಿ ಮಾಡಿ ಸಾಧುಮಾಡುವೆನೆಂದು ಮಾತನ್ನಿತ್ತುದು? ಬಾ, ನೋಡೋಣ, ಲಾಯಕ್ಕೆ ಹೋಗೋಣವಂತೆ", ಎಂದು ತಮ್ಮಂದಿರಿಂದ ಅನುಸರಿಸಲ್ಪಟ್ಟು ಲಾಯಕ್ಕೆ ಆಸ್ಟಿನ್ ತೆರಳಿದನು.

ಲಾಯದ ಹತ್ತಿರ ನೀಗ್ರೋ ಆಳು ಮಕ್ಕಳು ಪಿಸುಗುಟ್ಟುತ್ತ ಆಡ್ಡಾಡುತ್ತಿದ್ದರು. ಅವರು ಕೆಲವರು ಸೇರಿ ಲಾಯದಿಂದ ಪುಷ್ಟವಾದ ಎರಡು ವರ್ಷದ ಕಂದು ಚುಕ್ಕೆಯ ಫೀಬಸನ್ನು ಹಿಡಿದು ಎಳೆದುತಂದರು.

ಇವರೆಲ್ಲರನ್ನೂ ಮಣ್ಣುಮುಕ್ಕಿಸಿಯೇನು ಎಂಬ ರೀತಿಯಿಂದ ಕುದುರೆಯು ಹಗ್ಗಗಳನ್ನು ಜಗ್ಗುತ್ತಲಿತ್ತು.

ಜೇಬಿನಿಂದ ಬಾರ್ಲಿಯ ಸಿಹಿಕಡ್ಡಿಯನ್ನು ತೆಗೆದು ಕುದುರೆಯ ಬಾಯಿಗೆ ಕೊಡುತ್ತ ಅದರ ಕತ್ತನ್ನೂ, ತಲೆಯನ್ನೂ ತಿಕ್ಕುತ್ತ ಅದರ ಕಿವಿಗಳಲ್ಲಿ ಪಿಸುಗುಟ್ಟುವಂತೆ ನಟಿಸುತ್ತ ಫಕ್ಕನೆ ಜಾರ್ಜ್ ಅದರ ಜೀನು, ಕಡಿವಾಣಗಳನ್ನು ಅಮುಕಿ, ಅದರ ಮೇಲೆ ನೆಗೆದು ಕುಳಿತನು.

ಕೂಡಲೇ ಕುದುರೆಯು ಒಂದೇ ದೌಡಿನಿಂದೆಂಬಂತೆ ಅಂಗಣದಿಂದ ಹೊರಕ್ಕೆ ಹಾರಿ, ಹುಲ್ಲುಗಾವಲಿನಲ್ಲಿ ಸ್ವಚ್ಛಂದವಾಗಿ, ಹುಚ್ಚು ಹುಚ್ಚಾಗಿ ಓಡಲಾರಂಭಿಸಿತು. ಯಾವನಿಗೂ ತಾನು ಮಣಿಯೆನು ಎಂಬ ಕುದುರೆಯ ಹಟ, ಹುಚ್ಚು ಓಟ ಒಂದೆಡೆ, ಇದರ ಆಸೆಯನ್ನು ಮಣ್ಣು ಗೂಡಿಸಿ ಅದನ್ನು ಪೂರ್ಣ ಹಣ್ಣುಮಾಡಿಯೇ ಮಾಡುವೆನೆಂಬ ಬಾಲಕನ ಛಲ ಇವುಗಳ ತುಮುಲವು ಸಾಕಷ್ಟು ರೋಮಾಂಚಕಾರಕ ಸನ್ನಿವೇಶ ವನ್ನೇ ಕಲ್ಪಿಸಿತು. ಆಗಸ್ಟಿನ್ ತನ್ನ ಚಿಕ್ಕ ಮಲ ತಮ್ಮನನ್ನು ಮುಂದೆ ಮಾಡಿಕೊಂಡು ಬೇಲಿಯ ಹತ್ತಿರ ಬಂದು ಈ ತುಮುಲವನ್ನು ಸಾಕೂತ ವಾಗಿಯೂ ಸಾಶಂಕನಾಗಿಯೂ ಪರೀಕ್ಷಿಸಲು ಅನುವಾದನು. ಸ್ವಲ್ಪ ಸಮಯದಲ್ಲೇ ಕುದುರೆಯು ಓಡುತ್ತೋಡುತ್ತ ದೂರದ ದಿಬ್ಬದ ಹಿಂಗಡೆ ಮರೆಯಾಯಿತು. ಸಾಧಾರಣ ಅರ್ಧಗಂಟೆ ಕಳೆದನಂತರ ಕುದುರೆಯೂ ಸವಾರನೂ ಬಾಗುತ್ತ, ಬಳುಕುತ್ತ, ಕುಗ್ಗುತ್ತ, ಕುಸಿಯುತ್ತ, ಕುದುರೆಯು ಅತೀವ ದಣಿವಿನಿಂದ ಜೊಲ್ಲನ್ನು ಕಕ್ಕುತ್ತಲೂ, ಅಂಗಣವನ್ನು ಪ್ರವೇಶಿ ಸಿದರು. ಮೊದಲು ಭರದಿಂದ ಓಡಿದ ಕುದುರೆಯು ಈಗ ಅಷ್ಟೇ ಉದಾ ಸೀನದಿಂದ ನಿಂತು ಬಿಟ್ಟಿತು.

'ತಮ್ಮ ಭಲೇ! ಭೇಷ್!' ಎಂದು ಅಭಿಮಾನದಿಂದಲೂ ಸಂತೋಷ ದಿಂದಲೂ ಆಸ್ಟಿನ್ ಉದ್ಗಾರ ತೆಗೆದನು.

ತನ್ನದೇನೂ ಮಹಾಸಾಹಸವಲ್ಲವೆಂಬ ವಿನಯದಿಂದಲೇ ಜಾರ್ಜ್ "ಸವಾರಿಗೆ ಫೀಬಸ್ ಯೋಗ್ಯವಾಗಿದೆ, ಇನ್ನೂ ಒಂದೆರಡು ಬಾರಿ ಅಭ್ಯಾ ಸಮಾಡಿಸಿದರೆ ಯಾವ ತೊಂದರೆಯೂ ಬರದು" ಎಂದನು. ಮಾತ್ರ ವಲ್ಲದೆ ಮತ್ತೂ ತನ್ನ ಹೊಗಳಿಕೆಯನ್ನು ತಪ್ಪಿಸಲು, 'ಮರೆತೇ

ಹೋಯಿತು, ಅಣ್ಣ ಲಾರೆನ್ಸ್ ಈಗ ಬರುವನಲ್ಲವೆ?' ಎಂದು ಮಾತಿನ ವಿಷಯ ಬದಲಾಯಿಸಿದನು.

ಅಷ್ಟರಲ್ಲೇ ದೂರದ ದಿಬ್ಬದಾಚೆಯಿಂದ ಕುದುರೆಗಳ ಜೀನು ಕಡಿವಾಣಗಳ ಕಿರುಗಂಟೆಗಳ ಸದ್ದೂ ಖುರಪಟ ಧ್ವನಿಯೂ ಕೇಳ ಬಂದುವು. ಎಲ್ಲರೂ ಅದನ್ನು ಕಿವಿಗೊಟ್ಟು ಕೇಳುತ್ತಿದ್ದಂತೆ ಸದ್ದಿನ ಶ್ರುತಿಯೂ ಏರುತ್ತ ಸವಾರರೂ ಅತ್ತ ಬರುತ್ತಿರುವುದನ್ನೇ ಸೂಚಿಸಿತು. ಅತಿಥಿಯನ್ನು ಇದಿರುಗೊಳ್ಳಲು ಮನೆಯೊಡತಿಯು ತನ್ನ ಆಳುಗಳ ಪರಿವಾರದೊಂದಿಗೆ ಸನ್ನಿಹಿತಳಾದಳು. ಅವಳ ಹಿಂದೆಯೇ ಜಾರ್ಜನೂ ತನ್ನ ಅಣ್ಣನನ್ನೂ ಅವನನ್ನು ಹೊತ್ತಿರುವ ಕಂದು ಬಣ್ಣದ ಕುದುರೆಯನ್ನೂ ದೃಷ್ಟಿಸುತ್ತ ನಿಂತನು. ಅಣ್ಣನ ಹಿಂದೆ ಇಬ್ಬರು ನೀಗ್ರೋ ಆಳುಗಳು ತಮ್ಮ ಕುದುದುರೆಗಳ ಮೇಲೆ ಲಾರೆನ್ಸ್‌ನ ಸಾಮಾನುಗಳ ಹೊರೆಗಳನ್ನು ಹೊತ್ತು ಬರುತ್ತಿದ್ದರು. ಅಂಗಣವನ್ನು ಸಮೀಪಿಸಿದೊಡನೆಯೇ, ಲಾರೆನ್ಸ್ ಇಳಿದು, ಆಳು ಮಗನಿಗೆ ತನ್ನ ಕುದುರೆಯ ಕಡಿವಾಣಗಳನ್ನೊಪ್ಪಿಸಿದನು. ತನ್ನ ಹೇಟನ್ನೆತ್ತಿ ಮುಗುಳು ನಗುತ್ತ ತನ್ನನ್ನು ಸ್ವಾಗತಿಸಲು ನಿಂತ ಅತ್ತಿಗೆ ಮತ್ತಿತರರನ್ನು ಈಕ್ಷಿಸಿದನು. ಅಷ್ಟರಲ್ಲೇ ಜಾರ್ಜ್ "ಅಣ್ಣಾ ಸ್ವಾಗತ" ಎಂದು ಪ್ರೀತಿಯಿಂದಲೂ ಅಭಿಮಾನದಿಂದಲೂ ಜೋರಾಗಿ ಘೋಷಿಸಿದನು.

ಧಾರಾಳವಾದ ನಗುವಿನಿಂದಲೇ ತಮ್ಮನ ಸ್ವಾಗತವನ್ನು ಸ್ವೀಕರಿಸುತ್ತ, ಲಾರೆನ್ಸ್ ಆಗಸ್ಟಿನ್‌ನೊಂದಿಗೆ ಬೈಠಕನ್ನು ಪ್ರವೇಶಿಸಿದನು. ಅಣ್ಣತಮ್ಮ ಇಬ್ಬರೇ ಅಲ್ಲಿ ಉಳಿದರು. ಇದೇ ಸಮಯವನ್ನು ಕಾದಿದ್ದ ಜಾರ್ಜ್ ಮೆಲ್ಲನೆ ಬೈಠಕನ್ನು ಪ್ರವೇಶಿಸಿ ತನ್ನಣ್ಣಂದಿರ ದೃಷ್ಟಿಗೆ ಬಿದ್ದನು.

"ಹೇಗಿರುವೆ ಜಾರ್ಜ್? ನಿನ್ನ ಪಾಠಗಳೂ ಲ್ಯಾಟಿನ್ ಅಧ್ಯಯನವೂ ಹೇಗೆ ಸಾಗಿರುತ್ತವೆ?" ಎಂದು ಲಾರೆನ್ಸ್ ಪ್ರಶ್ನಿಸಲು, ಕ್ಷಣಕಾಲ ಜಾರ್ಜ್ ನಿರುತ್ತರನಾದನು, ತಲೆ ತಗ್ಗಿಸಿ ನಿಂತನು. ಇದನ್ನೀಕ್ಷಿಸಿ ಅಣ್ಣಂದಿರಿಬ್ಬರೂ ಅರ್ಥಪೂರ್ಣವಾಗಿ ಮುಗುಳು ನಗುವುದನ್ನು ಕಂಡ ಜಾರ್ಜ್ ತನ್ನ ಮನಸ್ಸಿನಲ್ಲಿನ ಉದ್ವೇಗವನ್ನೆಲ್ಲ ತಡೆಹಿಡಿಯುತ್ತಾ, "ಹಾಂ, ಕೆಲವು ವಿಷಯಗಳನ್ನು ಚೆನ್ನಾಗಿ ಅಭ್ಯಾಸ ಮಾಡಿರುತ್ತೇನೆ,

ನಕ್ಷೆಗಳನ್ನಂತೂ ಚೆನ್ನಾಗಿ ನಕಲು ತೆಗೆಯಬಲ್ಲೆ, ಕ್ಷೇತ್ರಮಿತಿ (ಸರ್ವೆ, survey)ಯ ಅಭ್ಯಾಸವು ಸುಗಮವಾಗಿ ನಡೆದಿದೆ, ಅದೇನು ಲ್ಯಾಟಿನ್ ಕಲಿತರೇನೇ ಸರ್ವಸ್ವವೆ?" ಎಂದು ಉತ್ತರಿಸಿದನು. ತನ್ನ ಉತ್ತರವನ್ನಾದರೋ ಅಣ್ಣನು ಅನುಕಂಪದಿಂದಲೇ ಆಲಿಸುವುದನ್ನು ಗಮನಿಸಿ, ಸ್ವಲ್ಪ ಉತ್ತೇಜನದಿಂದಲೇ ಮತ್ತೂ ಖಂಡಿತವಾಗಿ ನುಡಿಯಲಾರಂಭಿಸಿದನು 'ಅಣ್ಣಾ ಲಾರೆನ್ಸ್ ನಾನು ಸರ್ವೆ ಕಲಿತರೇನು? ಅದು ನನಗೆ, ತುಂಬಾಹಿಡಿಸುತ್ತದೆ. ಲ್ಯಾಟಿನ್‌ನಲ್ಲಿ ನನಗೆ ಆಸಕ್ತಿಯುಎಳ್ಳಷ್ಟೂ ಇಲ್ಲ."

ಇಷ್ಟರಲ್ಲಿ ಊಟಕ್ಕೆ ಕರೆಯು ಬಂದಿತು. 'ನೋಡೋಣವಂತೆ", ಎಂದು ಸ್ನೇಹಪೂರ್ಣವಾಗಿ ಜಾರ್ಜನ ಮೇಲೆ ಕೈಯಾಡಿಸುತ್ತಾ ಲಾರೆನ್ಸ್ ಊಟಕ್ಕೆದ್ದನು.

ಊಟದ ವೇಳೆ, ಜಾರ್ಜನ ಸಿಟ್ಟು ಉದ್ವೇಗಗಳೆಲ್ಲವೂ ಮರೆಯಾಗಿದ್ದುವು. ಅಣ್ಣನೊಡನೆ, "ನಿಮ್ಮತ್ತ ಎಲ್ಲರೂ ಕ್ಷೇಮವೆ?, ಫೇರ್ ಫೇಕ್ಸ್ ದಂಪತಿಗಳೂ ಅವರ ಮಗನೂ ಕ್ಷೇಮಿಗಳೆ?" ಎಂದು ಕುತೂಹಲದಿಂದ ಪ್ರಶ್ನಿಸಿದನು,

"ಎಲ್ಲರೂ ಕ್ಷೇಮ. ಅವರು ಯಾವಾಗಲೂ ನಿನ್ನ ಕುರಿತು ಪ್ರಶ್ನಿಸುವುದಿದೆ. ಅವರ ಹಿರಿಯ ಮಗ ಜಾರ್ಜನೂ ಇಂಗ್ಲಂಡದಿಂದ ಬಂದಿರುತ್ತಾನೆ. ವಿಲಿಯಮರ ಭ್ರಾತೃಪ್ಪನೂ ಅವರೊಡನೆಯೇ ವಾಸಿಸಿದ್ದಾರೆ. ಬಹುಶಃ ನೀನು ನಮ್ಮಲ್ಲಿಗೆ ಬಂದಾಗ ನಿನಗೂ ಬೇಟೆಯ ಸುಯೋಗ ಸಿಗಲಿದೆ" ಎಂಬ ಸ್ನೇಹಪೂರ್ಣವಾದ ಉತ್ತರವು ಬಂದಿತು.

ಅಭಿಮಾನದಿಂದ ಜಾರ್ಜನ ಮುಖವು ಕೆಂಪಡರಿತು, ಒಳಗೊಳಗೇ ಸಂತಸವೂ ಉಕ್ಕಿ ಮನದಾಸೆಯನ್ನು ಆತನಿಗೆ ತಿಳಿಯದಂತೆನೇ ನಾಲಗೆಯು, "ನಾನೆಂದು ಮೌಂಟ್ ವೆರ್ನಾನಿಗೆ ಬರಲಿ?" ಎಂಬ ಪ್ರಶ್ನೆಯ ಮೂಲಕ ಅರುಹಿತು.

ಹಾಗೆಯೇ ಅಣ್ಣಂದಿರ ಮಾತುಗಳಲ್ಲಿ ಅಲೆಗ್ಹಾನೀ ಪರ್ವತಾವಳಿಯ ಆಚೆ ಇರುವ ಭೂಮಿಯ ಪ್ರಸ್ತಾಪವು ಬಂದಿತು. ಜಾರ್ಜನ ದೃಷ್ಟಿಯಲ್ಲಿ ಇದೆಲ್ಲವೂ ನಂದನವನ. ಅಲ್ಲದೆ, ಅಣ್ಣ ಲಾರೆನ್ಸನೂ ಎಲ್ಲರಿಗಿಂತ ಶ್ರೇಷ್ಠ; ಈತನೇ ತನಗೆ ಅತ್ಯಂತ ಹಿತಕರವಾದ ಸನ್ನಿ

ವೇಶವನ್ನು ಕಲ್ಪಿಸಿಕೊಟ್ಟು ತನ್ನನ್ನು ಊರ್ಜಿತಕ್ಕೆ ತರಬಲ್ಲನು ಎಂದೂ ಈತ ಕನಸು ಕಾಣುತ್ತಿದ್ದನು.

ನಿಜಕ್ಕಾದರೂ ಲಾರೆನ್ಸ್ ಉದಾತ್ತನೇ ಆಗಿದ್ದನು. ವೆಸ್ಟ್ ಇಂಡೀಸ್ ದ್ವೀಪಗಳ ಕಾರ್ಟಾಜೀನಾ ಕದನದಲ್ಲಿ ಭಾಗವಹಿಸಿ ಹಿಂದಿರುಗಿದ ನಂತರ ಈತನಿಗೆ ತಂದೆಯು ಪೋಟೋಮೇಕ್‌ನಲ್ಲಿನ ಒಂದು ಭಾಗವನ್ನಿತ್ತನು. ಅಲ್ಲಿ ಈತನು ಒಂದು ಮನೆಯನ್ನು ಕಟ್ಟಿ, ಆ ಜಾಗವನ್ನು ತನ್ನ ಸೇನಾಧಿಕಾರಿ ವೆರ್ನಾನಿನ ಗೌರವಾರ್ಥವಾಗಿ ಅದೇ ಹೆಸರಿನಿಂದ ಕರೆದನು. ಫೇರ್‌ಫೇಕ್ಸ್ ಮನೆತನದ ಆನ್ ಫೇರ್‌ಫೇಕ್ಸನ್ನು ಮದುವೆಯಾದನಂತರ, ಆ ಭಾಗದ ಆಡಳಿತವೂ, ಈ ಭಾಗದಿಂದ ವಿಧಾಯಕ ಸಭೆಯಲ್ಲಿನ ಪ್ರಾತಿನಿಧಿತ್ವವೂ ಈತನಿಗೆ ದಕ್ಕಿದ್ದುವು. ತಂದೆಯಿಂದ ಮತ್ತು ಹೆಂಡತಿಯಿಂದ ಬಂದ ಇಪ್ಪತ್ತೈದು ನೂರು ಎಕ್ರೆ ಜಮೀನು, ದೊಡ್ಡ ಮನೆ, ಮನೆ ತುಂಬಾ ಆಳುಮಕ್ಕಳು ಇವೆಲ್ಲ ಸಂಪತ್ತಿಯಿದ್ದರೂ, ಸ್ವಲ್ಪ ದೇಹಾಲಸ್ಯ ಮತ್ತು ಹುಟ್ಟಿದೊಡನೆಯೇ ಸಾಯುತ್ತಿದ್ದ ಮಕ್ಕಳ ಕೊರಗು ಇವನನ್ನು ಯಾವಾಗಲೂ ಪೀಡಿಸುತ್ತಿದ್ದುವು.

ಊಟದ ನಂತರ ಜಾರ್ಜ್ ಮತ್ತು ತಮ್ಮ ಜಾಕಿ ಹೊರ ಅಂಗಣಕ್ಕೆ ಓಡಿ ಕ್ವೊಯ್ಟ್ಸ್ (quoits) ಆಡಲು ಆರಂಭಿಸಿದರು. ಆದರೆ ಅಣ್ಣ ಲಾರೆನ್ಸ್‌ನ ವಿಚಾರದಲ್ಲೇ ಮಗ್ನನಾಗಿದ್ದ ಜಾರ್ಜನನ್ನು ತಮ್ಮನು ಸುಲಭವಾಗಿ ಸೋಲಿಸಿದನು. "ನೋಡಿದೆಯೋ? ಪ್ರತಿಬಾರಿಯೂ ನೀನು ಗುರಿತಪ್ಪಿದೆ, ಗೆದ್ದವನು ನಾನು" ಎಂಬ ಬಾಲ್ಯ ಸಹಜವಾದ ಡಂಭದಿಂದ ಜಾಕಿಯು ತನ್ನ ವಿಜಯವನ್ನು ಸಾರಿದನು.

ಅಷ್ಟರಲ್ಲೇ ಅಣ್ಣ ಆಗಸ್ಟಿನ್ ತಮ್ಮತ್ತ ಬರುವುದನ್ನು ಕಂಡು ಬಾಲಕರಿಬ್ಬರೂ ಎದ್ದು ನಿಂತರು.

"ಜಾರ್ಜ್, ಲಾರೆನ್ಸ್ ಮತ್ತು ನಾನು ನಿನ್ನ ಭವಿಷ್ಯದ ಕುರಿತಾಗಿಯೂ ಮಾತಾಡುತ್ತಿದ್ದೆವು. ವಿವರಗಳನ್ನು ಅವನಿಂದಲೇ ಕೇಳುವೆ. ನಾಳೆ ಬೆಳಿಗ್ಗೆ ಅವನು ಹೊರಟುಹೋಗುವನು. ಆದುದರಿಂದ ಈಗಲೇ ಹೋಗಿ ವಿಚಾರಿಸು" ಎಂದು ಸ್ನೇಹಪೂರ್ಣವಾದ ಆಗಸ್ಟಿನ್‌ನ

ಆದೇಶವನ್ನು ಕೇಳಿ ಒಂದೇ ದೌಡಿನಿಂದ ಮನೆಸೇರಿ ಜಾರ್ಜ್ ಕದವನ್ನು ತಟ್ಟಿದನು. ಒಳಗೆ ಪ್ರವೇಶಿಸಿದೊಡನೆ, ಅಣ್ಣನ ಸಹಾನುಭೂತಿಪರ ಮಾತುಗಳು ಈತನಿಗೆ ಅಮೃತೋಪಮವಾಗಿ ಕೇಳಿಬಂದುವು. "ಸರಿ, ಜಾರ್ಜ್ ನೀನು ಕ್ಷೇತ್ರಮಿತಿ (ಸರ್ವೆ) ಯನ್ನೇ ಕಲಿಯುವುದು ಹಿತಕರ ವೆಂದು ನನಗೆ ಅನಿಸುತ್ತದೆ. ಇದರೊಡನೆ ಅವಶ್ಯವಾಗಿಯೂ ಖಡ್ಗವಿದ್ಯೆ ಮತ್ತಿತರ ಸೇನಾಸಂಬಂಧವಾದ ವಿದ್ಯೆಗಳನ್ನೂ ಕಲಿತರೇನೇ ಮುಂದಕ್ಕೆ ನನ್ನ ಬೆಂಬಲಕ್ಕೆ ಬರಬಲ್ಲೆ". ತನ್ನ ಕಾಮನೆಗಳೆಲ್ಲವೂ ಈಡೇರಿದುವು ಎಂಬ ಭಾವನೆಯಿಂದ ಬಾಲಕನು ಇದನ್ನು ಕೇಳುತ್ತಲೇ ಪುಲಕಿತ ನಾದನು.

ಈ ಮೇಲಿನ ಘಟನೆ ನಡೆದಾಗ, ಅಂದರೆ ಮೇ 1747ರ ವೇಳೆ, ಜಾರ್ಜ್ ವಾಶಿಂಗ್‌ಟನ್ ಕೇವಲ ಹದಿನೈದು ವರ್ಷ ಎರಡು ತಿಂಗಳು ವಯಸ್ಸಿನ ಬಾಲಕ. ಅಂದಿನಿಂದ ಕೇವಲ ಒಂದೇ ವರ್ಷದೊಳಗೆ ಈತ ತನ್ನ ಜೀವನದ ಸಾಹಸಪರ ಕಾರ್ಯಕ್ರಮಗಳಲ್ಲೊಂದನ್ನು ಕೈಗೊಳ್ಳಲು ಸಮರ್ಥನಾದನು.

ಅಧ್ಯಾಯ ೨

ತನ್ನ ಹ್ಯಾಟನ್ನೂ, ಕಂಠ ವಸ್ತ್ರವನ್ನೂ ಜಾರ್ಜ್ ತೆಗೆದು ಬದಿಗಿಡು ತ್ತಿದ್ದಂತೆಯೇ, 'ಸರಿ, ಇಂದೇನು ಬರೆದಿರುವೆ ತಮ್ಮಾ? ನೋಡೋಣ', ಎಂಬ ಸದ್ದು ಕೋಣೆಯ ಮೂಲೆಯಿಂದ ಕೇಳಿ ಬಂದಿತು. ತನ್ನ ಕೈಯ ಲ್ಲಿದ್ದ ಉಪಕರಣಗಳನ್ನೂ ಅವುಗಳನ್ನಿರಿಸುವ ಚಿಕ್ಕ ಮುಕ್ಕಾಲಿಯನ್ನೂ ಓರಣವಾಗಿ ಇಟ್ಟು, ಸದ್ದು ಬಂದತ್ತ ಜಾರ್ಜ್ ಮುಖವನ್ನು ಹೊರಳಿಸಿ ದನು.

"ಜಾರ್ಜ್, ಎಲ್ಲಿದೆ ನೋಡೋಣ? ಇಂದು ನೀನು ಬರೆದ ನಕ್ಷೆ ಯನ್ನು ನೋಡಬೇಕಲ್ಲ", ಎಂಬ ಆರನೆಯ ಬೇರನ್ ಫೇರ್‌ಫೇಕ್ಸರ ಆಜ್ಞೆಯು ಪುನಃ ಕೇಳಿಸಿತು.

ಅವಸರದಿಂದ ಅತ್ತ ಹೋಗಲೆಳಸಿದ ಜಾರ್ಜನ ಕಾಲಿಗೆ ತಾಕಿದ ಮಣೆಯೊಂದು ಜಾರುತ್ತ ನೆಲದ ಮೇಲೆ ಓಡಿ ಫೇರ್‌ಫೇಕ್ಸರ ಗಂಟಿಗೆ

ತಾಕಿತು; ಜಾರ್ಜನೂ ಮುಗ್ಗರಿಸಿ ಬೀಳುವಂತಾದನು. ಅಲ್ಲೇ ಸಾವರಿಸಿಕೊಂಡು ಗಾಬರಿಯಿಂದ, 'ತಪ್ಪಾಯಿತು, ಕ್ಷಮಿಸಿರಿ' ಎಂದು ಜಾರ್ಜ್ ಪ್ರಾರ್ಥಿಸಿದನು. ಹೆದರಿಕೆ ಮತ್ತು ನಾಚಿಕೆಗಳಿಂದ ಧ್ವನಿಯು ನಡುಗುತ್ತಿತ್ತು. ಮುದುಕ ಫೇರ್‌ಫೇಕ್ಸರಾದರೋ ಕ್ಷಮಾಪೂರ್ಣ ದೃಷ್ಟಿಯಿಂದ ನಗುತ್ತಲೇ ತನ್ನತ್ತ ಬರಲು ಸಂಜ್ಞೆ ಮಾಡಿದ ನಂತರ ಜಾರ್ಜ್ ಅವರ ಸಮೀಪಕ್ಕೆ ಬಂದು ಅವರ ಕೈಗಳ ಮೇಲೆ ತಾನೆಳೆದ ನಕ್ಷೆಯನ್ನಿಟ್ಟನು.

ಭೂತಗನ್ನಡಿಯೊಂದರ ಸಹಾಯದಿಂದ ಫೇರ್‌ಫೇಕ್ಸರು ನಕ್ಷೆಯನ್ನು ಪೂರ್ತಿಯಾಗಿ ಪರೀಕ್ಷಿಸಿದರು. "ನಕ್ಷೆಯು ಚೆನ್ನಾಗಿದೆ, ನಕ್ಷೆಯನ್ನೆಳೆಯುವುದರಲ್ಲಿ ಸಾಕಷ್ಟು ನಿಪುಣನಾದೆ" ಎಂದು ಸಮಾಧಾನವನ್ನು ವ್ಯಕ್ತಪಡಿಸಿದರು. ಅಷ್ಟರಲ್ಲೇ ಬೇರನರ ಮಗ ಜಾರ್ಜ್ ಫೇರ್‌ಫೇಕ್ಸನೂ ಚಿತ್ರವನ್ನು ತಾನು ನೋಡಲು ತೆಗೆದುಕೊಂಡು, ಅದನ್ನು ಪರೀಕ್ಷಿಸಿ, "ಚಿತ್ರವು ಸೊಗಸಾಗಿದೆ, ಎಲ್ಲ ಭಾಗಗಳೂ ಸರಿಯಾಗಿ ಚಿತ್ರಿಸಲ್ಪಟ್ಟವೆ. ಇದೋ ಇದೇ ಸೌತ್ ಮೆಡೋ" ಎಂದು ತನ್ನ ತಂದೆಯ ಅಭಿಪ್ರಾಯವನ್ನು ಅನುಮೋದಿಸಿದನು.

ಲೋರ್ಡ್ ಫೇರ್‌ಫೇಕ್ಸರು ಕೆಲವು ವರ್ಷಗಳ ಹಿಂದೆ ಬ್ಲೂರಿಡ್ಜ್ (Blue Ridge) ಪರ್ವತಗಳಾಚೆಗೆ ಇರುವ ಶೆನೋಡೋ ಕಣಿವೆಯಲ್ಲಿನ ಭೂಮಿಗಳನ್ನೆಲ್ಲ ಅಳೆದು ನಕ್ಷೆಗಳನ್ನು ತಯಾರಿಸಬೇಕೆಂದು ಸಂಕಲ್ಪಿಸಿದ್ದರು. ಈ ಕಾರ್ಯದಲ್ಲಿ ಇವರ ಭ್ರಾತೃವ್ಯನೊಬ್ಬನ ಮಗನೂ ಮತ್ತಿತರ ಸರ್ವೆ ಕೆಲಸದವರೂ ನಿಯೋಜಿತರಾಗಿದ್ದರು. ಇವರೊಡನೆ ತಾನೂ ಸೇರಿದರೆ ಒಳ್ಳೆಯದು ಎಂಬ ಭಾವನೆಯು ಜಾರ್ಜನಲ್ಲಿತ್ತು. ಅದನ್ನು ಅವನು ತನ್ನಣ್ಣನ ಹತ್ತಿರ ವ್ಯಕ್ತಪಡಿಸಿದ್ದನು. ಆದರೆ ಇಂದು ಹಿರಿಯರು ತಾನೆಳೆದ ನಕ್ಷೆಗೆ ಕೊಟ್ಟ ಪ್ರಶಂಸೆಯು ಪುನಃ ಮನಸ್ಸಿನ ಆಸೆಯನ್ನು ಚಿಗುರಿಸಿತು. ಹಿರಿಯರೊಡನೆ ಹೆಚ್ಚಿನ ಸಲುಗೆಯನ್ನೂ ಒದಗಿಸಿತು.

ಹೀಗೆ, ದಿನಗಳು ಕಳೆದಂತೆ, ಜಾರ್ಜನ ಅವಕಾಶಗಳ ದಿಗಂತವು ವಿಶಾಲವಾಗುತ್ತ ಹೋಗುತ್ತಿತ್ತು. ದಿನವೂ ಬೇಟೆ, ಒಂದಲ್ಲ ಒಂದು

ವಿಚಾರಗೋಷ್ಠಿ ಮತ್ತು ಹಿರಿಯರೊಡನೆ ಒಡನಾಟ ಇವೆಲ್ಲವೂ ಈ ಚಿಕ್ಕ ಹುಡುಗನಲ್ಲಿ ತಕ್ಕಷ್ಟು ಏಕಾಗ್ರತೆಯನ್ನೂ, ವ್ಯವಹಾರ ಕೌಶಲವನ್ನೂ ಒದಗಿಸಿದುವು. ಬೆಲ್ವೊಯ್ರ್‌ನಲ್ಲಿ ಇತರ ಆಕರ್ಷಣೆಗಳಾಗಲೀ, ಹೆಂಗಸರ ಕೂಟಗಳಾಗಲೀ ಅಥವಾ ವಿಲಾಸ ಪರಜೀವನದ ಛಾಯೆಯಾಗಲೀ ಕಂಡು ಬರುತ್ತಿದ್ದಿಲ್ಲ. ಇದರ ಫಲವಾಗಿಯೂ, ಬಾಲಕ ಜಾರ್ಜನಲ್ಲಿ ಹೆಚ್ಚಿನ ಕಾರ್ಯಪರ ಶ್ರದ್ಧೆಯು ಸಮನಿಸಿತು ಎನ್ನಬಹುದು.

ಫೇರಫೇಕ್ಸರ ಸೌಧದಲ್ಲಿ ನಡೆಯುತ್ತಿದ್ದ ವಿಹಾರಕೂಟಗಳಲ್ಲೆಲ್ಲಾ ಜಾರ್ಜ್‌ಮೇಸನನಷ್ಟು ಪ್ರಭಾವಪೂರ್ಣ ವ್ಯಕ್ತಿತ್ವವು ಯಾವನದೂ ಆಗಿರಲಿಲ್ಲ. ಈತನಷ್ಟು ಸುಸಂಸ್ಕೃತನೂ ಮೇಧಾವಿಯೂ ಅಂದಿನ ತೋಟಗಾರರಲ್ಲಿ, ಜಮೀನ್ದಾರರಲ್ಲಿ ಯಾವನೂ ಇರಲಿಲ್ಲವೆನ್ನಬಹುದು. ತಂಬಾಕು ಬೆಳೆಯೊಡನೆ ಇತರ ಬೆಳೆಗಳನ್ನು ಪರ್ಯಾಯವಾಗಿ ಬೆಳೆಸಿ, ಈತನು ಆಗಲೇ ಕೃಷಿಯ ಆವರ್ತಕ್ರಮವನ್ನು ಕೈಗೊಂಡು ತನ್ನ ದೂರದರ್ಶಿತ್ವವನ್ನು ಪ್ರಕಟಿಸಿದ್ದನು ಎನ್ನಬಹುದು.

ಒಂದು ದಿನ ಊಟದ ನಂತರ ಮೌಂಟ್ ವೆರ್ನಾನಿಗೆ ಹೋಗುತ್ತಿರುವ ವೇಳೆ, ಲಾರೆನ್ಸ್ ತನ್ನ ತಮ್ಮನೊಡನೆ, "ಜಾರ್ಜ್ ಸರ್ವೆ ಪಾರ್ಟಿಯೊಂದಿಗೆ ನೀನೂ ಇರತಕ್ಕುದು ಎಂದು ಲಾರ್ಡ್ ಫೇರ್‌ಫೇಕ್ಸರು ವಿಧಿಸಿದ್ದಾರೆ. ಅಲ್ಲದೆ, ದಿನವೊಂದರ ಡಬ್ಲೂನಿನಂತೆ (doubloon) ಸಂಬಳವನ್ನೂ ನಿನಗೆ ನಿಶ್ಚಯಿಸಿದ್ದಾರೆ", ಎಂದನು.

ಆಗ ಆಶ್ರಿತ ರಾಜ್ಯಗಳಲ್ಲೆಲ್ಲಾ ಹಣದ ಅಭಾವವಿತ್ತು. ಜನರು ತೆರಿಗೆಯನ್ನಾಗಲೀ, ಸಾಲಗಳನ್ನಾಗಲೀ ತಂಬಾಕಿನ ಪಾವತಿಯಿಂದಲೇ ಸಂದಾಯಮಾಡಬಹುದೆಂಬ ಶಾಸನವೂ ಪ್ರಚಲಿತವಿತ್ತು. ಸಾವಿರಗಟ್ಟಳೆ ಮೌಲ್ಯದತನಕ ಇಂಥ ವಸ್ತು ವಿನಿಮಯಾದಿಗಳಿಂದಲೇ ಎಲ್ಲ ವ್ಯವಹಾರವೂ ಸಾಗಬಹುದಿತ್ತು. ಇಂಥ ಕಾಲದಲ್ಲಿ ಡಬ್ಲೂನ್ (7·20 ಡಾಲರ್ ಹಣ) ಸಂಬಳವೆಂದರೆ ಕಮ್ಮಿ ಹಣವಾಗಿರಲಿಲ್ಲ. ತನ್ನ ಹದಿನಾರನೆಯ ವರ್ಷದಲ್ಲೇ ದಿನಕ್ಕೆ ಇಷ್ಟು ಸಂಬಳವೆಂದರೆ ಜಾರ್ಜನಿಗೆ ಎಷ್ಟು ಆಶ್ಚರ್ಯವಿರಬೇಡ!

ಈ ಸರ್ವೆಗಾರರ ಸಂಗಡವಂತೂ ಫ್ರೆಡರಿಕ್ ಟೌನಿಗೆ (ಅದರ ಈಗಿನ ಹೆಸರು ವಿಂಚೆಸ್ಟರ್) 11—3—1748ರಂದು ಪ್ರಯಾಣ ಬೆಳೆಸಿತು. ಅಲ್ಲಿನ ಏರುಪೇರು, ಹಳ್ಳದಿಬ್ಬ, ಕಾಸಾರ ಕೊಂಪೆಗಳೆಲ್ಲವೂ ಹಿರಿಯ ಮಂದಿಗೆ ಹೊಸತಲ್ಲವಾದರೂ ಇವನ್ನು ಹಾದುಹೋಗುತ್ತ ಜಾರ್ಜ್ ವಾಶಿಂಗ್‌ಟನ್ ಮತ್ತು ಫೇರ್‌ಫೇಕ್ಸರು ಈ ಪ್ರಯಾಣದಿಂದ ತುಂಬಾ ಹೊಸ ಅನುಭವಗಳನ್ನು ಪಡೆದರು. ಕೆಲವು ಸನ್ನಿವೇಶಗಳು ಇವರಿಗೆ ರೋಮಾಂಚವನ್ನೇ ಉಂಟುಮಾಡುತ್ತಿದ್ದುವು.

ಬಿಡುವಿದ್ದಾಗಲೆಲ್ಲಾ ಜಾರ್ಜ್ ಸುತ್ತುಮುತ್ತಲಿನ ಭೂಮಿಯ ಪರಿಚಯವನ್ನು ಮಾಡಿಕೊಳ್ಳುತ್ತಿದ್ದನು. ಕೆಲವು ವರ್ಷಗಳ ಹಿಂದೆ ಈ ಕಣಿವೆಯ ಭಾಗವನ್ನೆಲ್ಲ ಬ್ರಿಟಿಶ್ ಅರಸನು ಫೇರಫೇಕ್ಸರ ಹಿರಿಯರಿಗೆ ದಾನರೂಪವಾಗಿ ಕೊಟ್ಟಿದ್ದನು. ಅದರಲ್ಲಿ ವಾಸಿಸಲು ಈಗ ಸ್ಕಾಟ್‌ಲೇಂಡ್, ಐಯರ್‌ಲೇಂಡ್ ಮತ್ತು ಜರ್ಮನಿಯಿಂದ ಅನೇಕ ಜನರು ಬಂದಿದ್ದರು. ಈ ಕುಟುಂಬಗಳಿಗೆ ಭೂಮಿಯನ್ನು ಹಂಚಿಕೊಡುವುದೇ ಈ ಸರ್ವೆಗಾರರ ಮುಖ್ಯ ಕೆಲಸವಾಗಿತ್ತು. ಆದರೆ ಕಾಡುಗಳನ್ನು ಕಡಿದು, ಆ ಭೂಮಿಯನ್ನೆಲ್ಲ ಕೃಷಿಯೋಗ್ಯವನ್ನಾಗಿ ಮಾಡುವ ಕಷ್ಟತರ ಕಾರ್ಯವನ್ನೆಲ್ಲ ಆ ದೇಶದ ಮೂಲನಿವಾಸಿಗಳೇ ಮಾಡಬೇಕಿತ್ತು. ಇದೆಂಥ ಕಷ್ಟಸಾಧ್ಯವಾದ ಕೆಲಸ! ಎಂಬುದು ಕಿರಿಯ ಜಾರ್ಜನ ಮನಸ್ಸಿಗೂ ನಾಟದಿರಲಿಲ್ಲ.

ಒಮ್ಮೆ ದೊಡ್ಡದೊಂದು ಓಕ್ ವೃಕ್ಷವನ್ನು ಉರುಳಿಸುವ ಕೆಲಸದಲ್ಲಿ ನಿಯುಕ್ತರಾದ ಮಂದಿ ಪಟ್ಟ ಕಷ್ಟವನ್ನು ಪ್ರತ್ಯಕ್ಷವಾಗಿ ಕಂಡ ಜಾರ್ಜ್, ತನ್ನಲ್ಲೇ, "ಇತರರಿಗಾಗಿ ನಾನಾದರೂ ಇಂಥ ಕಷ್ಟವನ್ನು ಅನುಭವಿಸಿಯೇನೆ?" ಎಂದು ಪ್ರಶ್ನಿಸಿದನು. ಆದರೆ, ತಾವು ಬಿಳಿ ಮನುಷ್ಯರು, ಬಿಳಿಮನುಷ್ಯರೇ ಭೂಮಿಯ ಒಡೆತನವನ್ನು ಸಂಪಾದಿಸಿದವರು ಎಂಬ ಅಭಿಮಾನವು ಈ ಶಂಕೆಯನ್ನು ಹಿಮ್ಮೆಟ್ಟಿಸಿತು. ಇನ್ನೊಂದು ದಿನ ತನ್ನ ಸರ್ವೆಯ ಉಪಕರಣ-ದೂರದರ್ಶಕದ ಮೂಲಕ ಪರೀಕ್ಷಿಸುವಾಗ, ದೂರದಲ್ಲಿ ಮೆಹಗೊನಿ (mahogany) ಯ ಕೆಂಬಣ್ಣವುಳ್ಳ ತಲೆಯ ಮೇಲೆ ಉದ್ದನಾದ ಗರಿಗಳನ್ನು ಧರಿಸಿದ

ಆರೆಬತ್ತಲೆ ರೆಡ್ ಇಂಡಿಯನರ—ಮೂಲನಿವಾಸಿಗಳ ಗುಂಪೊಂದು ಗೋಚರಿಸಿತು. 'ಅದೋ ರೆಡ್ ಇಂಡಿಯನರು' ಎಂದು ತನ್ನ ಸಹಚರರಿಗೆ ಕೇಳುವಂತೆ ಉದ್ಗಾರ ತೆಗೆದನು.

ಎಲ್ಲರೂ ಆ ಗುಂಪಿದ್ದಲ್ಲಿಗೆ ಹೋಗಿ ಅವರೊಡನೆ ಸ್ನೇಹದಿಂದ ವರ್ತಿಸಿದರು. ಅವರಿಗೆ ಮಾನ್ಯವನ್ನಿತ್ತು ಸಲುಗೆಯನ್ನು ಸಂಪಾದಿಸಿ ನರ್ತಿಸುವಂತೆ ಕೇಳಿಕೊಂಡರು. ಅದೇ ದಿನ ಸಾಯಂಕಾಲ ಜಾರ್ಜ್ ತನ್ನ ಜೀವನದಲ್ಲೇ ಮೊದಲನೆಯ ಬಾರಿ ಅದ್ಭುತ ರೋಮಾಂಚಕಾರಕ ನರ್ತನವನ್ನು ಕಂಡನು. ಪೊಟೋಮೇಕಿನ ಶಾಂತ ವಾತಾವರಣದಲ್ಲಿ ಬೆಳೆದ ಈ ಚಿಕ್ಕ ಬಾಲಕನ ಜೀವನದಲ್ಲೆಲ್ಲಾ ಇದು ಪ್ರಪ್ರಥಮ ರುದ್ರಘಟನೆ ಎನ್ನುವಷ್ಟು ಭೀಕರವಾಗಿತ್ತು, ರೌದ್ರವಾಗಿತ್ತು ಅಂದಿನ ಸಂಜೆಯ ಸನ್ನಿವೇಶ: ಹಿಂಗಡೆ, ರಕ್ತದೋಕುಳಿ ಚೆಲ್ಲಿರುವ ಆಗಸ, ಮುಂದೆ ಕೆನ್ನಾಲಗೆಗಳಿಂದ ಜ್ವಲಿಸುವ ದೊಡ್ಡ ಅಗ್ಗಿಷ್ಟಿಕೆ, ನಡುವೆ ಬಿಚ್ಚುಗತ್ತಿಗಳನ್ನೂ ಈಟಿ, ಬರ್ಚಿಗಳನ್ನೂ ಎತ್ತಿ ಹಿಡಿದು ತಮ್ಮ ರಕ್ತತೃಷ್ಣೆಯನ್ನು ತಕ್ಕ ಕೈಕಾಟಗಳಿಂದಲೂ, ಹಾವಭಾವಗಳಿಂದಲೂ, ಭಯೋತ್ಪಾದಕ ಗರ್ಜನೆಗಳಿಂದಲೂ, ವ್ಯಕ್ತಪಡಿಸುತ್ತ ಕುಣಿಯುವ ರೆಡ್ ಇಂಡಿಯನರು, ಜೊತೆಗೆ ಇವರ ಕರುಳುಕತ್ತರಿಸುವಂಥ ರಣವಾದ್ಯಗಳ ಹಿಮ್ಮೇಳ—ಇವೆಲ್ಲವುಗಳ ರುದ್ರ ಗಂಭೀರ ಸನ್ನಿವೇಶವನ್ನು ಅವನು ಮತ್ತೆಂದಿಗೂ ಮರೆಯಲೇ ಇಲ್ಲ.

ಅಂತೂ ಬ್ಲೂರಿಡ್ಜ್ ಪ್ರಾಂತದಲ್ಲಿ ವಾಸಮಾಡುವ ವೇಳೆ ಜಾರ್ಜ್ ವಾಶಿಂಗ್‌ಟನ್ನಿನ ಮನಸ್ಸಿನ ಮಾರ್ದವವು ತಿದ್ದಲ್ಪಟ್ಟು ತಕ್ಕಂತೆ ಉನ್ನಯನ ಹೊಂದುತ್ತ ಹಿಂದಿರುಗುವ ವೇಳೆ ಬಾಲಕನಲ್ಲಿ ವಯಸ್ಸಿಗನುಗುಣವಾದ ಧೈರ್ಯ, ಶೌರ್ಯ ಮತ್ತು ಸಾಹಸ, ಗಾಂಭೀರ್ಯಗಳು ಮನೆಮಾಡಿದ್ದುವು.

ಜಾರ್ಜ್ ಶೆನೋಡೋ ಕಣಿವೆಯಲ್ಲಿನ ವಾಸಾನಂತರದಲ್ಲಿ ಫೇರ್‌ಫೇಕ್ಸರ ಕುಟುಂಬದಲ್ಲೇ ಒಬ್ಬನೆನ್ನುವಷ್ಟು, ಅವರಿಗೆಲ್ಲಾ ಬೇಕಾದವನೆನಿಸಿದನು. ಅಲೆಕ್ಸಾಂಡ್ರಿಯಾ ಪಟ್ಟಣದ ಸ್ಥಾಪನೆಯ ವಿಚಾರದಲ್ಲಿಯೂ ಈತನ ಸಲಹೆಗಳಿಗೆ ಪ್ರಾಶಸ್ತ್ಯ ದೊರಕಿತು. ತನ್ನ

ಸಂಪಾದನೆಯ ಹಣದಿಂದ ಫ್ರೆಡರಿಕ್‌ಪ್ರಾಂತ್ಯದಲ್ಲಿ ಒಂದು ಐದುನೂರು ಎಕ್ರೆ ಜಮೀನನ್ನು ಈತನು ಕೊಂಡಾಗ ಎಲ್ಲರಿಂದಲೂ ಗಣ್ಯನೆಂದೆನಿಸಿ ಕೊಂಡನು. ಇದೇ ಕಾರಣದಿಂದಲೇ ಅನೇಕ ಕನ್ಯಾಪಿತೃಗಳನ್ನು ಈತನು ಆಕರ್ಷಿಸಲಾರಂಭಿಸಿದನು ಎನ್ನಬಹುದು.

ಆದರೆ ತಾನು ಜಾರ್ಜ್ ಫೇರ್‌ಫೇಕ್ಸನಂತೆ ವಿದ್ಯಾವಂತನಲ್ಲ, ಓದಿದವನಲ್ಲ, ಫೇರ್‌ಫೇಕ್ಸರ ಲಘುಹಾಸ್ಯ ನಗೆಚಾಟಿಕೆ ಮತ್ತು ಸಂಭಾಷಣೆ ಚಾತುರ್ಯಗಳು ತನ್ನಲ್ಲಿಲ್ಲ ಎಂಬ ಒಂದು ಅತೃಪ್ತಿಯು ಜಾರ್ಜನಲ್ಲಿತ್ತು. ಈ ಎಲ್ಲ ವಿಶಿಷ್ಟ ಗುಣಗಳಿಂದಲೇ ಜಾರ್ಜ್ ಫೇರ್ ಫೇಕ್ಸನು ಕರ್ನಲ್ ವಿಲ್ಸನ್ ಕೇರಿಯವರ ಪುತ್ರಿಯನ್ನು ಆಕರ್ಷಿಸಿ ಅವಳನ್ನು ಮದುವೆಯಾಗಲು ಶಕ್ತನಾದುದು ಎಂದು ಆತನ ಅಂತ ರಾತ್ಮವು ಒಳಗಿಂದೊಳಗೇ ಗುಣುಗುಡುತ್ತಿತ್ತು.

ಇಷ್ಟರಲ್ಲೇ ಅಣ್ಣ ಲಾರೆನ್ಸ್ ತಮ್ಮನಿಗೆ ಖಡ್ಗವಿದ್ಯೆ ಮತ್ತು ಸೇನಾ ಶಾಸ್ತ್ರದ ಪಾಠಗಳನ್ನು ಕಲಿಸಲು ಜೇಕೊಬ್ ವ್ಹೋನ್ ಬ್ರಾಮ್ ಮತ್ತು ಮ್ಯೂಸ್ ಎಂಬಿಬ್ಬರನ್ನು ನೇಮಿಸಿದನು. ಇದನ್ನು ಕಲಿಯಲಾರಂಭಿಸಿದ ನಂತರ ಜಾರ್ಜನಿಗೆ ಬಿಡುವು ಸಿಗುತ್ತಲೇ ಇರಲಿಲ್ಲವೆನ್ನಬಹುದು. ಆದರೂ ದಿನಾಲೂ ಸ್ವಲ್ಪ ಸಮಯವನ್ನಾದರೂ ಈತನು ಫೇರ್‌ಫೇಕ್ಸರ ಸೌಧ ದಲ್ಲೇ ಕಳೆಯುತ್ತಲಿದ್ದನು. ಫ್ರೆಡರಿಕ್ ಟೌನಿನ ಈ ನೂತನ ಸೌಧ ವನ್ನು ಈತನು 'ಗ್ರೀನ್‌ವೇ ಕೋರ್ಟ್' ಎಂದು ಕರೆದನು.

ವಿಲಿಯಮ್ ಫೇರ್‌ಫೇಕ್ಸರ ಹೆಂಡತಿ 1749ರಲ್ಲಿ ತೀರಿಕೊಂಡರು. ಇದರಿಂದಾಗಿ ಕೆಲವು ಸಮಯ ಆಟ, ಬೇಟೆಗಳನ್ನು ನಿಲ್ಲಿಸಲಾಯಿತು ಅತ್ತ ಮೌಂಟ್ ವೆರ್ನಾನಿನಲ್ಲಿಯೂ ಅಣ್ಣ ಅತ್ತಿಗೆಯರಿಬ್ಬರೂ ಅಸ್ವಾಸ್ಥ್ಯ ದಿಂದ ಕ್ಷೀಣವಾಗುತ್ತಲಿದ್ದರು. ಈ ಕಾರಣಗಳಿಂದ ಜಾರ್ಜನ ಜೀವನ ದಲ್ಲಿ ಚಿಕ್ಕಪುಟ್ಟ ಬದಲಾವಣೆಗಳು ಕಂಡುಬಂದವು.

1749ರ ಜುಲೈ ಮಾಸದ ವೇಳೆ ಕುಲ್‌ಪೆಪ್ಪರ್ ಕೌಂಟಿಯಲ್ಲಿನ ಸರ್ವೆಯರನ ಕೆಲಸವು ಫೇರ್‌ಫೇಕ್ಸರ ಹಾಗೂ ತನ್ನ ಸಹೋದ ರರ ಸಹಾಯದಿಂದ ಜಾರ್ಜನಿಗೆ ಲಭಿಸಿತು. ಈ ಕೆಲಸಕ್ಕೆ ಅವಶ್ಯವಿ ರುವ ಅಕ್ಷರಜ್ಞಾನ, ದಿನಚರಿ ಬರೆಯುವಷ್ಟರ ಜ್ಞಾನ ಶಕ್ತಿಗಳು ಈತ

ನಿಗೆ ಇಲ್ಲದಿದ್ದರೂ, ಅಂದಿನ ದಿನಗಳಲ್ಲಿ ಜಾರ್ಜನ ಬುದ್ಧಿಶಕ್ತಿ, ಪ್ರಾಮಾಣಿಕತನಗಳು ಗಣಿತ, ವ್ಯಾಕರಣಗಳಿಗಿಂತ ಹೆಚ್ಚಿನ ಮನ್ನಣೆಯನ್ನು ಪಡೆಯುತ್ತಿದ್ದು ಜಾರ್ಜನನ್ನು ಈ ಕೆಲಸಕ್ಕೆ ಅರ್ಹನಾಗುವಂತೆ ಮಾಡಿದ್ದುವು ಎಂದು ಬೇರೆ ಹೇಳಬೇಕಿಲ್ಲ.

ಇಷ್ಟರಲ್ಲಿ ಮೇರಿಲೇಂಡಿನಿಂದ ಕರ್ನಲ್ ಥೋಮಸ್ ಕ್ರೆಸ್ಸಾಪ್ ಎಂಬವರೊಬ್ಬರು ವಿಲಿಯಮ್ಸ್‌ಬರ್ಗಿಗೆ ಬಂದು ಅಲ್ಲಿನ ಪಶ್ಚಿಮ ಭಾಗವನ್ನೆಲ್ಲ ದುರಸ್ತಿಗೊಳಿಸಿ ನೂತನ ಕಂಪೆನಿಯೊಂದನ್ನು ಅಲ್ಲಿ ಸ್ಥಾಪಿಸುವುದಾಗಿ ಘೋಷಿಸಿದರು. ಇದನ್ನು ಥಾಮಸ್‌ಲೀ ಮೊದಲಾದ ಹಿರಿಯರೆಲ್ಲರೂ ಸ್ವಾಗತಿಸಿದರೂ ತಾನು ಇದರಲ್ಲಿ ಶೇರುಗಳನ್ನು ಪಡೆಯಬೇಕೆಂದು ಜಾರ್ಜ್ ತೋರಿದ ಆತುರಕ್ಕೆ ಅವಕಾಶವು ಸಿಗಲಿಲ್ಲ. ಆದರೆ ಮುಂದಕ್ಕೆ ಅಂಥ ಅವಕಾಶವನ್ನೀಯುವುದಾಗಿ ಅಣ್ಣ ಲಾರೆನ್ಸ್ ಭರವಸೆಯನ್ನಿತ್ತನು. 'ಜಾರ್ಜನನ್ನು ವಿದ್ಯೆಗಾಗಿ ಇಂಗ್ಲಂಡಿಗೆ ಕಳುಹಿಸೋಣ' ಎಂಬ ಒಂದು ನೂತನ ಪ್ರಶ್ನೆಯು ಫೇರ್‌ಫೇಕ್ಸರ ಮನೆಯಲ್ಲಿ ಬಂದಿತ್ತು. ಇದನ್ನು ವಿರೋಧಿಸುತ್ತ ಫೇರ್‌ಫೇಕ್ಸರು ಗರ್ಜಿಸಿದ್ದರು.

''ಏನು? ಇಂಥ ಪ್ರಾಮಾಣಿಕ ಯುವಕನನ್ನು ಸ್ವೇಚ್ಛಾಚಾರಿಗಳ, ಮದ್ಯದ್ಯೂತಾದಿ ವ್ಯಸನಿಗಳ, ಹಾಳುಗೇಡಿಗಳ ನಾಡಿಗೆ ಕಳುಹುವಿರಾ? ಇಂದಿನ ಇಂಗ್ಲಂಡಿನಲ್ಲಿ ಈತನ ಸದ್ಗುಣಗಳೆಲ್ಲವೂ ಹೆಸರಿಲ್ಲದೆ ಹೋದಾವು. ತನ್ನ ಛಲ ಮತ್ತು ಇದಿರು ಸಿಟ್ಟನ್ನು ತಡೆಯಲು ಕಲಿತನೆಂದರೆ ಯಥೇಷ್ಟ ಸಾಕು'.

ಹೀಗೆ ಶಾಲೆಗಳ ಓದನ್ನು ಇತರರು ತಪ್ಪಿಸಿದರೂ ಕೂಡ, ಜಾರ್ಜನು ತನ್ನ ವಯಸ್ಸಿಗನುಗುಣವಾಗಿಯೇ ಎಂಬಂತೆ 'ರೋಮಾನ್ಸ್' (Romance)ನ ಶಾಲೆಯನ್ನು ಪ್ರವೇಶಿಸಲಾರಂಭಿಸಿದನು. ಇತರರನ್ನೂ ಮುಖ್ಯ ಹೆಣ್ಣನ್ನಾಕರ್ಷಿಸುವ ಹಂಬಲವು ಈತನಲ್ಲಿ ತಲೆದೋರಿತು. ಆದರೆ ಯಾವ ಹುಡುಗಿಯು ತನಗೆ ಹೆಚ್ಚು ಪ್ರಿಯಳು ಎಂಬ ತೀರ್ಮಾನಕ್ಕೆ ಬರುವುದು ಜಾರ್ಜನಿಗೇ ಕಷ್ಟವಾಗುತ್ತಿತ್ತು. ಬೆಟ್ಸಿಯಾಗಬಹುದೆ? ಅವಳಿಗಿಂತ ಲೂಸಿಯಾಗಬಹುದೆ' ಎಂದು ಮನಸ್ಸು ಡೋಲಾಯಮಾನವಾಗುತ್ತಲಿತ್ತು. ಚಾರ್ಲ್ಸ್ ಗ್ರೈಮ್ಸ್‌ನ ಮಗಳಾದ ಲೂಸಿಯು

ರೂಪವತಿಯೂ ಅಕ್ಷರಸ್ಥಳೂ ಇದ್ದಳು. ಅವಳಂತೆ ತಾನೂ ಓದಬೇಡವೆ?ಎಂಬುದರಿಂದ ಪ್ರೇರಿತನಾಗಿ ಈತನು ಸ್ಪೆಕ್ಟೇಟರ್(Spectator) ಪತ್ರಿಕೆಯನ್ನೋದಲು ಯತ್ನಿಸುತ್ತಿದ್ದನು.

ಇವನ ಹೃದ್ಗತವನ್ನರಿತು ಫೇರ್‌ಫೇಕ್ಸರೂ ಇವನಣ್ಣ ಲಾರೆನ್ಸನೊಡನೆ ಒಮ್ಮೆ ಹೀಗೆಂದರು, "ಇಗೋ ನೋಡು, ಜಾರ್ಜ್ ಪ್ರಾಯಭರಿತನಾಗುತ್ತಲಿರುವನು, ಸ್ತ್ರೀಯರೊಡನೆ ಕೂಡಬೇಕೆಂಬ ಹಂಬಲವು ಆತನಲ್ಲಿ ಸ್ಪಷ್ಟವಾಗುತ್ತಲಿದೆ. ಎಲ್ಲಾದರೂ ಆ ಕೃತಘ್ನ ಸ್ತ್ರೀಜಾತಿಗೆ ಈತನು ಬಲಿಬೀಳದಂತೆ ಪರಮಾತ್ಮನೇ ಕರುಣಿಸಬೇಕು", ಎಂದು ತನ್ನ ಅನುಕಂಪಮಿಶ್ರವಾದ ಸೂಚನೆಯನ್ನಿತ್ತರು.

ಕಣ್ಣೆವೆಗಳನ್ನು ಮುಚ್ಚಿ ಲಾರೆನ್ಸನೂ ಒಂದರೆಕ್ಷಣ ಚಿಂತಿಸುತ್ತ, "ಹೌದು, ಸ್ತ್ರೀಜಾತಿಯಿಂದಲೇ ಮಂತ್ರಮುಗ್ಧನಾದಂತೆ ಕಾಣುತ್ತಿದ್ದಾನೆ ಜಾರ್ಜ್. ಆಗರೆ ಪಾಪ, ಜಾರ್ಜ್ ಫೇರ್‌ಫೇಕ್ಸನಷ್ಟು ಅದೃಷ್ಟಶಾಲಿಯಾಗಬಲ್ಲನೆ ಈತ ಎಂದು ಶಂಕಿಸುತ್ತಿದ್ದೇನೆ" ಎಂದು ಮಾರ್ನುಡಿದನು.

"ಓಹೋ, ನನ್ನ ತಮ್ಮ (ಭ್ರಾತೃವು) ವಿಲಿಯಮನ ಹೆಂಡತಿ ಸತ್ತನಂತರ ಅದೇ ಹುಡುಗಿ ಸೇಲ್ಲಿ ಮಗನನ್ನು ಮದುವೆಯಾಗಿ ಮನೆಯೊಡತಿಯಾಗಿ ಎಲ್ಲ ಕಾರ್ಯವನ್ನೂ ನಿರ್ವಹಿಸುತ್ತಿದ್ದಾಳೆ. ಇಷ್ಟು ದಕ್ಷ ಮನೆಯೊಡತಿ ಲಭಿಸಿದುದು ನನ್ನ ತಮ್ಮ ಮತ್ತು ಆವನ ಮಗನ ಪುಣ್ಯವೇ ಸರಿ" ಎಂದು ಮುಹಡಿಯನ್ನೇರುತ್ತಾ ಫೇರ್‌ಫೇಕ್ಸರು ಅಂದರು.

ನಗುತ್ತ, "ಈ ಹೊಗಳಿಕೆಯೂ ಅಲ್ಪವೇ, ಅಷ್ಟು ಉತ್ತಮಳಿದ್ದಾಳೆ ಸೇಲ್ಲಿ" ಎಂದು ಮಾತು ಕೂಡಿಸುತ್ತ ತನ್ನ ಮೆಚ್ಚಿಗೆಯನ್ನು ಸೂಚಿಸಿದನು.

ಅದೇ ದಿನ, ಊಟದವೇಳೆ ಜಾರ್ಜ್‌ನ ಪಕ್ಕದಲ್ಲೇ ಅದೇ ಸೇಲ್ಲಿಯ ತಂಗಿ ಮೇರಿ ಕುಳಿತಿದ್ದಳು. ಅವಳನ್ನು ನೋಡಿ ಜಾರ್ಜ್ ಪುಳಕಿತನಾದನು. ಆದರೇನು? ಅದೇ ಸಂಜೆ ಮೇರಿಯು ಕಾರ್ಲೈಲರೊಂದಿಗೆ ಅಗ್ಗಿಷ್ಟಿಕೆಯಮುಂದೆ ಕುಳಿತಳೇ ವಿನಾ ಜಾರ್ಜನೊಡನೆ ಹರಟೆಹೊಡೆಯಲಿಲ್ಲ, ಅವನೊಡನೆ ಕುಳಿತುಕೊಳ್ಳಲೂ ಇಲ್ಲ. ಇದೇನು? ಯಾವಳನ್ನೂ ತಾನು ತನ್ನ ಜೀವನದಲ್ಲಿ ಆಕರ್ಷಿಸಲಾರೆನೆ? ಎಲ್ಲ ಸ್ತ್ರೀಯರೂ

ಹೂವಿಂದ ಹೂವಿಗೆ ಹಾರುತ್ತಿರುವ ಪಾತರಗಿತ್ತಿಗಳೆ? ಎಂದು ಮನಸ್ಸಿನಲ್ಲೇ ಜಾರ್ಜ್ ಯೋಚಿಸಲಾರಂಭಿಸಿದನು.

ಇಷ್ಟರಲ್ಲೇ ಸೇಲ್ಲಿ ಫೇರ್‌ಫೇಕ್ಸ್ ಆತನಿದ್ದಲ್ಲಿಗೆ ಬಂದು ಅವನನ್ನು ಸ್ವಪ್ನಲೋಕದಿಂದ ಮರ್ತ್ಯಲೋಕಕ್ಕೆ ತಂದಳು. ಅವಳನ್ನು ನೋಡಿಯೇ, 'ತಾನು ವಿಹರಿಸುತ್ತಿದ್ದುದು ಹುಡುಗ ಹುಡುಗಿಯರ ಮೇಳ ಕೂಟಗಳ ಸ್ವಪ್ನಲೋಕ. ಆದರೆ ಸೇಲ್ಲಿಯು ಗಂಡುಸರ ಹೆಂಗುಸರ ಸತ್ಯವಾದ ಮತ್ತು ಸ್ವತಂತ್ರವಾದರೂ ಸಾಕಷ್ಟು ನಿರ್ಬಂಧವುಳ್ಳ ವ್ಯಾವಹಾರಿಕ ಲೋಕದಲ್ಲಿದ್ದಾಳೆ. ಅದೇ ನಿಜವಾದ ಲೋಕ' ಎಂದರಿತನು. ಆದರೆ ಮನಸ್ಸಿನ ಹುಚ್ಚು, ಯೌವನದ ಕೆಚ್ಚು ಹಾಗೆ ಫಕ್ಕನೆ ಅದೃಶ್ಯವಾಗ ಬಲ್ಲುವೆ? ಮತ್ತೂ ಮತ್ತೂ ಹುಡುಗಿಯರ ಸ್ಮೃತಿಗಳು ಆತನನ್ನು ಕಾಡಲು ಆರಂಭಿಸಿದುವು.

ಆದರೆ, ಇಂಥ ಸನ್ನಿವೇಶದಲ್ಲೂ, ಜಾರ್ಜನಲ್ಲಿ ಅಣ್ಣನಬಗ್ಗೆ ಇದ್ದ ಪ್ರೇಮ ಮತ್ತು ಆದರಗಳು ನಷ್ಟವಾಗಿದ್ದಿಲ್ಲ. ಹುಡುಗಾಟಿಕೆಯ ಲೋಕದಿಂದ, ಯೌವನದ ಚಿತ್ತಾಕರ್ಷಕ ಪ್ರಸಂಗಗಳಿಂದ ಈತನನ್ನು ಸೆಳೆದೆಳೆಯುವ ಘಟನೆಯೊಂದು 1751ರಲ್ಲಿ ನಡೆಯಿತು. ಅಣ್ಣ ಲಾರೆನ್ಸ್ ಹವೆಯ ಬದಲಾವಣೆಯ ಬಗ್ಗೆ ಬಾರ್ಬಡೋಸ್‌ಗೆ ಹೋಗುವುದಾಗಿ ತೀರ್ಮಾನಿಸಿದನು. ಜಾರ್ಜನೂ ಆತನೊಡನೆ ಹೋಗಬೇಕಾಯಿತು. ಬೇಟೆ, ಸರ್ವೆಯ ಕೆಲಸ, ವಿಹಾರಕೂಟಗಳ ಮನಮೋಹಕ ಸನ್ನಿವೇಶಗಳು ಇವೆಲ್ಲವನ್ನೂ ಅಣ್ಣನಿಗಾಗಿ ತತ್ಕಾಲದ ಬಗ್ಗೆ ಕಡೆಗಣಿಸಿ, ಜಾರ್ಜ್ ಪಿಟ್ಟೆನ್ನದೆ ಅಣ್ಣನನ್ನು ಹಿಂಬಾಲಿಸಿದನು.

ಐದು ವಾರಗಳ ಪ್ರಯಾಣದ ನಂತರ ಅವರು ಬಾರ್ಬಡೋಸನ್ನು ಸೇರಿದರು. ಅಲ್ಲೇನೋ ಇವರೆಣಿಕೆಯಂತೆ ಎಲ್ಲವೂ ಸರಿಹೋಗಿತ್ತು. ಆದರೇನು? ಬಂದು ಒಂದು ಪಕ್ಷ ದಾಟುವಷ್ಟರಲ್ಲೇ ಇಬ್ಬರನ್ನೂ ಸಿಡುಬು ಪೀಡಿಸಲಾರಂಭಿಸಿತು.

ಒಂದು ತಿಂಗಳ ತನಕ ಬಳಲಿ ಜಾರ್ಜ್ ಗುಣಮುಖನಾದನು. ಆದರೆ ಆತನ ಸುಂದರವಾದ ಮುಖವು ಕಂದಿಹೋಗಿತ್ತು. ಲಾರೆನ್ಸ್ ತಾನು ಬೆರ್ಮುಡಾಕ್ಕೆ ಹೋಗುವೆನೆಂತಲೂ, ಜಾರ್ಜ್ ಮಾತ್ರ ಅಲ್ಲಿಂದಲೇ

ಹಿಂತೆರಳಬೇಕೆಂತಲೂ ತೀರ್ಮಾನಿಸಿದನು. ಇಷ್ಟೇ ಅಲ್ಲದೆ, ಜಾರ್ಜ್ ವಿಲಿಯಮ್ಸ್‌ಬರ್ಗಿಗೆ ಹೋಗಿ, ಅಲ್ಲಿನ ನೂತನ ಗವರ್ನರ್ ರಾಬರ್ಟ್ ಡಿನ್ವಿಡೀಗೆ ತನ್ನ ಗೌರವಗಳನ್ನರ್ಪಿಸಬೇಕೆಂತಲೂ ಆಜ್ಞಾಪಿಸಿದನು.

ಹಾದಿಯುದ್ದಕ್ಕೂ, ಜಲಯಾನದ ವೇಳೆ, ಜಾರ್ಜ್ ತನ್ನ ಭವಿಷ್ಯದ, ನೂತನ ಗವರ್ನರ್‌ನೊಡನೆ ಬೆಳೆಯಬಹುದಾದ ಸಂಪರ್ಕದ ಸತ್ಪರಿಣಾಮಗಳ ಹೊಂಗನಸುಗಳನ್ನೇ ಕಾಣುತ್ತಿದ್ದನು.

ಅವನ ಹೊಂಗನಸುಗಳೆಲ್ಲವೂ ಮುಂದೆ ಫಲಿಸಿದುವು. ಆದರೆ ಭಾರೀ ದೊಡ್ಡ ಝಂಝಾವಾತವೊಂದು ಅಮೇರಿಕದ ರಾಜಕೀಯದ ಕಡಲಲ್ಲಿ ಅದ್ಭುತ ವೀಚಿಗಳನ್ನೆಬ್ಬಿಸಿ ತನ್ನನ್ನು ಕೀರ್ತಿಯ ಉಚ್ಚಾಗ್ರ್ಯ ಸ್ಥಿತಿಗೆತರಬಹುದೆಂಬುದನ್ನು ಜಾರ್ಜ್ ಕನಸಿನಲ್ಲಿಯೂ ಎಣಿಸಿದ್ದಿರಲಾರ.

ಅಧ್ಯಾಯ ೩

ಖ್ಯಾತನಾದ ಲಾರೆನ್ಸ್ ವಾಶಿಂಗ್‌ಟನ್ ಜುಲೈ 1752ರಲ್ಲಿ ತೀರಿಹೋದನು. ಉಡಲು, ಉಣ್ಣಲು ಅನುಕೂಲವಿದ್ದ ಈ ಎಳೆಯ ಪ್ರಾಯದ ಲಾರೆನ್ಸ್ ಮತ್ತೂ ಬದುಕಿದ್ದರೆ ಮತ್ತೂ ಹೆಚ್ಚಿನ ಮಟ್ಟದ ಕೀರ್ತಿಭಾಜನನಾಗುತ್ತಿದ್ದನೆನ್ನಲಡ್ಡಿಯಿಲ್ಲ. ಸಾಯುವ ವೇಳೆ ಈತನು ತನ್ನಸನುಸ್ತವನ್ನೂ ತಮ್ಮ ಜಾರ್ಜನಿಗೆಂದೇ ವೀಲು (will) ಮಾಡಿ ಸತ್ತಿದ್ದನು. ನದಿಯ ಇಕ್ಕೆಲಗಳ ಹೊಲಭೂಮಿಗಳೆಲ್ಲವೂ ಜಾರ್ಜನ ಪಾಲಿಗೆ ಬಂದುವು. ಕನಸಿನಲ್ಲೂ ಎಣಿಸಲಾರದಷ್ಟು ಭೂಮಿಯು ಜಾರ್ಜನಿಗೆ ಸಿಕ್ಕಿತು.

ಮೌಂಟ್ ವೆರ್ನಾನಿನ ಭೂಮಿ ಹೊಲಗಳನ್ನೂ ಜಾರ್ಜನಿಗೆಂದು ಲಾರೆನ್ಸ್ ಬಿಟ್ಟು ಗತಿಸಿದ್ದನಷ್ಟೆ. ಇದಕ್ಕಿಂತಲೂ ಹಿರಿದಾಗಿ, ಲಾರೆನ್ಸನ ಕೀರ್ತಿ ಖ್ಯಾತಿಗಳೂ ಮತ್ತು ಸದ್ಗುಣಗಳೂ ಜಾರ್ಜನ ಬೆಂಬಲಕ್ಕೆ ನಿಂತುವು ಎನ್ನಬಹುದು. ಜಾರ್ಜನು ತನ್ನ ಕಾಲಾನಂತರದಲ್ಲಿ ನಾಗರಿಕರ ದಂಡನ್ನು (militia) ಸೇರಬೇಕೆಂತಲೂ, ಹಾಗೆಯೇ ತನ್ನಂತೆಯೇ ಓಹಿಯೋ ಕಂಪೆನಿಯ ಪಾಲುಗಾರನಾಗಬೇಕೆಂತಲೂ

ಮತ್ತು ಪಟ್ಟಣಗಳನ್ನು ಪ್ರತಿನಿಧೀಕರಿಸುವ ಸಭೆ (House of Burgesses)ಯಲ್ಲಿಯೂ ಸ್ಥಾನವನ್ನು ಪಡೆಯತಕ್ಕುದು ಎಂಬುದು ಲಾರೆನ್ಸನ ಇಚ್ಛೆಯಾಗಿತ್ತು. ಹೀಗೆ ಅನತಿಕಾಲದಲ್ಲೇ ಜಾರ್ಜ್ ಪ್ರತಿಷ್ಠಿತನಾದನು

ಮೇಸನರ ಗುಪ್ತಪಂಗಡವನ್ನು ಜಾರ್ಜ್ ಸೇರಿಕೊಂಡ ಕೆಲವೇ ದಿನಗಳಲ್ಲಿ ಈತನನ್ನು ವಿಲಿಯಮ್ಸ್‌ಬರ್ಗಿಗೆ ಕರೆದರು. ಹೀಗೆ ವಿಲಿಯಮ್ಸ್‌ಬರ್ಗನ್ನು ಪ್ರವೇಶಿಸಿದ ಒಂದೇ ವರ್ಷದೊಳಗಾಗಿ ಈತನು ನಾಗರಿಕ ದಂಡಿನ ಸಹಾಯಕ ಸೇನಾನಿ (Adjutant General) ಯಾಗಿ ನೇಮಕಗೊಂಡನು ಎನ್ನಬಹುದು. ಇದರಿಂದ ಆತನ ಪಗಾರವು ವರ್ಷವೊಂದರ 100 ಪವನುಗಳಷ್ಟಾಯಿತು.

ಬಾರ್ಬಡೋಸ್‌ನಿಂದ ಕಳೆದ ಜನವರಿಯಲ್ಲಿ ಹಿಂದೆ ಬಂದವನೇ ಜಾರ್ಜನು ಅಲ್ಲಿನ (ವಿಲಿಯಮ್ಸ್‌ಬರ್ಗಿನ) ಗವರ್ನರ್ ಡಿನ್ವಿಡೀಯನ್ನು ಭೇಟಿಯಾಗಿದ್ದನು ಎಂದಿರುವೆವಷ್ಟೆ. ಈ ಗವರ್ನರನೂ ಓಹಿಯೋ ಕಂಪೆನಿಯಲ್ಲಿ ಪಾಲುಗಳನ್ನು ಕೊಂಡುಕೊಳ್ಳಲು ಉತ್ಸುಕನಾಗಿದ್ದನು. ಈ ಪಶ್ಚಿಮ ಪ್ರಾಂತದ ಪ್ರಗತಿಯಿಂದ ಈ ಕಂಪೆನಿಯು ಆರ್ಥಿಕ ಭದ್ರತೆಯನ್ನು ಪಡೆವುದೆಂದೂ, ಮಾತ್ರವಲ್ಲದೆ, ಈ ಓಹಿಯೋ ಕಂಪೆನಿಯೇ ಆ ಪಶ್ಚಿಮ ಪ್ರಾಂತದ ಸಮಸ್ತರ ಆರ್ಥಿಕ ಹಕ್ಕು ಬಾಧ್ಯತೆಗಳನ್ನು ರಕ್ಷಿಸುವ, ರಕ್ಷಿಸಲಿರುವ, ಮಹಾಸಂಸ್ಥೆಯೆಂದೂ ಈ ಗವರ್ನರ್ ಡಿನ್ವಿಡೀ ಭಾವಿಸಿದ್ದನು.

ಕೊಲಂಬಸನ ಕಾಲದಿಂದ, ಇಂಗ್ಲಂಡ್, ಸ್ಪೈನ್, ಫ್ರಾನ್ಸ್ ಮತ್ತು ಹೊಲ್ಲಂಡ್‌ಗಳಿಂದ ಜನರು ಆಗಿಂದಾಗ್ಗೆ ಅಮೇರಿಕದತ್ತ ಬರುತ್ತಿದ್ದರೂ, 17ನೆಯ ಶತಮಾನದಿಂದಲೇ ಅತ್ತ ಸಾಗಿದ ಜನರಲ್ಲಿ ಹಲವರು ಅಲ್ಲೇ ಉಳಿಯಲಾರಂಭಿಸಿದರು. ಹಾಗೆಯೇ ಇಂಗ್ಲಿಷ್ ಜನರು ವಲಸೆ ಬಂದು ವ್ಯಾಪಾರಗಳನ್ನು ನಡೆಸುತ್ತ ಓಹಿಯೋ ನದಿಯ ಉದ್ದಕ್ಕೂ ಬೀಡುಬಿಟ್ಟಂತೆ ಆಂಗ್ಲರ ಮತ್ತು ಫ್ರೆಂಚರ ನಡುವೆ ತೀವ್ರ ಸ್ಪರ್ಧೆಯೂ ಮತ್ತು ತಜ್ಜನ್ಯ ಕಲಹಗಳೂ ಆರಂಭವಾದುವು.

ಆಂಗ್ಲರು ತಮ್ಮ ದೇಶದಲ್ಲಿ "ಫ್ರೆಂಚರು ನಮ್ಮನ್ನು ವಿರೋಧಿಸುತ್ತಿದ್ದಾರೆ, ನಮ್ಮ ಮುನ್ನಡೆಯು ಅವರಲ್ಲಿ ಕಿಚ್ಚನ್ನೆಬ್ಬಿಸಿದೆ. ಇವರನ್ನು ಏನಾದರೂ ಮಾಡಿ ತಡೆಹಿಡಿಯತಕ್ಕದು" ಎಂದು ರಣಘೋಷವನ್ನೆಬ್ಬಿಸುತ್ತಿದ್ದರೆ, ಅತ್ತ ಇಂಗ್ಲಿಷ್ ಕಾಲುವೆಯಾಚೆ ಫ್ರೆಂಚರೂ "ಆಸೆಬುರುಕ ಆಂಗ್ಲರು ನಮ್ಮ ಆಶ್ರಿತ ರಾಜ್ಯಗಳನ್ನೆಲ್ಲವನ್ನೂ ನುಂಗಲು ಹವಣಿಸಿರುತ್ತಾರೆ. ಇದನ್ನು ನಿಲ್ಲಿಸುವುದು ಅವಶ್ಯ" ಎಂದು ಉದ್ಗಾರ ತೆಗೆಯುತ್ತಿದ್ದರು.

ಅಂತೂ ಈ ಓಹಿಯೋ ಕಂಪೆನಿಯು ಇತ್ತಂಡದವರನ್ನೂ ರಣರಂಗಕ್ಕೆಳೆದು ತಂದಿತು. ಈ ಕಂಪೆನಿಯು ಭೂಮಿಗಳನ್ನು ಪಾಲು ಮಾಡಿ ಅದನ್ನು ವಿತರಣೆ ಮಾಡುತ್ತಲಿತ್ತು ಮತ್ತು ಬೇಟೆಗಾರರನ್ನೂ ಬೇಸಾಯಗಾರರನ್ನೂ ಕಳುಹಿ ಆ ಭೂಮಿಯನ್ನೆಲ್ಲ ಕೃಷಿಯೋಗ್ಯವನ್ನಾಗಿ ಮಾಡುತ್ತಲಿತ್ತು ಎಂಬ ವಿಚಾರವು ಕ್ವಿಬೆಕ್ (Quebec)ನಲ್ಲಿ ಆಂದೋಲನವನ್ನೇ ಎಬ್ಬಿಸಿತು.

ಪೆನ್ಸಿಲ್ವೇನಿಯಾದಲ್ಲಿಯೂ ಈ ಓಹಿಯೋ ಕಂಪೆನಿಯು ಸ್ಪರ್ಧೆಗೆ ಇಳಿದ ನಿಮಿತ್ತ ಅಸಹನೆಯ ಕೂಗೆದ್ದಿತು. ಹಾಗೆಯೇ ವರ್ಜೀನಿಯಾ ಪ್ರಾಂತದವರೂ ಪೆನ್ಸಿಲ್ವೇನಿಯಾದವರನ್ನೂ ದ್ವೇಷಭಾವದಿಂದ ಕಾಣುತ್ತಿದ್ದರು. ಇಷ್ಟೇ ಅಲ್ಲದೆ, ಈ ವಿವಿಧ ಪ್ರಾಂತದವರು ಉಳಿದ ಪ್ರಾಂತದವರನ್ನೆಲ್ಲ ಕಳ್ಳ ಬೇಟೆಗಾರರೆಂದು (poachers) ಕರೆಯುತ್ತಲಿದ್ದರು. ಇಷ್ಟೇ ಅಲ್ಲದೆ ಇವರು ಇಂಡಿಯನರ ಬೇಟೆಯನ್ನೂ ತಪ್ಪಿಸುತ್ತಿದ್ದರೆಂದು ಸಾರುತ್ತ ಸ್ಥಳೀಯ ಮೂಲ ನಿವಾಸಿಗಳಾದ ಇಂಡಿಯನರನ್ನೂ ಇವರ ವಿರುದ್ಧ ಪ್ರೋತ್ಸಾಹಿಸುತ್ತಲಿದ್ದರು.

ಅಂತೂ ದೂರದ ಅಮೇರಿಕದಲ್ಲಿ ಆಶ್ರಿತ ರಾಜ್ಯದ ವಿಸ್ತಾರ ಮತ್ತು ತುಪ್ಪಳ ವ್ಯಾಪಾರಗಳ ಪರಿಣಾಮಗಳೆಲ್ಲವೂ ವಿಷಮಗಳೇ ಆದುದರಲ್ಲಿ ಆಶ್ಚರ್ಯವೇನೂ ಇಲ್ಲ. ಈ ಆಶ್ರಿತ ರಾಜ್ಯಗಳಲ್ಲಿ ಹೊಡೆತಬಡಿತಗಳು, ಯುರೋಪಿನಲ್ಲಿ ಆಂಗ್ಲ ಫ್ರೆಂಚರ ವೈಮನಸ್ಸು ಮತ್ತು ದೂರದ ಅಮೇರಿಕೆಯ ವಿವಿಧ ರಾಜ್ಯಗಳಲ್ಲಿ, ಪ್ರಾಂತಗಳಲ್ಲಿ ತೀವ್ರ ಸ್ಪರ್ಧೆ ಇವುಗಳು ತತ್ಕಾಲೀನ ವಾತಾವರಣವನ್ನೆಲ್ಲ ಕಲುಷಿತವನ್ನಾಗಿ ಮಾಡಿದ್ದುವು. ಅಂಥ

ಸನ್ನಿವೇಶದಲ್ಲೇ ಜಾರ್ಜ್ ವಾಶಿಂಗ್ಟನ್ ಸೇನಾಪದವಿಯನ್ನೇರಿದನು. ಇಷ್ಟೇ ಅಲ್ಲದೆ, ಗವರ್ನರ್ ಡಿನ್ವಿಡೀಯೊಡನೆ ಈತನಿಗಿದ್ದ ಸ್ನೇಹ ಸಲುಗೆಗಳ ಕಾರಣದಿಂದ ಮುಂದಿನ ಫ್ರೆಂಚ ಮತ್ತು ಇಂಡಿಯಾನರ ಯುದ್ಧಗಳಲ್ಲಿ ಈತನು ಪ್ರಮುಖ ಭಾಗವನ್ನೇ ವಹಿಸಬೇಕಾಯಿತು.

ವಿಲಿಯಮ್ಸ್‌ಬರ್ಗಿಗೆ ಹೋದಾಗ ಜಾರ್ಜ್ ಹೆಚ್ಚಾಗಿ ವಸತಿಗೃಹಗಳಲ್ಲೋ ಅಥವಾ ಇನ್ನಿತರ ವಿಹಾರಾರ್ಥಿಗಳನ್ನು ರಾತ್ರಿ ವೇಳೆ ವಿಶ್ರಮಿಸಲು ಬಿಡುವ ಮನೆಗಳಲ್ಲೋ,ವಾಸಮಾಡುತ್ತಿದ್ದನು. ಹಾಗೆಯೇ ಒಮ್ಮೆ ಒಂದು ವಸತಿ ಗೃಹದ ಮುಂದೆ ಈತನ ಕುದುರೆಯು ಬಂದು ನಿಂತಿತು. ಕೂಡಲೇ ಆಳುಮಗನು ಬಂದು ಅದನ್ನು ಲಾಯಕ್ಕೆ ಕೊಂಡು ಹೋಗಿ ಕಟ್ಟಿ ಜಾರ್ಜನ ವಸತಿಯ ವ್ಯವಸ್ಥೆಯನ್ನು ನಿಶ್ಚಯಿಸಲು ಹೋದನು.

ಅಲ್ಲೇ ಹೊರಗೆ ಕಾಯುತ್ತ ನಿಂತ ಜಾರ್ಜ್ ಗ್ಲೊಸೆಸ್ಟರ್ ಬೀದಿಯ ಉದ್ದಕ್ಕೂ ದೃಷ್ಟಿಯನ್ನು ಹೊರಳಿಸುತ್ತ ಇರುವಷ್ಟರಲ್ಲಿ,

"ಗುಡ್ ಈವ್ನಿಂಗ್, ವಾಶಿಂಗ್ಟನ್" ಎಂಬ ಸದ್ದು ಕೇಳಿಸಿತು. ಮುಖವನ್ನತ್ತ ಹೊರಳಿಸಿ ಆಗಂತುಕನನ್ನು ನಮಸ್ಕರಿಸುತ್ತಲೇ, ಬಂದ ವ್ಯಕ್ತಿಯು ತನ್ನ ಪರಿಚಯವನ್ನು ಮಾಡಿಕೊಡುತ್ತ "ನನ್ನನ್ನು ಬೈರ್ಡ್ ಎನ್ನುತ್ತಾರೆ. ನಾನು ಈಗ ತಾನೇ ಬಂದಿಳಿದೆ. ಇಲ್ಲಿ ವಸತಿಯು ಸಿಗುವುದೇ ಎಂದು ನೋಡುತ್ತಿದ್ದೇನೆ" ಎಂದನು. ಮತ್ತೂ ಮುಂದರಿಯುತ್ತ, 'ಪ್ರತಿನಿಧಿಗಳಸಭೆಯು ಕೂಡುವ ಮುನ್ನವೇ ಈ ಪಟ್ಟಣವು ತುಂಬಿದಂತಿದೆ, ಅದಿರಲಂತೆ, ಮೇಜರ್ ವಾಶಿಂಗ್ಟನ್ನರೇ ನಿಮ್ಮ ಆರೋಗ್ಯವನ್ನು ಹಾರೈಸಿ ಇಂದಿನ ಪಾನೀಯಗಳನ್ನು ಕುಡಿಯೋಣವೆ?' ಎಂದನು.

'ಮೇಜರ್' ಎಂಬ ಪದವನ್ನು ಕೇಳಿದೊಡನೆ ವಾಶಿಂಗ್ಟನ್ನನ ಮುಖವು ಸಂತಸದಿಂದ, ಅಭಿಮಾನದಿಂದ ಕೆಂಪಡರಿತು; ಕಾರಣ, ಬೈರ್ಡ್‌ನೂ ವರ್ಜೀನಿಯಾದ ಖ್ಯಾತನಾಮರಲ್ಲೊಬ್ಬನಿದ್ದನು. ಆತನ ಮುಖದಿಂದ ಇಂಥ ಸ್ತುತಿಯ ಮಾತೆಂದರೆ ಯುವಕ ವಾಶಿಂಗ್ಟನ್ನಿಗೆ ಅಭಿಮಾನವೆನಿಸಿದುದರಲ್ಲಿ ಏನು ಆಶ್ಚರ್ಯ?

ಇಷ್ಟರಲ್ಲಿ ಆಳು ಕೋಣೆಯೊಂದನ್ನು ದೊರಕಿಸಿಕೊಂಡು ಬಂದನು. ವಾಶಿಂಗ್‌ಟನ್ ಒಳಗೆ ತೆರಳಿ ಫಕ್ಕನೆ ತನ್ನ ಉಡುಪನ್ನು ಬದಲಿಸಿ ಬೈರ್ಡನನ್ನು ಕಾಯುವಂತೆ ಮಾಡಬಾರದೆಂದು ಅವಸರವಸರವಾಗಿ ವೆದರ್ಬರ್ನ್‌ನ ಹೋಟೇಲು 'ರಾಲೀ' (Raleigh) ಗೆ ತೆರಳಿದನು.

ಹೋಟೇಲಿನೊಳಗೆ ತುಂಬಾ ಸದ್ದು ಕೇಳಿಬರುತ್ತಿತ್ತು. ಅಲ್ಲೇ ಅಗ್ಗಿಷ್ಟಿಕೆಯಮುಂದೆ ಕುಳಿತವರ ಹಿಂದೆ ಪಾನೀಯವನ್ನು ಪಡೆಯಲು ಸನ್ನದ್ಧನಾಗಿ ಬೈರ್ಡ್ ಕುಳಿತಿರುವುದನ್ನು ಜಾರ್ಜ್ ಕಂಡನು. ಈತನನ್ನು ನೋಡುತ್ತಲೇ,

"ಬನ್ನಿರಿ, ವಾಶಿಂಗ್‌ಟನ್, ಇದೋ ತಮಗಾಗಿ ಫ್ಲಿಪ್‌ನ್ನು ಹೇಳಿದ್ದೇನೆ. ಜಾಗವಿಲ್ಲದಕಾರಣ ಇಲ್ಲೇ ಕುಳಿತುಕೊಳ್ಳೋಣ" ಎಂದು ಉದ್ಗಾರ ತೆಗೆದನು.

ಪಾನೀಯಗಳನ್ನು ಕುಡಿದು ಇಬ್ಬರೂ ಆ ನೂಕು ನುಗ್ಗಲಿನಿಂದ ಹೊರಗೆ ಬರುವಷ್ಟರಲ್ಲಿ ವಾಶಿಂಗ್‌ಟನ್ ಕಾರ್ಟರ್ ಬರ್ವೆಲ್ (Carter Burwell) ನನ್ನೂ ಭೇಟಿಯಾದನು. ಈತನ ಒರಟುದೃಷ್ಟಿಯಿಂದಲೇ ಈತನೇನೋ ತನ್ನನ್ನು ಕೇಳಲಿರುವನು ಎಂಬುದನ್ನು ಜಾರ್ಜನು ನೆನಸಿದನು.

"ನಿಮ್ಮ ಓಹಿಯೋ ಕಂಪೆನಿಯು ಹೇಗೆ ನಡೆಯುತ್ತಿದೆ? ಬಹುಶಃ ಚೆನ್ನಾಗಿಲ್ಲವಲ್ಲವೆ? ಅಂಥ ಕಂಪೆನಿಗಳಿಗೆ ಎಲ್ಲಿಲ್ಲದ ಗ್ರಹಚಾರ. ಫ್ರೆಂಚರು ಒಂದೆಡೆ, ಪೆನ್ಸಿಲ್ವೇನಿಯಾದವರು ಇನ್ನೊಂದೆಡೆ, ಸಾಲದುದಕ್ಕೆ ಇಂಡಿಯನರು ಕೂಡ ಎಲ್ಲರೂ ಇದರೊಡನೆ ಹಗೆತನ ಸಾಧಿಸುತ್ತಿರುವರು. ನೆಮ್ಮದಿಯಿಂದ ಒಣರಗಳೆಗಳಿಲ್ಲದೆ ವಾಸಿಸುವ ನನ್ನಂಥವನಿಗಾದರೋ ನಮ್ಮ ಗವರ್ನರನು ಯುದ್ಧವನ್ನೇ ಆಹ್ವಾನಿಸುವಂತೆ ಕಾಣುತ್ತಲಿದೆ". ಎಂದು ಬರ್ವೆಲನ ಬಿರುಸುನುಡಿಗಳು ಕೇಳಬಂದುವು.

ಪ್ರತ್ಯಕ್ಷವಾಗಿ ಇದಕ್ಕೆ ಉತ್ತರವನ್ನು ಹೇಳುವಬದಲು ಏನನ್ನೋ ನೆವ ಹೇಳಿ ಜಾರ್ಜ್ ತಪ್ಪಿಸಿಕೊಂಡನು. ಇದನ್ನೇನೂ ಆತನು ಗವರ್ನರ ನೊಡನೆ ಹೇಳುವಂತಿರಲಿಲ್ಲ. ಆದುದರಿಂದ ಬೆಲ್ವಾಯ್ರಿಗೆ ಹೋದನಂತರವೇ ಈ ಮಾತುಗಳ ಅರ್ಥವು ಆತನಿಗೆ ತಿಳಿಯಿತು.

ಜಾರ್ಜ್ ಫೇರ್‌ಫೇಕ್ಸನು ಈತನಿಗೆ ಇದರರ್ಥವನ್ನು ತಿಳುಹಿದನು, “ಕಾರ್ಟರ್ ಬರ್ವೆಲ್ ಅಸೂಯಾಪರನಿದ್ದಾನೆ. ಓಹಿಯೋ ಕಂಪೆನಿಯಲ್ಲಿ ಪಾಲುಗಳನ್ನು ಪಡೆಯದಿರುವ ಅನೇಕ ಇತರರಂತೆ ಈತನೂ ಗವರ್ನರನನ್ನು ನಿಂದಿಸುತ್ತಿದ್ದಾನೆ ಪಾಪ!”, ಎಂದನು.

ಫೇರ್‌ಫೇಕ್ಸನು ಮಾತು ನಿಲ್ಲಿಸುತ್ತಿದ್ದಂತೆಯೇ ಆತನ ಮಡದಿ ಸೇಲ್ಲಿಯು ಉತ್ಸುಕಳಾಗಿ ಪ್ರಶ್ನಿಸಿದಳು, “ಹಾಗೇನು? ಯುದ್ಧವು ಸಂಭವಿಸುವುದರಲ್ಲಿದೆಯೆ?”

ಜಾರ್ಜ್ ವಾಶಿಂಗಟನ್ ಮತ್ತು ಮೇಸನರು ನಿರುತ್ತರರಾದರು, ಉತ್ಸುಕತೆಯಿಂದ ಫೇರ್‌ಫೇಕ್ಸನ ಅಭಿಪ್ರಾಯವನ್ನು ಕೇಳುತ್ತ ನಿಂತರು. ಫ್ರೆಂಚರು ಪಿಕಾವಿಲೆನಿ (Pichavillany)ಯಿಂದ ಇಂಗ್ಲಿಷರನ್ನು ಓಡಿಸಿ ಓಹಿಯೋದಿಂದ ಕೆನಡಾದ ತನಕ ಹಲವು ಬಂದರುಗಳನ್ನು ಒಂದರೊಡನೊಂದು ಸೇರಿಸಿಕೊಳ್ಳಲು ಹವಣಿಸುತ್ತಿದ್ದರು, ಎಂಬ ಅಭಿಪ್ರಾಯವನ್ನು ಈತನು ವ್ಯಕ್ತಪಡಿಸುತ್ತಿದ್ದಂತೆ, ವಾಶಿಂಗ್‌ಟನ್ ಗಂಭೀರನಾಗಿ ಪೌರುಷವನ್ನು ವ್ಯಕ್ತಗೊಳಿಸುವ ಧ್ವನಿಯಿಂದ, “ಫ್ರೆಂಚರ ವಿರುದ್ಧವಾಗಿ ಇಂಗ್ಲೆಂಡ್ ಮತ್ತು ಆದರ ವಸಾಹತುಗಳೆಲ್ಲವೂ ಕಾರ್ಯಪ್ರವೃತ್ತರಾಗಬೇಕು, ಸಹಕರಿಸಬೇಕು,” ಎಂದನು.

“ಸಹಕಾರ ಅದೇ ಸರಿಯಾದ ಶಬ್ದ, ಇದನ್ನೇ ನಾನು ಡಾಕ್ಟರ್ ಬೆಂಜಮಿನ್ ಫ್ರೇಂಕ್ಲಿನ್‌ರಿಗೆ ಹೇಳಲಿದ್ದೇನೆ,” ಎಂದು ಮೇಸನ್ ಉದ್ಗಾರ ತೆಗೆದನು.

ಆ ವರ್ಷವಂತೂ ಓಹಿಯೋ ಕಂಪೆನಿಗೆ ಅತ್ಯಂತ ಕಳಕಳಿಯನ್ನು ತಂದಿತ್ತು. ಲಾಭವು ತುಂಬಾ ಬಂದಿದ್ದರೂ, ಭೂಮಿಯ ವಿತರಣೆಯ ವ್ಯವಸ್ಥೆ, ಆ ಸಂಬಂಧವಾದ ಶರ್ತಗಳ ಪ್ರಸ್ತಾಪವು ಪೂರ್ಣವಾದಂತಿರಲಿಲ್ಲ.

ಗಹನವಾದ ಕಾಡುಗಳಲ್ಲಿ ನಡೆಯುತ್ತಿದ್ದ ಯುದ್ಧಗಳೇ ಈ ಅನಿಶ್ಚತತೆಗೆ ಕಾರಣವಾಗಿದ್ದುವು ಎನ್ನಬಹುದು. ಇಂಥ ಗಾಢಾರಣ್ಯಗಳಲ್ಲಿ ಕದ್ದು ಯುದ್ಧ ಮಾಡಲು ಬೇಕಾದಷ್ಟು ಸಂಖ್ಯೆಯಲ್ಲಿ ಉಮೇದು

ವಾರಿಗಳು ಸಿಗುತ್ತಿದ್ದಿಲ್ಲವಾದುದರಿಂದಲೇ ಗವರ್ನರ್ ಡಿನ್ವಿಡೀಯು ಒಂದು ಭದ್ರವಾದ ಕೋಟೆಯನ್ನು ಕಟ್ಟಲು ಹವಣಿಸುತ್ತಿದ್ದನು.

ಅಂತೂ ಯುದ್ಧವಲ್ಲದೆ ನಿರ್ವಾಹವಿಲ್ಲವೆಂಬುದನ್ನು ಮನಗಂಡ ಈ ಗವರ್ನರನು ಇಂಗ್ಲಂಡದಿಂದಲೇ ಸಹಾಯವನ್ನಪೇಕ್ಷಿಸಿದನು. ಆದರೆ ಕೆಲವು ಪಟ್ಟಣಗಳ ಪ್ರತಿನಿಧಿಗಳು ಕಾರ್ಟರ ಬರ್ವೆಲ್‌ನಂತಹರು ನಿರುತ್ಸಾಹವನ್ನೂ ವಿರೋಧವನ್ನೂ ಪ್ರಕಟಿಸಿದ್ದರು.

ಅಂತೂ ಫ್ರೆಂಚ ಸೇನಾನಿಗೆ ತಮ್ಮ ವಿರೋಧವನ್ನು ಬರೆದು ಕಳುಹಲು ತೀರ್ಮಾನಿಸಿ ಗವರ್ನರ್ ಡಿನ್ವಿಡೀಯು ದೂತನೊಬ್ಬನ ಮೂಲಕ ಆದನ್ನು ಕಳುಹಿದರೂ, ಈ ದೂತನಿಗೆ ಆ ಪತ್ರವನ್ನು ತಲಪಿಸಲಾಗಲಿಲ್ಲ. ಇದನ್ನು ಲಕ್ಷಿಸಿದ ಗವರ್ನರನು ಈ ಪತ್ರವನ್ನು ಕಳುಹಲೇಬೇಕೆಂದು ಪಣತೊಟ್ಟನು.

ಇದೇ ಕಾರ್ಯದಲ್ಲಿ ಸ್ವಯಂಸೇವಕನಾಗಲು ಜಾರ್ಜ ವಾಶಿಂಗ್‌ಟನ್ ಒಪ್ಪಿಕೊಂಡನು. ಕೇವಲ ಇಪ್ಪತ್ತೊಂಬು ವರ್ಷಗಳ ಈ ಮೇಜರನನ್ನು ವಿಲಿಯಮ್ಸ್‌ಬರ್ಗಿಗೆ ಬಂದು ತಕ್ಕ ಪತ್ರ ಮತ್ತು ಆದೇಶಗಳನ್ನು ಪಡೆಯುವಂತೆ ಗವರ್ನರ್ ಡಿನ್ವಿಡೀಯು ಆಜ್ಞಾಪಿಸಿದನು.

ಈ ಸಾಹಸದ ಕಾರ್ಯಕ್ಕೆ ಅವಶ್ಯವಿರುವ ಸ್ಫೂರ್ತಿಯಿಂದಲೇ ಜಾರ್ಜ ಎಲ್ಲ ಸ್ನೇಹಿತರನ್ನೂ ಬೀಳ್ಕೊಂಡನು. ಸೇಲ್ಲಿ ಫೇರ್‌ಫೇಕ್ಸಳಂತೂ ಜಾಗರೂಕನಾಗಿರೆಂದು ಅಭಿಮಾನದಿಂದ ಹೇಳಿದಳು.

ಎಲ್ಲರ ಆಶ್ವಾಸನೆ ಶುಭಾಶಯಗಳಿಗಿಂತಲೂ ಸೇಲ್ಲಿಯ ಶುಭಾಶಯಗಳಿಗೆ ಜಾರ್ಜನು ಹೆಚ್ಚು ಬೆಲೆ ಕೊಡುವಂತಿತ್ತು. ಇವಳಿಂದಲೇ ಈ ಒಂದೆರಡು ವರ್ಷಗಳಿಂದ ಆತನ ನಡೆನುಡಿ ಮತ್ತು ವರ್ತನೆಗಳೆಲ್ಲವೂ ರೂಪುಗೊಂಡಿದ್ದುವು ಎಂದರೂ ಉತ್ಪ್ರೇಕ್ಷೆ ಇಲ್ಲ. ತನ್ನ ಗಂಡ ಮತ್ತು ವಿಲಿಯಮ್ ಫೇರಫೇಕ್ಸರೊಡನೆ ನಿಂತು ಇವನನ್ನು ಬೀಳ್ಕೊಳ್ಳುತ್ತ, ದೂರದಲ್ಲಿ ಆತನು ಅಶ್ವಾರೂಢನಾಗಿ ಅದೃಶ್ಯನಾದಂತೆ ಮನಸ್ಸಿನಲ್ಲೇ ಸೇಲ್ಲಿಯು ಹೇಳಿಕೊಂಡಳು, "ಈಗಷ್ಟೇ ಒಂದು ದೊಡ್ಡ ಜೀವದ—ಜೀವನದ—ಆರಂಭವಾಗುತ್ತಿದೆ. ಹೀಗೆಯೇ ಮುಂದೆ ಜಾರ್ಜ ದೊಡ್ಡ ಪದವ್ಯಾರೂಢನಾಗಿ ಮುಂಬರಿಯಲಿದ್ದಾನೆ".

ಅಧ್ಯಾಯ ೪

ಚಳಿ, ಮಳೆಗಳನ್ನು ಲಕ್ಷಿಸದೆ, ಜಾರ್ಜ್ ಮುಂದುವರಿಯುತ್ತಲೇ ಇದ್ದನು. ಪ್ರತಿ ದಿನವೂ ಒಂದಲ್ಲ ಒಂದು ಅನುಭವವು ಇವನನ್ನು ಪುಳಕಿತನನ್ನಾಗಿ ಮಾಡುತ್ತಿತ್ತು. ಹಾಗೆಯೇ ಮುಂದರಿದು ಕೆಲವು ದಿನಗಳಲ್ಲಿ ಓಹಿಯೋ ಕಂಪೆನಿಯ ಕೋಟೆಗಾಗಿ ನಿಶ್ಚಯಿಸಿದ ತಾಣವನ್ನು, ಎರಡು ನದಿಗಳ ಸಂಗಮ ಸ್ಥಾನವನ್ನು ಮುಟ್ಟಿದನು.

ಅಂತೂ 41 ದಿನಗಳ ತನಕ ಈ ಚಳಿ, ಗಾಳಿಗಳಲ್ಲಿ ಪ್ರಯಾಣ ಮಾಡುತ್ತ ವಿಲಿಯಮ್ಸ್ ಬರ್ಗಿನಿಂದ 500 ಮೈಲು ದೂರವಿರುವ ಫ್ರೆಂಚ ಸೇನಾನಿಯ ಶಿಬಿರವನ್ನು ಜಾರ್ಜ್ ಮುಟ್ಟಿದನು.

ಅಲ್ಲಿಳಿದು ತನ್ನ ಗವರ್ನರನ ಕಾಗದವನ್ನು ಫ್ರೆಂಚ ಅಧಿಕಾರಿಗೆ ಇಂಗ್ಲಿಷ್‌ಬಲ್ಲ ಒಬ್ಬ ಕಪ್ತಾನನ ಮೂಲಕ ಮುಟ್ಟಿಸಿ ಉತ್ತರಕ್ಕಾಗಿ ವಾಶಿಂಗ್‌ಟನ್ ಕಾದು ನಿಂತನು.

ವಿಲಂಬ ಮತ್ತು ವಾಗ್ವಾದಗಳ ನಂತರ ಉತ್ತರವು ದೊರಕಿತು. ಉತ್ತರವನ್ನು ಪಡೆದು ಜಾರ್ಜ್ ಹಿಂದಿರುಗಿದನು.

11-1-1754ರಂದು ಬೆಲ್ವ್ಹಾಯರಿಗೇನೇ ಹಿಂದಿರುಗಿದ ಜಾರ್ಜ್ ವಾಶಿಂಗ್‌ಟನ್ನನನ್ನು ಎಲ್ಲರೂ ಸಂಭ್ರಮದಿಂದ ಸ್ವಾಗತಿಸಿದರು. ಅಂದಿನಿಂದ ಒಂದು ವಾರದೊಳಗೆಲ್ಲಾ ಮನೆಮಠಗಳಲ್ಲಿ ಜಾರ್ಜ್ ವಾಶಿಂಗಟನ್ನನ ಕುರಿತೇ ಮಾತು ಚರ್ಚೆಗಳು. ಅವನ ಧೈರ್ಯಗಳನ್ನು ಅಭಿನಂದಿಸುವ ಕೂಟಗಳು ಸೇರಿ ಆವನು ಗವರ್ನರ್ ಡಿನ್ವಿಡೀಯ ಆದೇಶದ ಮೇರೆಗೆ ತಂದ ಫ್ರೆಂಚರ ಧ್ಯೇಯ ಮತ್ತು ಸಿದ್ಧತೆಗಳ ವಿವರಗಳನ್ನೇ ಟೀಕಿಸುತ್ತಿದ್ದರು, ಮತ್ತು ಇವನ್ನೆಲ್ಲ ಸಂಗ್ರಹಿಸಿದ ವಾಶಿಂಗ್‌ಟನ್ನನ ಚಾತುರ್ಯವನ್ನು ವರ್ಣಿಸುತ್ತಿದ್ದರು.

ಈ ವಿವರಗಳಿಂದಲಂತೂ ಡಿನ್ವಿಡೀಯು ಮಾಡತಕ್ಕ ಸಿದ್ಧತೆಗಳಿಗೆ ತುಂಬಾ ಸಹಕಾರವು ಒದಗಿತು. ಇವುಗಳನ್ನೆಲ್ಲ ಆತನು ಇತರ ವಸಾಹತುಗಳಿಗೂ ಕಳುಹಿ ಎಲ್ಲರ ಸಹಕಾರವನ್ನೂ ಕೋರಿ ಬರೆದನು. ಲಂಡನಿಗೂ ಸೇನೆ, ಹಣ ಮತ್ತು ಇತರ ಸರಬರಾಯಿಗಳ ಬಗ್ಗೆ ಕಳಕಳಿಯ

ಕರೆಯು ಹೋಯಿತು. ಇಷ್ಟೇ ಅಲ್ಲದೆ ಮೇಜರ್ ವಾಶಿಂಗ್‌ಟನ್ನನೂ ಕೂಡ 200 ಮಂದಿ ಸುಸಜ್ಜಿತ ಸೈನಿಕರನ್ನು ತಯಾರು ಮಾಡಬೇಕಾಗಿ ಬಂದಿತು. ಇವರನ್ನು ಓಹಿಯೋ ಸಂಗಮಕ್ಕೆ ಕೊಂಡು ಹೋಗುವ ಭಾರವೂ ಇವನ ಮೇಲೆಯೇ ಬಿತ್ತು. ಈ ಆಜ್ಞೆಗಳಿಗನುಸಾರವಾಗಿ ಜಾರ್ಜ್ ವಾಶಿಂಗ್‌ಟನ್ ಅಲೆಕ್ಸಾಂಡ್ರಿಯಾಕ್ಕೆ ಹೋಗಿ ಸಮರಸನ್ನಾಹ ಮತ್ತು ಸೈನಿಕರ ಸೇರ್ಪಡೆಗಳ ಕಾರ್ಯಭಾರವನ್ನಾರಂಭಿಸಿದನು.

ಮಾರ್ಚ್ ತಿಂಗಳ ಅಂತ್ಯದಲ್ಲಿ ಅಲೆಕ್ಸಾಂಡ್ರಿಯಾದ ಕಾರ್ಲೈಲರ ಮನೆಯಲ್ಲಿ ಸೇರಿದ ವಿಹಾರಕೂಟಕ್ಕೆ ಇಂಥ ಸೇನಾ ಸನ್ನಾಹಾಂಗಣ ದಿಂದ ಬಂದ ಜಾರ್ಜ್ ವಾಶಿಂಗ್‌ಟನ್‌ನ ಮುಖವು ಕಾರ್ಯಭಾರದಿಂದ ಕಳೆಗುಂದಿತ್ತಾದರೂ ಸ್ನೇಹಿತರನ್ನು ಕಂಡೊಡನೆ ಮುಖವು ಅರಳಿತು. ಎಲ್ಲರೊಡನೆ ನಗು ಮುಖದಿಂದ ಮಾತನಾಡುತ್ತಿದ್ದ ಈತನು ಸೇಲ್ಲಿಯೊ ಡನೆ ಮೆಲ್ಲನೆ ಅತ್ಯಂತ ಆತ್ಮೀಯ ಭಾವದಿಂದ ಹೇಳಿದನು, "ನನಗೆ ಮುನ್ನುಗ್ಗಲು ಆಜ್ಞೆಯನ್ನೀಯಲಾಗಿದೆ".

ಸೇಲ್ಲಿಯ ಕಪ್ಪಾದ ಕಣ್ಣುಗಳು ಅಗಲಿಸಿದುವು. "ಓಹಿಯೋಕ್ಕೆ ಹೊರಡಬೇಕೆ? ಎಂದು ಹೊರಡಲಿರುವೆ ಜಾರ್ಜ್?"

"ಬಹುಶಃ ಒಂದು ವಾರದಲ್ಲಿ ನಾನು ನನ್ನ ಸೈನಿಕರೊಡನೆ ಮುನ್ನುಗ್ಗಬೇಕಾಗಿದೆ".

ಜೇಕಬ್ ವಾನ್‌ಬ್ರಾಮ್ ಮತ್ತು ಇನ್ನೊಬ್ಬ ಉಪಾಧಿಕಾರಿಗಳ ನ್ನೊಳಗೊಂಡ 150 ಮಂದಿ ಸುಸಜ್ಜಿತ ಜನರೊಡನೆ, ಈ ಜನರ ಎರಡು ತಂಡಗಳೊಡನೆ ಜಾರ್ಜ್ 2—4—1754 ರಲ್ಲಿ ಮುನ್ನುಗ್ಗಿದನು. ಅವಸರವಸರವಾಗಿ ಇಷ್ಟು ಅಲ್ಪಸಂಖ್ಯಾಕ ಪಂಗಡಗಳೊಡನೆ ಮುಂದರಿದ ಜಾರ್ಜ್ ವಾಶಿಂಗ್‌ಟನ್ನನಲ್ಲಿ ಮುಂದೆ ಸಂಭವಿಸಬಹುದಾದ ಅಪಮಾನ ಮತ್ತು ನಷ್ಟ ಕಷ್ಟಗಳ ಎಣಿಕೆಯ ಛಾಯೆಯೂ ಸುಳಿದಿದ್ದಿಲ್ಲ.

ವಾಶಿಂಗ್‌ಟನ್ ಹಿಡಿದುಬಿಡಬೇಕೆಂದು ಹವಣಿಸಿದ ಕೋಟೆಯನ್ನು ಇವನೂ, ಇವನ ಸೈನ್ಯವೂ ಹೋಗುವ ಮುಂಚಿತವಾಗಿಯೇ ಫ್ರೆಂಚರು ವಶಪಡಿಸಿಕೊಂಡುಬಿಟ್ಟಿದ್ದರು. ಇದರಿಂದ ದುಃಖಿತನಾದ ವಾಶಿಂಗ್‌ಟನ್

ಕರ್ನೆಲ್ ಜೋಶುವಾ ಫ್ರೈಯ ಸೇನೆಯು ಬರಬಹುದೆಂದೆಣಿಸಿ ಅವರು ಬರಬಹುದಾದ ಜಾಗ ವಿಲ್ಸ್‌ಕ್ರೀಕ್‌ಗೆ ತನ್ನ ಸೇನೆಯೊಡನೆ ತೆರಳಿದನು.

ಮೊನಂಘೇಲಾ (Mononghaela) ನದಿಯ ತನಕ ಒಂದು ರಸ್ತೆಯನ್ನು ಕಡಿಯಲಾರಂಭಿಸಿದ ವಾಶಿಂಗ್‌ಟನ್ ಅಪಾರ ಕಷ್ಟಗಳನ್ನನು ಭವಿಸಬೇಕಾಯಿತು. ಈತನ ಕೆಲಸಗಾರರಿಗೆ ಕೊಡುವಷ್ಟು ಹಣ, ಆಹಾರ ಸಾಮಗ್ರಿಗಳೂ ಇರಲಿಲ್ಲವಾದುದರಿಂದ ಒಬ್ಬೊಬ್ಬರಾಗಿ ಆ ಸೈನಿಕರು, ತಪ್ಪಿಸಿಹೋಗಹತ್ತಿದರು. ಇತ್ತ ಈತನಿಂದ ಮೇಲಧಿಕಾರಿಗಳಿಗೆ, ಗವರ್ನರನಿಗೆ, ಮತ್ತು ಇತರ ಪ್ರಾಂತ ವಸಾಹತುಗಳ ಗವರ್ನರರಿಗೆ ಬರೆದ ಕಾಗದಗಳಿಗೆ ಉತ್ತರವೂ ಬರುತ್ತಿದ್ದಿಲ್ಲ. ಹೀಗೆ ತಾನೊಬ್ಬನೇ ಯುದ್ಧಮುಖದಲ್ಲಿದ್ದ ಅನುಭವವು ಜಾರ್ಜ್ ವಾಶಿಂಗ್‌ಟನ್‌ನಿಗೆ ಉಂಟಾಯಿತು ಎನ್ನಲಡ್ಡಿಯಿಲ್ಲ.

ಬೇಹುಗಾರರಿಂದ ಬಂದ ವರ್ತಮಾನದ ಪ್ರಕಾರ ಇವರನ್ನು ಸುತ್ತುವರಿಯಲು ಫ್ರೆಂಚರು ಪ್ರಯತ್ನಿಸುತ್ತಿದ್ದಾರೆಂದು ತಿಳಿದುಬಂದಿತು. ಸೆನೆಕ್ಕಾ ಪ್ರಮುಖ ತುಂಡರಸನೊಬ್ಬನೊಡನೆ ಸೇರಿಕೊಂಡು ಫ್ರೆಂಚರನ್ನೆದುರಿಸುವುದೆಂದು ಜಾರ್ಜ್ ನಿಶ್ಚಯಿಸಿದನು.

ಬೆಳಗಿನ ಜಾವ ಇಂಡಿಯನರು ಪರ್ವತದಿಂದ ಮೆಲ್ಲನೆ ಕೆಳಗೆ ಇಳಿಯುತ್ತಿದ್ದ ಹೊತ್ತಿನಲ್ಲಿ ವಾಶಿಂಗ್‌ಟನ್ ಮತ್ತು ಆತನ ಮಂದಿ ಅಲ್ಲೇ ಮೇಲಿನಿಂದ ಇವರ ಇರುವಿಕೆಯ ಸುಳುವನ್ನೂ ತಿಳಿದರು. ಇವರನ್ನು ನೋಡಿದೊಡನೆ, 'ಹೊಡೆಯಿರಿ', ಎಂಬ ಆಜ್ಞೆಯನ್ನೀಯಲಾಯಿತು. ಸುಮಾರು ಕಾಲುಗಂಟೆಯತನಕ ನಡೆದ ಕದನದಲ್ಲಿ ಜಮುನ್‌ವಿಲ್ಲೆ ಮತ್ತು ಒಂಭತ್ತು ಇತರರು ಮಡಿದೊಡನೆ ಫ್ರೆಂಚರು ಶರಣುಹೋದರು.

ಈ ಸೆರೆಯಾಳುಗಳನ್ನು ಭೇಟಿಯಾಗಿ ವಿಲಿಯಮ್ಸ್ ಬರ್ಗ್‌ಗೆ ಈ ಸಂಬಂಧವಾದ ವರದಿಯೊಂದನ್ನು ಜಾರ್ಜ್ ಬರೆದನು. ಅದರಲ್ಲಿದ್ದ ವಿಚಾರವು ಇಷ್ಟೇ. "ಅವರೇನೋ ನಮ್ಮ ವಿಚಾರಗಳನ್ನು ತಿಳಿಯಲು ಬಂದಿದ್ದರಂತೆ ಅವರು ತಮ್ಮನ್ನು ರಾಯಭಾರಕ್ಕಾಗಿ ಬಂದವರೆಂದು ಹೇಳಿಕೊಂಡರು..."

ಹಾಗಾದರೆ ರಾಯಭಾರಕ್ಕಾಗಿ ಬಂದವರ ಮೇಲೆ ಯುದ್ಧವೆ? ಇಂಥ ಹೇಯ ಕೃತ್ಯವನ್ನೇ ವಾಶಿಂಗ್‌ಟನ್ ಮಾಡಿದನು ಎಂದು ಈತನನ್ನು ಕುರಿತು ಪ್ರತಿಯೊಬ್ಬನೂ, ಮುಖ್ಯ ಫ್ರೆಂಚ ಪ್ರಜೆಯೂ ಮಾತನಾಡು ವಂತಾಯಿತು. ಇಷ್ಟೇ ಅಲ್ಲದೆ, ಇಂಥ 'ತುಂಟ', 'ಹಿಂಸ್ರ' ಸೇನಾನಿ ವಾಶಿಂಗ್‌ಟನ್ನನನ್ನು ದಂಡಿಸಲು ವಿಲಿಯರ್ಸ್ (Villiers) 500 ಮಂದಿಯ ದಂಡೊಂದನ್ನು ಕರೆದುತಂದನು.

ಅಂತೂ ನೆಸೆಟಿಟೀ ಕೋಟೆಯ ಕದನವು ಭೀಕರವಾಗಿತ್ತು. ಇದರಲ್ಲಿನ ಕಷ್ಟನಷ್ಟಗಳು ವಿಪರೀತವಾದ ಕಾರಣ ಯುದ್ಧವನ್ನು ನಿಲ್ಲಿಸ ಲಾಯಿತು ಮಾತ್ರವಲ್ಲದೆ, ಒಪ್ಪಂದಶರ್ತಗಳನ್ನೂ ಬರೆಯಲಾಯಿತು.

ಶರ್ತಗಳನ್ನು ಫ್ರೆಂಚ ಭಾಷೆಯಲ್ಲಿ ಬರೆದ ನಿಮಿತ್ತ ಇದನ್ನು ಅರ್ಥಮಾಡಿಕೊಳ್ಳುವುದು ಜಾರ್ಜನಿಂದ ಸಾಧ್ಯವಿದ್ದಿಲ್ಲ. ಕುಟಿಲನಾದ ವಿಲಿಯರ್ಸ್, ಜೇಕೆಂತಲೇ ಅದರಲ್ಲಿ ಹೀಗೆ ಬರೆಸಿದ್ದನು. "ಆಂಗ್ಲರು ಒಬ್ಬ ಆಫೀಸರ್, ಇಬ್ಬರು ಇತರ ಕೆಳ ಆಫೀಸರರು ಹಾಗೂ ಜಮನ್‌ವಿಲ್ಲೇ (Jumonville)ಯನ್ನು ಕೊಲೆಮಾಡಿದಾಗ ಸೆರೆ ಹಿಡಿದ ಇತರ ಸೈನಿಕರೆಲ್ಲರನ್ನೂ ತಕ್ಕ ಸಿಬ್ಬಂದಿ ಮತ್ತು ರಕ್ಷೆಯೊಡನೆ ಹಿಂದೆ ಕಳುಹಿಸಬೇಕು."

ಫ್ರೆಂಚ್ ಭಾಷೆಯಲ್ಲಿ ಕೊಲೆಗೈದನೆಂದೇ ಬರೆದಿದ್ದರೂ, ಅದನ್ನು ಇಂಗ್ಲಿಷಿಗೆ ಭಾಷಾಂತರಿಸುವಾಗ ವಾನ್‌ಬ್ರಾಮ್ ತಪ್ಪಿ ಜಮನ್‌ವಿಲ್ಲೇ ಯುದ್ಧಮಾಡುವಾಗ ಮಡಿದಿದ್ದನು ಎಂದು ಹೇಳಿದ ನಿಮಿತ್ತ ನಿಜವಾದ ಅರ್ಥವನ್ನು ವಾಶಿಂಗ್‌ಟನ್ ಮಾಡಿಕೊಳ್ಳಲಿಲ್ಲ. ಆದರೆ ಈತನಿಗೆ ಅರ್ಥವಾಗಿತ್ತೆಂದೇ ವಿಲಿಯರ್ಸ್ ಬಗೆದನು. ಹೀಗೆ ತನ್ನ ಅಜ್ಞಾನದ ಫಲವಾಗಿ, ತನ್ನಲ್ಲಿ ತಕ್ಕಷ್ಟು ವ್ಯವಹಾರ ಕೌಶಲವಿಲ್ಲದ ಕಾರಣ ಜಾರ್ಜ್ ವಾಶಿಂಗ್‌ಟನ್ ಮುಂದೆ ಅಪಹಾಸ್ಯ ಮತ್ತು ಅವಹೇಳನಕ್ಕೀಡಾಗ ಬೇಕಾಯಿತು.

ಅಲ್ಲಿಂದ ಹಿಂದೆ ತನ್ನ ಮುಖ್ಯಪಟ್ಟಣದತ್ತ ಪ್ರಯಾಣಮಾಡು ವಾಗ ಈತನ ಹೃದಯವು ಭಾರವಾಗಿತ್ತು. ಪಟ್ಟಣವನ್ನು ಸೇರಿದೊಡನೆ ಈತನಿಗೆ ಮಿಶ್ರ ಸ್ವಾಗತವು ದೊರಕಿದರೂ ಬೆಲ್ವೈರ್‌ನಲ್ಲಿ ಈತನ ತಮ್ಮ

ಜೇಕ್ ಸಂಭ್ರಮದ ಸ್ವಾಗತವನ್ನಿತ್ತು ಸತ್ಕರಿಸಿದನು. ಮುಂದೆ ಪುನಃ ಈತನು ಸೈನಿಕರನ್ನೊಟ್ಟುಗೂಡಿಸಲು ಆರಂಭಿಸುವಷ್ಟರಲ್ಲಿ ಈತನೊಪ್ಪಿದ ಶರ್ತಗಳ ವಾರ್ತೆ ಈ ಊರನ್ನೂ ಮುಟ್ಟಿತು.

"ಈತನನ್ನು ಕೊಲೆಪಾತಕಿಯೆಂದು ಸಾರಿದ ಪತ್ರವನ್ನೇ ಈತನು ಸಹಿಮಾಡಿದ್ದಾನೆ. ಇಂಗ್ಲಿಷರು ತಪ್ಪಿತಸ್ಥರೆಂಬುದನ್ನು ಈತನು ಒಪ್ಪಿದಂತಾಗಿಲ್ಲವೆ? ಹೇಸಿಗೆ, ನಾಚಿಕೆ" ಎಂಬಿತ್ಯಾದಿ ಉದ್ಗಾರಗಳು ಎಲ್ಲೆಲ್ಲೂ ತನ್ನ ಊರಿನಲ್ಲೂ ಕೇಳಬಂದುವು. ಇದೆಲ್ಲವನ್ನೂ ಈತನು ಸಹಿಸಬೇಕಾಯಿತು.

ಇವನೊಡನೆಯೇ ವಾನ್‌ಬ್ರಾಮುನನ್ನೂ ಆತನ ತಿಳಿಗೇಡಿತನದ ಭಾಷಾಂತರಕ್ಕಾಗಿ ನಿಂದಿಸಲಾಯಿತು. ಇಷ್ಟೇ ಅಲ್ಲದೆ ಈತನು ಬೇಹುಗಾರರ, ತಮ್ಮನ್ನು ರಾಯಭಾರಿಗಳೆಂದು ಕರೆದ ಫ್ರೆಂಚ ಸೈನಿಕರನ್ನು ಕೊಂದುದನ್ನು ಗವರ್ನರ್ ಡಿನ್ವಿಡೀಯು ಸಮರ್ಥಿಸಿದನು.

ಆದರೇನು? ಜಾರ್ಜನ ಮನಸ್ಸು ನೊಂದಿತ್ತು. ಈತನ ಪ್ರತಿಷ್ಠೆಯೂ ಕಲಂಕಿತವಾದಂತಾಯಿತು. ಎಷ್ಟೆಂದರೂ ಗವರ್ನರನ ವರ್ತನೆಯಲ್ಲೂ ಸಾಕಷ್ಟು ಅಂತರವು ಎದ್ದುಕಾಣುತ್ತಿತ್ತು. ಸಾಲದುದಕ್ಕೆ ಸಪ್ತಂಬರ ದಾಟುವಷ್ಟರಲ್ಲೇ ವಸಾಹತುಗಳಲ್ಲಿ ಯಾವನೊಬ್ಬನೂ ಕಪ್ತಾನನ (Captain) ಪದವಿಗಿಂತ ಉಚ್ಚ ಪದವಿಯನ್ನು ಪಡೆಯತಕ್ಕುದಲ್ಲವೆಂದು ತೀರ್ಮಾನವಾಯಿತು. ಇದರಿಂದಾಗಿ ಜಾರ್ಜ್ ತನ್ನ ಪದವಿಯಲ್ಲಿ ಎರಡು ಅಂತಸ್ತು ಕೆಳಗಿಳಿಯಬೇಕಾಯಿತು.

ತನ್ನ ಸಾಹಸಗಳನ್ನೆಲ್ಲ ಅಲಕ್ಷಿಸಿಯೇ ತನ್ನನ್ನು ಕೆಳದರ್ಜೆಯ ನೌಕರನನ್ನಾಗಿ ನೇಮಿಸಿದರಲ್ಲ ಎಂಬ ಜುಗುಪ್ಸೆಯಿಂದ, ವಾಶಿಂಗ್‌ಟನ್, 'ಫೇರ್‌ಫೇಕ್ಸರೇ ಇದು ನನ್ನ ವೈಯಕ್ತಿಕ ಅವಹೇಳನವಲ್ಲ ನನ್ನಂಥ ಎಲ್ಲ ಪ್ರಾಮಾಣಿಕ ಜೀವಿಗಳ ಅವಹೇಳನವಿದು, ಆದುದರಿಂದ ಇದೀಗಲೇ ನಾನು ರಾಜೀನಾಮೆ ಕೊಡುತ್ತೇನೆ', ಎಂದು ಆರ್ಭಟಿಸುತ್ತ ಒಡನೆಯೇ ತನ್ನ ಪದವಿಗೆ ರಾಜೀನಾಮೆಯನ್ನಿತ್ತನು.

ದಶಂಬರದ 31ನೇ ತೇದಿ. ಅಂದು ಜನರಲ್ ಬ್ರೇಡ್ಡಕ್ ಸೇನಾಸಹಿತನಾಗಿ ಅತ್ತ ಬರುತ್ತಿರುವನೆಂದು ವಾಶಿಂಗ್‌ಟನ್‌ಗೆ ವಾರ್ತೆ ಬಂದಿತು.

ಇದನ್ನು ಕೇಳಿ ಈತನು ಪುಲಕಿತನಾದನು. ಹಾಗೆಯೇ ಸೇಲ್ಲಿಗೆ ಇದನ್ನು ತಿಳಿಸಲು ಆ ಕತ್ತಲಲ್ಲೂ ಧಾವಿಸಿದನು.

ಸೇಲ್ಲಿಯು ಈತನನ್ನು ಭೇಟಿಯಾದೊಡನೆ ಕಾತರಳಾಗಿ, 'ಏನು ನಡೆದಿದೆ ಜಾರ್ಜ್?' ಎಂದಳು.

'ಜನರಲ್ ಬ್ರೆಡ್ಡಕ್ ಸೇನಾಸಹಿತನಾಗಿ ಇತ್ತ ಬರುತ್ತಿದ್ದಾನೆ,' ಎಂದು ಒಂದೇ ಉಸುರಿನಿಂದ ಪ್ರತ್ಯುತ್ತರವು ಬಂದಿತು.

"ಹೌದೆ! ನಿನಗೆ ಇದನ್ನು ಕೇಳಿ ಸಂತೋಷವಾಯಿತೆ?"

"ಸಂತೋಷ! ದೇವರೇ ನಮ್ಮ ಆಪತ್ತಿನಲ್ಲಿ ಇಂಗ್ಲಿಷರ ಸೈನ್ಯದ ಮೂಲಕ ನೆರವಾಗಲಿರುವನೆಂಬುದು ಮಹಾ ಸಂತೋಷದ ಸುದ್ದಿಯೇ ಸರಿ".

'ಆದರೆ, ನನ್ನ ಅವಶ್ಯಕತೆಯನ್ನು ಅವರು ತಿಳಿದುಕೊಳ್ಳಬಲ್ಲರೆ?' ಎಂದನ್ನುತ್ತ ಜಾರ್ಜ್ ಅಗ್ಗಿಷ್ಟಿಕೆಯ ಮರದ ತುಂಡುಗಳನ್ನು ಕಾಲಿನಿಂದ ತುಳಿದು ಸರಿಪಡಿಸುತ್ತ, 'ಆಗಲಿ, ಪಶ್ಚಿಮ ಪ್ರಾಂತದ ಕಾವಲಿಗಾದರೂ ಗವರ್ನರ್ ಡಿನ್ವಿಡೀಯು ಸೇನೆಯನ್ನು ಕಳುಹಿದನಲ್ಲ. ಈ ಬಗ್ಗೆಯಾದರೂ ಆತನಿಗೆ ನನ್ನ ಧನ್ಯವಾದಗಳು "ಅಲ್ಲದೆ ನಾನು ಎಂಥ ಕಾರ್ಯಕ್ಕೂ ಸಿದ್ಧನಿರುವೆ" ಎಂದು ಬಹಳ ಮೆಲ್ಲನೆ ಮುಂದರಿಸಿದನು.

'ಆಗಲಿ, ನಿನ್ನ ಧೈರ್ಯ ಮತ್ತು ಸ್ಫೂರ್ತಿಗಳು ಪ್ರಶಂಸಾರ್ಹವಾಗಿವೆ ಅದೃಷ್ಟಹೀನ ಜಾರ್ಜ್, ಇಷ್ಟರ ತನಕ ಯುದ್ಧದಲ್ಲೂ ನಿನ್ನ ಸ್ನೇಹ ಪ್ರೀತಿಗಳ ವಿಚಾರಗಳಲ್ಲೂ ಅದೃಷ್ಟವು ನಿನಗೆ ವಿಮುಖವಾಗಿದೆ! ಆದರೆ ಮುಂದೆ ಯಶಸ್ವಿಯಾಗುವೆ, ಕಾತರ ಪಡಬೇಡ', ಎಂಬ ಮಾತುಗಳು ಸೇಲ್ಲಿಯ ಬಾಯಿಯಿಂದ ಉದುರಿದುವು.

ಅಧ್ಯಾಯ ೫

ರಣಭೇರಿಗಳ ಅಬ್ಬರದ ನಿನಾದ ಮತ್ತು ಕಹಳೆಗಳ ಕೂಗುಗಳಿಗೆ ತಕ್ಕಂತೆ ತಾಳಬದ್ಧವಾಗಿ ಕಸರತ್ತು ನಡೆಸುತ್ತಿರುವ ಸಮವಸ್ತ್ರಧಾರಿಗಳಾದ ಸೈನಿಕರ ಪಡೆಯು ಚೌಕಾಕಾರವಾಗಿ ನಿಂತುದನ್ನು ಕಂಡು ಆ ಪಡೆಯ ನಾಯಕನಾದ ಇಂಗ್ಲಿಷ್ ಸೇನಾನಿಯು, "ನೋಡು ವಾಶಿಂಗ್‌ಟನ್, ಇಂಥ ಶಿಸ್ತಿನ ಸೈನಿಕರನ್ನು ಈತನಕ ನೋಡಿರುವೆಯೊ?", ಎಂದು ಪ್ರಶ್ನಿಸಿದನು.

ತನ್ನ ಕುದುರೆಯನ್ನು ಪೃಚ್ಛಕನ ಮುಂದೆ ನಿಲ್ಲಿಸುತ್ತ, "ಸರ್ ಪೀಟರ್, ಇದಾದರೋ ಅತ್ಯುತ್ತಮತರದ ಪಡೆಯಾಗಿದೆ. ಈ ಭಾಗಗಳಲ್ಲಿ ಇಷ್ಟು ಶಿಸ್ತಿನ ಸೈನ್ಯವನ್ನು ನಾವೆಲ್ಲಿ ಈತನಕ ಕಂಡಿದ್ದೇವೆ?" ಎಂದು ಜಾರ್ಜ್ ಉತ್ತರಿಸಿದನು.

"ವಾಶಿಂಗ್‌ಟನ್, ನೀನಾದರೂ ಜನರಲ್ ಬ್ರೇಡ್ಡಕ್‌ರ ಹತ್ತಿರ ಮಾತನಾಡಿರುವೆಯಾ?" ಎಂದು ಪೀಟರ್ ಹಾಲ್ಕೆಟ್ ಪುನಃ ಪ್ರಶ್ನಿಸಿದನು.

"ಕರ್ನೆಲ್, ಇನ್ನೂ ಇಲ್ಲ." ಎಂಬ ಮೆಲುದನಿಯ ಉತ್ತರವು ಬಂದಿತು. ಇಂಥ ಅಭೂತಪೂರ್ವ ಶಿಸ್ತಿನ ಚಟುವಟಿಕೆಗಳಲ್ಲಿ ಏನೊಂದೂ ಭಾಗವಹಿಸಲು ಆಗದೆ ಇದ್ದುದು ಜಾರ್ಜನ ಪಾಲಿಗೆ ದೊಡ್ಡ ಸಂಕಟವಾಗಿತ್ತು.

ಮರುದಿನವಂತೂ ಬೆಲ್ವಾಯ್ರ್‌ನಲ್ಲಿ ವಿಲಿಯಮ್ ಫೇರ್‌ಫೇಕ್ಸ್‌ರ ಮನೆಯಲ್ಲಿ ಅನೇಕಮಂದಿ ಕುಳಿತಿದ್ದರು. ವಿಲಿಯಮ್ ಫೇರ್‌ಫೇಕ್ಸ್, ಜ್ಹೋನ್ ಕಾರ್ಲೈಲ್, ಜಾರ್ಜ್ ಫೇರ್‌ಫೇಕ್ಸ್ ಎಲ್ಲರೂ ತಮ್ಮಷ್ಟಕ್ಕೆ ಹಾಯಾಗಿ ಕುಳಿತು ಹೊಗೆಬತ್ತಿ ಸೇದುತ್ತಿದ್ದರು. ಇವರೆದುರಿಗೆ ನಿರ್ವಿಣ್ಣನಾಗಿ ಜಾರ್ಜ್ ಸದ್ದಿಲ್ಲದೆ ಯೋಚನಾಪರನಾಗಿ ಕುಳಿತಿದ್ದನು. ಎಲ್ಲರೂ ಸ್ವಲ್ಪ ಸಮಯ ಸದ್ದಿಲ್ಲದೆ ಕುಳಿತನಂತರ ಜಾರ್ಜ್ ಫೇರ್‌ಫೇಕ್ಸ್ ತಂದೆಯ ಹತ್ತಿರ "ಜಾರ್ಜ್ ವಾಶಿಂಗ್‌ಟನ್ ಯುದ್ಧದಲ್ಲಿ ಭಾಗವಹಿಸು

ವುದೇ ಆದರೆ, ಜನರಲ್ ಬ್ರೆಡ್ಡಕನ ಸೇನೆಯುನ್ನು ಕೆಪ್ತಾನನ ಸ್ಥಾನದಲ್ಲಿ ಏತಕ್ಕೆ ಸೇರಬಾರದು?" ಎಂದು ಪ್ರಶ್ನಿಸಿದನು.

"ಸರಿ; ಆದರೆ ಕೆಪ್ತಾನನಾಗಿ ಸೇರ್ಪಡೆಯೆಂದರೆ ನಾನು ಈಗಿನ ಸ್ಥಾನದಿಂದ ಎರಡು ಸ್ಥಾನ ಕೆಳಗೆ ಇಳಿದಂತೆಯೇ! ಅದು ಸರಿಯೆ? ಆದರೆ ಇನ್ನು ಸ್ವಯಂಸೇವಕನಾಗಿ ಈ ಸೇನೆಯಲ್ಲಿ ಕೆಲಸಮಾಡಬಹುದು", ಎಂದು ಜಾರ್ಜ್ ವಾಶಿಂಗ್‌ಟನ್‌ನಿಂದ ಉತ್ತರವು ಬಂದಿತು.

ಆನಂತರ ಮೂರೂ ಮಂದಿ ಅಮೇರಿಕದಲ್ಲಿ ಆಂಗ್ಲ ಸೈನ್ಯವು ಹೇಗೆ ಮುಂಬರಿಯತಕ್ಕುದು ಎಂಬ ಬಗ್ಗೆ ವಿಚಾರಮಾಡಲಾರಂಭಿಸಿದರು. ನ್ಯಾಗರಾ ನದಿಯಲ್ಲಿನ ನ್ಯಾಗರಾದಿಂದ ಒಂದು ಪಂಗಡವು ಮುಂದೊತ್ತುತ್ತಿದ್ದಂತೆ, ಎರಡನೆಯ ಪಂಗಡವು ಒಂಟೇರಿಯೋ ಸರೋವರದ ಫ್ರಂಟಿನೇಕ್ ಕೋಟೆಯ ಹತ್ತಿರದಲ್ಲೂ ಮತ್ತೊಂದು ಪಂಗಡವು ಚೇಂಪ್ಲೈನ್ ಸರೋವರದ ಕ್ರೌನ್‌ಪ್ಯಾಂಟ್ ಎಂಬಲ್ಲಿಂದಲೂ ಮುಂದರಿಯತಕ್ಕುದು. ಮತ್ತು ಕೊನೆಗೆ ಜನರಲ್ ಬ್ರೆಡ್ಡೋಕ್ ಓಹಿಯೋ ಸಂಗಮದ ಡಕ್ವೆ ಕೋಟೆಯನ್ನು ವಶಪಡಿಸತಕ್ಕುದು ಎಂಬ ವಿವರಗಳನ್ನು ಇವರು ಚರ್ಚಿಸುತಿದ್ದರು.

ಜಾರ್ಜ್ ಇವರನ್ನು ಬಿಟ್ಟು ಹೊರಕ್ಕೆ ಹೋಗುವಾಗ ಅವನೊಡನೆಯೇ ಜೋರ್ಜ್ ಫೆರ್‌ಫೇಕ್ಸನೂ ಹೊರಗೆ ತೆರಳಿದನು. ಮತ್ತು ಮೆಲ್ಲನೆ, "ನಿನ್ನಪರವಾಗಿ ಸೇಲ್ಲಿಯು ಜನರಲ್ ಬ್ರೆಡ್ಡೋಕ್‌ರೊಡನೆ ಎರಡು ಮಾತುಗಳನ್ನಾಡಿದ್ದಾಳೆ. ಆದುದರಿಂದ ಸದ್ಯದಲ್ಲೇ ನೀನೇನನ್ನಾದರೂ ಆಜ್ಞೆಯನ್ನು ಪಡೆಯುವ ಸಂಭವ,' ಎಂದನು.

ವಾಶಿಂಗ್‌ಟನ್‌ನ ಮುಖವೆಲ್ಲಾ ಮಾತಾಯಿತು, "ಬಹಳ ಉಪಕೃತನಾದೆ, ನಿನ್ನ ಮಡದಿಗೆ ಧನ್ಯವಾದಗಳು. ಆದರೆ ನನ್ನ ಸ್ಥಾನಮಾನಗಳ ಕಾರಣದಿಂದ ನನ್ನನ್ನು ಅವರು ಸ್ವೀಕರಿಸುವರೋ ಕಾಣೆ" ಎಂದನು.

ಮರುದಿನವೇ ಬೆಲ್ವ್ಯಾರನ್ನು ಆತನು ಬಿಟ್ಟು ಹೋಗುವಷ್ಟರಲ್ಲಿ ಜನರಲ್ ಬ್ರೆಡ್ಡೋಕ್‌ನ ಉಪಾಧಿಕಾರಿ (aid-de-camp) ರಾಬರ್ಟ್ ಓರ್ಮಿಯಿಂದ ಬರೆಯಲ್ಪಟ್ಟ ಕಾಗದವನ್ನು ಈತನಿಗೆ ತಲಪಿಸಲಾ

ಯಿತು. ಈತನೂ ರಾಬರ್ಟ್‌ನ ಸ್ಥಾನಮಾನಗಳನ್ನೂ ಪಡೆವುದೆಂದೇ ಸಿದ್ಧಾಂತವಾಗಿತ್ತು.

"ಆದರೆ ಸಂಬಳದ ವಿಚಾರ ಇಲ್ಲಿ ಬರೆದಿಲ್ಲ," ಎಂದು ವಿಲಿಯಮ್ ಫೇರ್‌ಫೇಕ್ಸರು ತನ್ನ ಅತೃಪ್ತಿಯನ್ನು ಸೂಚಿಸಿದರು.

"ಗಾಬರಿ ಇಲ್ಲ, ನನ್ನ ಖರ್ಚಂತೂ ಹೋಗುತ್ತದೆಯಷ್ಟೆ," ಎಂದು ಉತ್ಸಾಹದಿಂದ ಜಾರ್ಜ್ ವಾಶಿಂಗ್‌ಟನ್ ಈ ಸಮಸ್ಯೆಯನ್ನು ನಿವಾರಿಸಿದನು. ಸೇಲ್ಲಿಯು ಆನಂದಭರಿತಳಾದಳು, ಆತನಿಗೆ ವಿಜಯದ ಆಶ್ವಾಸನೆಯನ್ನಿತ್ತಳು. ಅಂತೂ ಅವಳ ಭವಿಷ್ಯನುಡಿಯು ಸತ್ಯವಾಗುವುದರಲ್ಲಿತ್ತು.

× × × × ×

ವಾಶಿಂಗ್‌ಟನ್‌ನನ್ನು ಅಭಿನಂದಿಸುತ್ತ, "ನಿಜಕ್ಕಾದರೂ ನೀನು ಬಹಳ ಕಾಲ ಆಂಗ್ಲ ಸೇನೆಯಲ್ಲೇ ಪಳಗಿದವನಂತೆ ಕಾಣುತ್ತಿರುವೆ," ಎಂದು ಡಾ। ಜೇಮ್ಸ್ ಕ್ರೈಕ್ ಶ್ಲಾಘನೆಯ ಮಾತುಗಳನ್ನು ಹೇಳಿದರು. ತನ್ನ ಸಮವಸ್ತ್ರ ಮತ್ತು ಠೀವಿಯಿಂದ ನಿಜವಾದರೂ ಜಾರ್ಜ್ ತುಂಬಾ ಪಳಗಿದ ವೀರನಂತೆ, ಧೀರನಂತೆ ಕಾಣುತ್ತಿದ್ದನು.

ಮತ್ತೂ ಮುಂದರಿಸಿ, "ಬ್ರೆಡ್ಡೋಕರನ್ನು ಭೇಟಿಯಾದೆಯೋ? ಅವರು ಹೇಗೆ ಕಾಣುತ್ತಾರೆ? ಎಂದು ಕ್ರೈಕ್ ಪ್ರಶ್ನಿಸಿದನು

ಸಂತಸದಿಂದ ಹಲ್ಲುಬಿಡುತ್ತ, "ಓಹೋ ಬಹಳ ಒಳ್ಳೆಯ ಮನುಷ್ಯರು" ಎಂದು ಜಾರ್ಜ್ ಅಂದು ಸ್ವಲ್ಪಕಾಲ ಮೌನದಲ್ಲಿದ್ದನು. ಮತ್ತೆ ಪುನಃ, "ಅವರೇ ನನ್ನನ್ನು ಗವರ್ನರರ ಸಭೆಯಲ್ಲಿ ಭಾಗವಹಿಸುವಂತೆ ಆಜ್ಞೆಯನ್ನಿತ್ತಿರುವರು. ಆದರೆ, ನನ್ನ ಕೇವಲ ಕೈಬೆರಳೆಣಿಕೆಯ ಯುದ್ಧಗಳಷ್ಟನ್ನೇ ಮಾಡಿರುವ ನನ್ನಂಥ ಪಾಮರನ ಮಾತುಗಳಿಗೆ ಅವರೇನು ಮನ್ನಣೆ ಕೊಟ್ಟಾರು, ಎನ್ನಿಸುತ್ತದೆ; ಅಲ್ಲದೆ ಇಂಥ ಕಾರಡವಿಗಳಲ್ಲಿನ ಯುದ್ಧಗಳ ಪರಿಯೇ ಬೇರೆ," ಎಂದು ಮುಂದರಿಸಿದನು.

ಕ್ಷಣ ಹೊತ್ತು ಗಂಭೀರನಾಗಿ ಕ್ರೈಕ್ ಉತ್ತರಿಸಿದನು, "ನಾನು ಇವರೊಡನೆ ವೈದ್ಯನಾಗಿ ಹೋಗುತ್ತಿದ್ದೇನೆ. ಕೆಲವರನ್ನಾದರೂ ನಾನು ಉಳಿಸಬಲ್ಲೆನಷ್ಟೆ."

ಅಂತೂ ಈ ವಸಾಹತುಗಳ ಗವರ್ನರರು ಸಭೆಕೂಡಿ ತೆರಿಗೆಯ ಕುರಿತು ಚರ್ಚಿಸಿದರು. ತೆರಿಗೆಯನ್ನು ಹೊರಿಸುವ ಮುಂಚೆ ಅದನ್ನು ಖರ್ಚುಮಾಡುವ ವಿಧಾನವನ್ನೆಲ್ಲ ತಿಳಿಯತಕ್ಕದೆಂದೇ ಅವರೆಲ್ಲರ ತೀರ್ಮಾನವಾಗಿತ್ತು.

"ಈ ವಸಾಹತುಗಳ ಪ್ರಜೆಗಳು ತೆರಿಗೆಗಳನ್ನು ಕೊಡಲೇಬೇಕು" ಎಂದು ಗವರ್ನರರು ತೀರ್ಮಾನಿಸಿದರು, ಅಂತೂ ಆಂಗ್ಲ ಚಕ್ರಾಧಿಪತ್ಯ ದಿಂದ ಹೇರಲ್ಪಟ್ಟ ನೇರಾದ ತೆರಿಗೆಯ ವಿಧಾನವಿದು. ಇದೇ ಮುಂದಕ್ಕೆ ಅಮೇರಿಕದಲ್ಲಿನ ಕ್ರಾಂತಿಗೆ ಕಾರಣವಾಯಿತು.

ಕೊನೆಯಬಾರಿ ಸೇಲ್ಲಿ ಫೇರ್‌ಫೇಕ್ಸಳ ದರ್ಶನಕ್ಕಾಗಿ ಹೋದ ಜಾರ್ಜ್‌ನಿಗೆ, "ಬಹಳ ಸೊರಗಿರುವೆ, ಜಾರ್ಜ್, ನಿನ್ನಿಂದ ಈ ಸಾಹಸವು ಸಾಧ್ಯವೆ? ಎನಿಸುತ್ತಿದೆ" ಎಂದು ಸ್ವಲ್ಪ ಸಾಶಂಕಳಾಗಿಯೇ ಸೇಲ್ಲಿ ಪ್ರಶ್ನಿಸಿದ್ದಳು. ಆದರೆ ಆತನನ್ನು ಉತ್ತರಗೊಡಲು ಬಿಡದೆ, ಚಮತ್ಕಾರ ದಿಂದ ಆತನಲ್ಲಿದ್ದ ತನ್ನ ಅಭಿಮಾನ ಸ್ನೇಹಗಳನ್ನು ವ್ಯಕ್ತಪಡಿಸಿ ಜಾರ್ಜ ನನ್ನು ಬೀಳ್ಕೊಟ್ಟಳು.

x x x x

ಬ್ರೆಡ್ಡೋಕನು ಅಲ್ಲಿ ಬೀಡು ಬಿಟ್ಟ ಕಾಲದಲ್ಲಿ ಫ್ರೆಡರಿಕ್ ಇನ್ ಮೇರಿಲೆಂಡ್ (Frederick in Merry land)ಚಿಕ್ಕ ಗುಡಿಸಲುಗಳ ಗುಂಪು. ಅಲ್ಲಿಗೆ ಒಂದು ದಿನ ಬೆಂಜಮಿನ್ ಫ್ರೇಂಕ್ಲಿನ್ ಬಂದಿಳಿದನು.

ಊಟ ಮಾಡುತ್ತಿರುವ ವೇಳೆ, ಕೆಪ್ತಾನ್ ಮೊರಿಸ್ ಜಾರ್ಜ್ ನೊಡನೆ, "ಅದೇಕಪ್ಪಾ, ನಿನಗೆ ಬೆಂಜಮಿನ್ ಫ್ರೇಂಕ್ಲಿನ್‌ರ ಹೆಸರನ್ನು ಹೇಳಿದರೆ, ಕೇಳಿದರೆ ಅಷ್ಟು ಉತ್ಸಾಹ. ಅಭಿಮಾನ? ಏನೋ ದಪ್ಪನಾದ ಒರಟು ವಸ್ತ್ರಗಳಲ್ಲಿನ ಅಂಚೆ ಮಾಸ್ತರನಂತೆ ಈತ ಕಾಣುತ್ತಿದ್ದಾನೆ" ಎಂದನು.

ಒಡನೆಯೇ ಉತ್ತರ ಬಂದಿತು. "ಆತನೋ ಅತ್ಯದ್ಭುತ ಮೇಧಾವಿ; ಆತನಿಂದ ಖಂಡಿತವಾಗಿಯೂ ನಮಗೆ ಉಪಕಾರವಾಗಲಿದೆ".

ಅತ್ತ ಫ್ರೇಂಕ್ಲಿನನೂ ಬ್ರೆಡ್ಡೋಕ್‌ನೊಡನೆ ಹೇಳುತ್ತಲಿದ್ದನು, "ಅಲ್ಲಲ್ಲಿ ಅಡಗಿರುವ ಇಂಡಿಯನರಿಂದಲೇ ನಿಮ್ಮ ಮುನ್ನಡೆಗೆ ತೊಂದರೆಯಾಗಲಿದೆ".

ಇದನ್ನು ಕೇಳಿದ ವಾಶಿಂಗ್‌ಟನ್ನನೂ ಗಂಭೀರನಾಗಿ ಇದನ್ನೇ ಆಲಿಸುತ್ತ ಕುಳಿತನು. ಇದೇ ಯೋಚನೆ--ಹೆದರಿಕೆ—ಆತನನ್ನೂ ಕೆಲ ದಿನಗಳಿಂದ ಬಾಧಿಸುತ್ತಲಿತ್ತು.

ವ್ಯಂಗ್ಯವಾಗಿ ನಗುತ್ತ, ಬ್ರೆಡ್ಡೋಕ್ ಉತ್ತರಿಸಿದರು, "ಅದೇನು ಮಹಾ?! ಹೆಚ್ಚಿನ ತರಬೇತಿ, ಶಿಸ್ತುಗಳಿಲ್ಲದ ನಿಮ್ಮ ಯೋಧರಿಗೆ ಮಾತ್ರ ಅವರು ಉಪದ್ರವ ಕೊಡಲಾಪರು, ನಮ್ಮ ಶಿಸ್ತಿನ ಸೈನ್ಯದ ಮುಂದೆ ಅವರದೆಲ್ಲವೂ ವ್ಯರ್ಥವೇ ಸರಿ".

ಈ ಉತ್ತರವನ್ನು ಕೇಳಿದ ಫ್ರೇಂಕ್ಲಿನ್ ಕ್ಷಣಕಾಲ ನೀರವವಾಗಿ ಕುಳಿತು ತಮ್ಮ ಭುಜಗಳನ್ನು ಮಾತ್ರ ಹಾರಿಸಿ ಮತ್ತೂ ತಮ್ಮ ಸಂದೇಹವನ್ನು ವ್ಯಕ್ತಪಡಿಸಿದರು. ಆದರೂ ತಮ್ಮ ಎಲ್ಲಾ ಸಹಾಯವನ್ನು ಕೊಡುವುದಾಗಿ ಭರವಸೆಯಿತ್ತು ಫ್ರೇಂಕ್ಲಿನ್ ಶಿಬಿರವನ್ನು ಬಿಟ್ಟರು ಅವರ ಆಶ್ವಾಸನೆಯಂತೆಯೇ 150 ಕುದುರೆ ಬಂಡಿ ತುಂಬಾ ಧಾನ್ಯವನ್ನು ಈ ಸೈನ್ಯಕ್ಕೆ ಒದಗಿಸಲಾಯಿತು. ಇವನ್ನು ಬಹಳ ಕಷ್ಟದಿಂದ ಮುಟ್ಟಿಸಲಾಯಿತು. ಮಾತ್ರವಲ್ಲದೆ, ಈ ಬಂಡಿಗಳನ್ನು ಪುನಃ ಆಯಾಯ ರೈತರಿಗೆ ಮುಟ್ಟಿಸುವುದು ಅಸಾಧ್ಯವಾದ ನಿಮಿತ್ತ ತನ್ನ ಕೈಯಿಂದ 20,000 ಪವನು ಹಣಗಳಷ್ಟು ಹಣವನ್ನು ಫ್ರೇಂಕ್ಲಿನರೇ ತುಂಬಿಸಬೇಕಾಯಿತು.

x x x x

ವಿಲ್ಸ್‌ಕ್ರೀಕ್‌ನಲ್ಲಿ ಬ್ರೆಡ್ಡೋಕ್ ತುಂಬಾ ಸಂಕಷ್ಟಗಳನ್ನೆದುರಿಸಿದನು. ಭಾರತರವಾದ ವಾಹನಗಳನ್ನೂ, ಗನ್ನುಗಳನ್ನೂ ಬಿಡಲೇಬೇಕೆಂದು ಜಾರ್ಜ್ ಪದೇ ಪದೇ ಉಪದೇಶಿಸಲೇಬೇಕಾಯಿತು.

ಯೊಗಿಯೋಗ್ಹೆನಿಯನ್ನು ಮುಟ್ಟುವಷ್ಟರಲ್ಲಿ ಜಾರ್ಜ್ ತುಂಬಾ ನಿಶ್ಶಕ್ತನಾದನು. ಕುದುರೆಯ ಮೇಲೆ ಸವಾರಿ ಮಾಡಲಾಗದ ನಿಮಿತ್ತ ಈತನನ್ನು ಒಂದು ಬಂಡಿಯಲ್ಲಿ ಮಲಗಿಸಲಾಯಿತು ಆದರೆ ಅದರಲ್ಲೂ

ಈತನ ಅವಸ್ಥೆಯು ಅತ್ಯಂತ ದುಃಖಿತವಾದ ಕಾರಣ ಈತನನ್ನು ಅಲ್ಲೇ ಬಿಟ್ಟು ಸೈನ್ಯವು ಮುಂದರಿಯಿತು.

ಕರ್ನೆಲ್ ಡನ್ಬಾರ್‌ನ ಸೈನ್ಯದಲ್ಲಿದ್ದ ಉತ್ತಮ ಬಂಡಿಯೊಂದರಲ್ಲಿ ಮಲಗಿಕೊಂಡೇ ಜಾರ್ಜ್ ಮುಂದರಿದನು. ಅಂತೂ ಜಲೈ 8ರಂದು ಡಕ್ಸ್ನ (Duquesne)ಯಿಂದ ಹತ್ತು ಮೈಲು ದೂರದಲ್ಲಿ ಬ್ರೆಡ್ಡೋಕ್ ಬೀಡು ಬಿಟ್ಟನು. ಯಾವ ಕಾಲಕ್ಕೂ ಫ್ರೆಂಚರೊಡನೆ ಯುದ್ಧವು ಸಾಧ್ಯವಿದ್ದ ಈ ಸಮಯದಲ್ಲಿ ಜ್ವರ, ನಿಶ್ಯಕ್ತಿಗಳಿಂದ ನಡುಗುತ್ತಿದ್ದರೂ ಜಾರ್ಜ್ ತಾನೂ ಅಶ್ವಾರೂಢನಾಗಿ ಬ್ರೆಡ್ಡೋಕ್ ಇದ್ದಲ್ಲಿಗೆ ಧಾವಿಸಿದನು.

ಮೊನೊಂಘೀಲಾ ಕಡವನ್ನು ದಾಟಿ ಮುಂದುವರಿದಂತೆ ಜಾರ್ಜ ನಲ್ಲಿ ಆವೇಶವು ಬಂದಂತಾಯಿತು. ಈತನು ಬ್ರೆಡ್ಡೋಕನ ಸಮೀಪ ವರ್ತಿಯಾಗಿಯೇ ಇದ್ದು ಆತನ ಆದೇಶದ ಮೇರೆಗೆ ಮುಂದೆ, ಹಿಂದೆ ಧಾವಿಸುತ್ತ ವರದಿಯನ್ನು ಎಲ್ಲಾ ಪಡೆಗಳಿಗೂ ಮುಟ್ಟಿಸುತ್ತಿದ್ದನು. ಮಧ್ಯಾಹ್ನ ಇವರ ಸೇನೆಯು ಆಹಾರಕ್ಕಾಗಿ ನಡುಕಾಡಿನಲ್ಲಿ ತಂಗಿತು.

ಅಷ್ಟರಲ್ಲೇ ಗುಂಡುಗಳ ಸದ್ದು ಇವರೆಲ್ಲರನ್ನೂ ದಂಗು ಬಡಿಸಿ ಅವಾಕ್ಕಾಗಿಸಿತು. ಜಾರ್ಜ್ ನಿಶ್ಯಕ್ತನಾಗಿದ್ದರೂ ಸಮಯೋಚಿತವಾಗಿ ಸನ್ನದ್ಧನಾದನು.

ಆದರೇನು? ವೈರಿಗಳೆಲ್ಲಿ? ಆಂಗ್ಲ ಸೈನಿಕರು ಎತ್ತ ಮುಂದರಿಯ ತಕ್ಕುದು? ಯಾರನ್ನು ಹೊಡೆಯತಕ್ಕುದು? ಎಂದು ಯೋಚಿಸುವಷ್ಟು ಸಮಯವಿಲ್ಲದೆಯೇ ಇವರ ಮೇಲೆ ನಾಲ್ಕೂ ಕಡೆಗಳಿಂದ ವೈರಿಗಳು ಬಂದು ಬಿದ್ದರು. ನೆಟ್ಟಗೆ ನಿಲ್ಲುವಷ್ಟರಲ್ಲಿ ಮತ್ತು ಆಫೀಸರರೂ ತಯಾರಾಗುವಷ್ಟರಲ್ಲಿ ಆಜ್ಞೆಗಳನ್ನು ಕೊಡುವ ಮುಂಚಿತವಾಗಿಯೇ ಅನೇಕರ ರುಂಡಗಳು ಧರೆಯನ್ನು ಚುಂಬಿಸಿದುವು. ಅಕಸ್ಮಾತ್ತಾಗಿ ತಮ್ಮ ಮಧ್ಯೆ ಈ ಘೋರ ವಿಪತ್ತನ್ನು ಕಂಡ ಆಂಗ್ಲ ಸೈನಿಕರು ಸಿಕ್ಕತ್ತ ಧಾವಿಸಲನುವಾದರು.

ಧೀರನಾದ ಬೆಡ್ರೋಕನು ತನ್ನ ಎಲ್ಲ ಸಾಹಸ ಧೈರ್ಯಗಳಿಂದ ಈ ವಿಪತ್ತಿನಿಂದ ತಪ್ಪಲು ಶಕ್ತನಾಗಲಿಲ್ಲ. ಈತನ ಜನರು ಓಡ ಲಾರಂಭಿಸಿದರು. ಅವರನ್ನು ತಡೆಹಿಡಿಯಲು ಯತ್ನಿಸುವ ವೇಳೆ ಚಾಟ

ಯಿಂದ ಒಬ್ಬನನ್ನು ಹೊಡೆದನೆಂಬ ಕೋಪದಿಂದ ಆತನ ಸೋದರನೇ ಬ್ರೆಡ್ಡೋಕನನ್ನು ಗುರಿಯಿಟ್ಟು ತುಪಾಕಿಯಿಂದ ಹೊಡೆದನು.

ಜಾರ್ಜ್ ವಾಶಿಂಗ್‌ಟನ್ ಅಲ್ಲೇ ಹತ್ತಿರದಲ್ಲಿದ್ದನು. ಅವನ ಹತ್ತಿರವಲ್ಲೇ ಮೂರು ಕುದುರೆಗಳು ಸತ್ತು ಬಿದ್ದುವು, ಆತನ ವಸ್ತ್ರಗಳನ್ನೂ ಹಲವು ಗುಂಡುಗಳು ಬೇಧಿಸಿದ್ದುವು. ಆದರೆ ಮೃತ್ಯುವು ಮಾತ್ರ ಇವನನ್ನಪ್ಪಿಕೊಳ್ಳಲಿಲ್ಲವೆಂದರೂ ಉತ್ಪ್ರೇಕ್ಷೆಯಿಲ್ಲ.

ಬ್ರೆಡ್ಡೋಕನ ಶವದ ಮೇಲೆ ಬಿದ್ದು ಅಳುತ್ತ, ಜರೆಯುತ್ತ ಮತ್ತು ಇಲ್ಲದ ಇನಾಮುಗಳ ಆಸೆಯನ್ನು ಹುಟ್ಟಿಸುತ್ತ ರೋಬರ್ಟ್ ಓರ್ಮಿಯು ಬ್ರೆಡ್ಡೋಕನ ಶವವನ್ನು ಹಿಂದಕ್ಕೆ ಕೊಂಡೊಯ್ಯುವಂತೆ ಆಜ್ಞಾಪಿಸಿದನು. ಆದರೆ ಕೇಳುವವರಾರು? ಕೊನೆಗೆ ಜಾರ್ಜ್ ವಾಶಿಂಗ್‌ಟನ್ ಮತ್ತು ಬ್ರೆಡ್ಡೋಕನ ಸೇವಕ ಬಿಶಪ್ ಇವರೀರ್ವರು ಆತನ ಸಮವಸ್ತ್ರದಿಂದಲೇ ಈತನ ದೇಹವನ್ನೆತ್ತಿ ಕುದುರೆಯ ಮೇಲಿಟ್ಟು, ಅದನ್ನು ಹಿಂದಕ್ಕೆ ಕೊಂಡೊಯ್ದರು.

ಬ್ರೆಡ್ಡೋಕನು ಸೋಲಿನ ದೋಷಾರೋಪಣೆಗೆ ಅರ್ಹನಲ್ಲವಾದರೂ, ಅಂದಿನ ಸೋಲು ಇವರೆಲ್ಲರನ್ನೂ ಅವಾಕ್ಕಾಗಿಸಿತು ಎನ್ನುವುದು ನಿಜ. ಇತರರು ಕೊಡಬಹುದಾದಷ್ಟು ಸಹಕಾರವನ್ನು ಆತನಿಗೆ ಒದಗಿಸಿರಲಿಲ್ಲ. ಅಲ್ಲದೆ, ಮುಂದರಿದು ಕರ್ನಲ್ ಡನ್ಬಾರ್‌ನ ಸೇನೆಯು ಫ್ರೆಂಚರನ್ನು ಸದೆಹೊಡೆಯುವ ಬದಲು ಇವರು ಹಿಮ್ಮೆಟ್ಟಿಹೋಗಿ ಮತ್ತೂ ಕಷ್ಟ ನಷ್ಟಗಳನ್ನು ತಂದುಕೊಂಡರು.

ತನ್ನ ಧೈರ್ಯ ಮತ್ತು ಚಿತ್ತಸ್ಥೈರ್ಯಗಳು ಎಂಥ ಕೀರ್ತಿಯನ್ನು ತರಬಲ್ಲುವು ಎಂಬುದನ್ನು ಅಂದು ಜಾರ್ಜ್ ಊಹಿಸಿದ್ದಿರಲಾರ. ಅಂದಿನ ಸೋಲಿನಲ್ಲೂ ಈತನ ಸಾಹಸಗಳನ್ನು ವರ್ಣಿಸಿ ಕೊಂಡಾಡಿದವರೇ ಹೆಚ್ಚು ಮಂದಿ.

ಕೊನೆಗೆ ಹಸೆಹಿಡಿಯುವಷ್ಟು ನಿಶ್ಶಕ್ತನಾದ ಈತನನ್ನು ಡಾ| ಕ್ರೈಕ್ ಮತ್ತಿತರರು ಮೌಂಟ್ ವೆರ್ನ್ನಾನಿಗೆ ಸಾಗಿಸಿದರು. ಆರು ವಾರಗಳ ಶುಶ್ರೂಷೆಯ ಫಲವಾಗಿ ಪುನಃ ಜಾರ್ಜ್ ಆರೋಗ್ಯವನ್ನು ತನ್ನ ಧೈರ್ಯ ಸಾಹಸಗಳ ಪುಣ್ಯಫಲವೋ ಎಂಬಂತೆ ಪಡೆದನು.

ಅಧ್ಯಾಯ ೬

ಬ್ರೆಡ್ಡೋಕನ ಸೋಲಿಗಿಂತಲೂ ಆದರ ನಂತರದ ಪರಿಸ್ಥಿತಿಯು ಕಠೋರವಾಗಿತ್ತು. ಗಡಿನಾಡುಗಳಲ್ಲೆಲ್ಲ ಮನಬಂದಂತೆ ಇಂಡಿಯನರು ಕೊಳ್ಳೆ ಹೊಡೆಯುತ್ತಲೂ, ಫ್ರೆಂಚರೂ ತಮ್ಮ ವಸಾಹತುಗಳ ಗಡಿಗಳನ್ನು ವಿಸ್ತರಿಸುತ್ತಲೂ ಮುಂದರಿದರು. ಇದರಿಂದಾಗಿ ಆಂಗ್ಲ ಕುಟುಂಬಗಳು ಬಹಳ ಅಪಾಯಕ್ಕೀಡಾಗಿದ್ದುವು. ಬ್ರೇಡ್ಡೋಕನ ಕಾಲಾನಂತರದಲ್ಲಿ ನಾಯಕನಾರು? ಎಂಬ ಪ್ರಶ್ನೆಗೂ ಸಮರ್ಪಕ ಉತ್ತರವು ಹೊಳೆಯಲಿಲ್ಲ. ಗವರ್ನರ್ ಫ್ರೈಯಾದರೋ ಅಮೇರಿಕದಲ್ಲಿರುವ ಎಲ್ಲಾ ಸೇನೆಗಳ ದಂಡನಾಯಕನಾಗಿ ನೇಮಿಸಲ್ಪಟ್ಟನು, ಆದರೆ ಪಶ್ಚಿಮದ ಘೋರ ರಂಗಕ್ಕೆ ಹೋಗುವ ಎದೆಗಾರಿಕೆಯುವನಾರು! ಎಂಬ ಪ್ರಶ್ನೆಗೆ ಸಮಸ್ತರಿಂದಲೂ ಉತ್ತರ ದೊರೆತುದು ಒಂದೇ— "ವಾಶಿಂಗ್‌ಟನ್ ಮಾತ್ರ ಇದಕ್ಕೆ ಅರ್ಹನು" ಎಂದು. ಎಲ್ಲರೂ ಈತನ ಮೇಲೆಯೇ ತಮ್ಮ ಆಸೆಯನ್ನು ಕಟ್ಟಿಕೊಳ್ಳುವಂತಾಯಿತು.

ಅನೇಕ ವರ್ಜೀನಿಯಾ ನಿವಾಸಿಗಳ ಅಭ್ಯರ್ಥನೆಯ ಮೇರೆಗೆ ಈತನು ಮುನ್ನುಗ್ಗಲು ಮುಂದಾದನು. ಆತನ ತಾಯಿಯಾದರೋ ಅತ್ಯಂತ ಕಳಕಳಿಯಿಂದ ಮಗನಿಗೆ ಪತ್ರ ಬರೆದು ಹೋಗಬಾರದೆಂದು ಹೇಳಿಸಿದಳು. ತಾಯಿಗೆ ವಾಶಿಂಗ್‌ಟನ್ ಬರೆದ ಪತ್ರದ ಸಾರಾಂಶವು ಹೀಗಿದೆ:

"ಪ್ರೇಮಲ ತಾಯೀ, ನಾನೇ ಆಗಿದ್ದರೆ ಖಂಡಿತವಾಗಿಯೂ ಓಹಿಯೋಕ್ಕೆ ಹೋಗಲಾರೆ. ಆದರೆ ಇಡೀ ಪ್ರಾಂತದ, ಜನತೆಯ ವಿಶ್ವಾಸಪೂರ್ವಕವಾದ ಕರೆಗೆ ನಾನು ಓಗೊಡದಿದ್ದರೆ ದ್ರೋಹಿಯಾಗಲಾರೆನೆ?...."

ಹದಿನಾಲ್ಕನೇ ಆಗಸ್ಟನಂದು ವರ್ಜೀನೀಯಾ ಸಭೆಯು ಸೇರಿ ನಲ್ವತ್ತು ಸಹಸ್ರ ಪವನುಗಳನ್ನು ಖರ್ಚಿನ ಬಗ್ಗೆ ಪ್ರತ್ಯೇಕಿಸಿಟ್ಟಿತು. ಹಾಗೆಯೇ ಸೇನಾವಿಭಾಗಗಳನ್ನೂ 16ಕ್ಕೇರಿಸಿ ವಾಶಿಂಗ್‌ಟನ್‌ನನ್ನು ಎಲ್ಲಾ ಕಂಪೆನಿಗಳ ಮುಖಂಡನಾಗಿ ನೇಮಿಸಲಾಯಿತು. ಅಲ್ಲದೆ

ಗವರ್ನರನೂ ಈತನಿಗೆ ಕರ್ನಲ್ ಪದವಿಯನ್ನೂ ದಯಪಾಲಿಸಿದನು. ಹೀಗೆ ತಕ್ಕಷ್ಟು ಧನಸಹಾಯ, ಸೇನಾಬಲ ಮತ್ತು ಪದವ್ಯಧಿಕಾರಗಳ ಬೆಂಬಲವಿದ್ದ ಜಾರ್ಜ್ ವಾಶಿಂಗ್‍ಟನ್ ಉತ್ಸಾಹದಿಂದ ವಿಲಿಯಮ್ಸ್ ಬರ್ಗಿಗೆ ಹೋಗಿ ಗವರ್ನರ್ ಡಿನ್ವಿಡೀಯನ್ನು ಕಂಡು ಅನಂತರ ಗಡಿಯತ್ತ ಮುಂಬರಿದನು.

ವಿಂಚೆಸ್ಟರ್‌ನಲ್ಲಿ ಎಲ್ಲಿಲ್ಲದ ಕಳವಳವು ಮತ್ತೂ ಇದ್ದಿತ್ತು. ನಿರಾಶ್ರಿತರ ಗುಂಪು ಇಂಡಿಯನರ ಹಲವಾರು ದೂರುಗಳನ್ನು ಈತನ ಮುಂದೆ ಇರಿಸಿತು. ಇದನ್ನೆಲ್ಲಾ ಗಮನಿಸಿಯೇ ಅತನು ತನ್ನ ಮುಂದಿನ ಯೋಜನೆಗಳನ್ನು ನಿಶ್ಚಯಿಸತಕ್ಕುದಿತ್ತು.

ಅಂತೂ ಮೊದಲಿನಿಂದಲೇ ತನ್ನ ಸೇನೆಯನ್ನು ಸುಸಜ್ಜಿತಗೊಳಿಸುವ ಕಾರ್ಯದಲ್ಲಿ ಮಗ್ನನಾದ ವಾಶಿಂಗ್‍ಟನ್ನನಿಗೆ ಆಗ ತನ್ನ ಕಾರ್ಯವನ್ನು ಮತ್ತೂ ಭರದಿಂದ, ಉತ್ಸಾಹದಿಂದ ನಡೆಸುವ ಆವಶ್ಯಕತೆ ಕಂಡು ಬಂದಿತು. ಇದರೊಡನೆಯೇ ವಿಂಚೆಸ್ಟರ್‌ನಲ್ಲಿ ಈತನು ಒಂದು ಕೋಟೆಯನ್ನೂ ಕಟ್ಟಿದನು. ಕಂಬರ್‌ಲೇಂಡಿನಲ್ಲೂ ಇರತಕ್ಕ ಕೋಟೆಯನ್ನು ಭದ್ರಪಡಿಸುವ ಮುಂಚೆ ಗವರ್ನರ್ ಡಿನ್ವಿಡೀ ಮತ್ತು ಗವರ್ನರ್ ಶಾರ್ಪ್‌ರ ನಡುವೆ ಇದ್ದ ವಿವಾದವನ್ನು ಬಗೆಹರಿಸಬೇಕಿತ್ತು; ಇಷ್ಟೇ ಅಲ್ಲದೆ, ಎದುರು ಪಕ್ಷದಿಂದ ಮತ್ತೊಬ್ಬ ಕೆಪ್ಟಾನನು ನೇಮಿಸಲ್ಪಟ್ಟು ಈ ಕೋಟೆಯನ್ನು ಆಕ್ರಮಿಸಲು ಬಂದಾಗ ಈತನು ನಿಲ್ಲಿಸಿ ಈ ವಿವಾದವನ್ನು ಸಂಧಿಮೂಲಕ ತೀರಿಸಲು ತಾನೇ ಗವರ್ನರ್ ಶರ್ಲಿ ಇರುವಲ್ಲಿಗೆ ಹೋಗುವುದಾಗಿ ಸಾರಿದನು.

ಹೀಗೆ ಫೆಬ್ರವರಿ 1756ರಲ್ಲಿ ಈತನು ಪುನಃ ಮೌಂಟ್‌ವೆರ್ನಾನಿಗೆ ಬಂದು ಉತ್ತರಾಭಿಮುಖನಾಗಿ ಚಲಿಸಲಾರಂಭಿಸಿದನು. ಇವನೂ ಇವನ ಸಂಗಡದವರೂ ಅತ್ಯಂತ ವೇಗವಾಗಿ ಸಾಗುತ್ತ 6 ದಿನಗಳಲ್ಲಿ ಹೈಸ್ಟ್ರೀಟ್ ಎಂದು ಆಗ ಹೆಸರಿದ್ದ ಮತ್ತು ಈಗ ಫಿಲಡೆಲ್ಫಿಯಾದ ಮಾರ್ಕೆಟ್ ಸ್ಟ್ರೀಟ್ ಎಂದು ಕರೆಯಲ್ಪಡುವಲ್ಲಿಗೆ ಬಂದು ಮುಟ್ಟಿದರು.

ಆ ತನಕ ವಾಶಿಂಗ್‍ಟನ್ ಇಂಥ ದೊಡ್ಡ ಪಟ್ಟಣವನ್ನು ನೋಡಿರಲಿಲ್ಲ. ಅದರ ಇಗರ್ಜಿ, ಗೋಪುರ ಮತ್ತು ಸೌಧಗಳೆಲ್ಲವೂ ಚಿತ್ತಾ

ಕರ್ಷಕವಾಗಿದ್ದುವು. ಗವರ್ನರ್ ಮೊರಿಸನೂ ಇವನನ್ನು ಆದರದಿಂದ ಸ್ವಾಗತಿಸಿದನು.

ಅನಂತರ ಫೆಬ್ರವರಿ 15ರಂದು ಇವರೆಲ್ಲರೂ ಹಡ್ಸನ್ ನದಿಯನ್ನು ದಾಟಿ ನ್ಯೂಯಾರ್ಕನ್ನು ಸೇರಿದರು. ತನ್ನ ಸ್ನೇಹಿತನಾದ ವರ್ಜೀನಿಯ ಸಭೆಯ ಅಧ್ಯಕ್ಷನ ಮಗನ ಮನೆಯಲ್ಲಿ ಈತನುಳಿದುಕೊಂಡು ಆ ಪಟ್ಟಣದ ವೈಭವದ ಜೀವನದಲ್ಲಿ ಇಸ್ಪೀಟು ಆಟ ಮೊದಲಾದುವುಗಳಲ್ಲಿ ತುಂಬಾ ಹಣವನ್ನು ಕಳೆದರೂ ತುಂಬಾ ಸಂತಸದಿಂದ ಮತ್ತು ಯಾವನ ಮನಸ್ಸನ್ನೂ ನೋಯಿಸದಂತೆ ಕಾಲ ಕಳೆದನು. ಅನಂತರ ಈತನು ಅಲ್ಲಿಂದ ಬೋಸ್ಟನ್ ಪಟ್ಟಣಕ್ಕೆ ತೆರಳಿದನು.

ಗವರ್ನರ್ ಶರ್ಲಿಯಾದರೋ ಈತನನ್ನು ಅತ್ಯಂತ ಗೌರವದಿಂದ ಸ್ವಾಗತಿಸಿದನು. ಇವರಿಬ್ಬರೂ ಸೇರಿ ಕೆನಡಾ ಸಂಬಂಧವಾದ ಧಾಳಿಯನ್ನು ಪ್ರಸ್ತಾಪಿಸಿ ವಿವರಗಳನ್ನು ಚರ್ಚಿಸಿದರು. ಇಷ್ಟೇ ಅಲ್ಲದೆ ಲಾರ್ಡ್ ಲೌಡನ್ ಎಂಬ ಆಂಗ್ಲ ಪಡೆಗಳ ಸೇನಾನಿಯನ್ನು ಪ್ರಶಂಸಿಸಿದರು. ಅಂತೂ ಅಲ್ಲಿನ ಸಮ್ಮೇಳನದ ಫಲವಾಗಿ ವಾಶಿಂಗ್‌ಟನ್‌ನ ಸ್ಥಾನಮಾನಗಳೇ ಹೆಚ್ಚೆಂದು ಪರಿಗಣಿಸಲ್ಪಟ್ಟು ಕಂಬರ್ಲೆಂಡ್ ಕೋಟೆಯನ್ನು ಕೆಪ್ಟಾನ್ ಡೇಗ್ವರ್ತಿಯು ಬಿಡಬೇಕೆಂದಾಯಿತು. ಅಂತೂ ತನ್ನ ಮೊದಲ ಕೆಲಸದಲ್ಲಿ ವಿಜಯವನ್ನು ಪಡೆದು ವಾಶಿಂಗ್‌ಟನ್ ಯುದ್ಧ ಮುಖಕ್ಕೆ ಹಿಂದಿರುಗಿದನು.

ಈ ಗಡಿಯಲ್ಲೇ 35 ವರ್ಷಗಳಷ್ಟು ಕಾಲ ವಾಶಿಂಗ್‌ಟನ್ ಉಳಿದುಕೊಳ್ಳಬೇಕಾಯಿತು. ಈತನ ಕೋರಿಕೆಗಳನ್ನು ಸರಕಾರವು ನೆರವೇರಿಸದ ನಿಮಿತ್ತ ಯುದ್ಧದಲ್ಲಿ ಸೊಲುಗಳೇ ಹೆಚ್ಚಾಗಿ ಈತನ ಪಾಲಿಗೆ ಬಂದುವು ಎನ್ನಬಹುದು.

ಅನಂತರ ಚೆನ್ನಾಗಿ ದುಡಿಯುವ ಕೇವಲ ಕೆಲವು ಸೈನಿಕರನ್ನೊಳಗೊಂಡ ಸೇನೆಯನ್ನು ರಚಿಸಿ ಯುದ್ಧ ಮುಖದಲ್ಲಿ ಹೋರಾಡಿದನು. ಆದರೂ ಇದರ ವರದಿಯನ್ನು ವರ್ಜೀನಿಯಾಗಝೆಟ್ ಬಹಳ ಅಶ್ಲಾಘ್ಯ ರೀತಿಯಲ್ಲಿ ಪ್ರಕಟಿಸಿದ ಕಾರಣ ಪುನಃ ಈತನ ಮೇಲೆ ಟೀಕೆಗಳ ವರ್ಷಣ

ಪ್ರಾರಂಭವಾಯಿತು. ಈತನೂ ಜುಗುಪ್ಸೆಯಿಂದ ರಾಜೀನಾಮೆಯನ್ನಿತ್ತರೂ ಗವರ್ನರನಾಗಲೀ ಸಭೆಯಾಗಲೀ ಇದನ್ನು ಅಂಗೀಕರಿಸಲಿಲ್ಲ.

ದುಃಖಿತನಾಗಿ ಜಾರ್ಜ್ ತನ್ನ ಹುದ್ದೆಗೆ ಅಂಟಿಕೊಂಡು ಇರಬೇಕಾಯಿತು. ಅಂದರೆ, ಅಷ್ಟು ಚಿಕ್ಕ ಪ್ರಾಯದಲ್ಲಿ ಆವನು ಕಟು ಟೀಕೆಯನ್ನು ಅಲಕ್ಷಿಸುವಷ್ಟು ಒರಟನಾಗಿರಲಿಲ್ಲ. ಆದುದರಿಂದ ಈ ಟೀಕೆಗಳ ಕಾರಣದಿಂದ ಆತನು ತುಂಬಾ ಆಯಾಸ, ನಿದ್ರಾನಾಶ ಮತ್ತಿಂಥ ಇತರ ಬವಣೆಗಳಿಗೀಡಾದನು.

ಆಗಸ್ಟ್‌ನಲ್ಲೊಂದುದಿನ ಯುದ್ಧವನ್ನು ಹೂಡುವುದೇ ಎಂದು ತೀರ್ಮಾನಮಾಡಿದ ಜಾರ್ಜ್ ವಾಶಿಂಗ್‌ಟನ್ ತನ್ನ ಉಪಾಧಿಕಾರಿಗಳ ನಡುವೆ ಅಶ್ವರೂಢನಾಗಿ ಸವಾರಿಮಾಡುತ್ತ ವಿಂಚೆಸ್ಟರ್‌ನಿಂದ ಮುಂದೆ ಸಾಗಿದನು. ಹೀಗೆ 1 ವರ್ಷದ ಅವಸರದಲ್ಲಿ ನಡೆಸಿದ ಜಲ, ನೆಲ ಯುದ್ಧಗಳ ಪರಿಣಾಮವಾಗಿ ಮತ್ತು ಕಾರಡವಿಗಳಲ್ಲಿ ನಡೆದ ಕೊಲೆಸುಲಿಗೆಗಳ ಪರಿಣಾಮವಾಗಿ 'ಇಂಗ್ಲಂಡ್ ಫ್ರಾನ್ಸಿನ ಮೇಲೆ ಯುದ್ಧವನ್ನೇ ಘೋಷಿಸಿತು', ಎಂಬುದನ್ನು ಈತನ ಬಾಯಿಯಿಂದಲೇ ಜಗತ್ತು ಮೊದಲು ಕೇಳಿಕೊಂಡಿತು.

ಅಧ್ಯಾಯ ೭

1757ನೇ ವರ್ಷವು ವಾಶಿಂಗ್‌ಟನ್‌ನ ಜೀವನದಲ್ಲಿ ಅತ್ಯಂತ ಕಷ್ಟ ಕಾರ್ಪಣ್ಯಗಳ ವರುಷವಾಗಿತ್ತು. ಹಿಂದಿಗಿಂತ ಹೆಚ್ಚಿನ ಶಿಸ್ತಿನ ಸೈನ್ಯವು ಇದ್ದರೂ ಆತನು ಜಯಶಾಲಿಯಾಗಲಿಲ್ಲ. ಇನ್ನು ಕೆನಡಾದಲ್ಲಿ ಕೂಡ ಲೌಡನ್‌ನ ದಂಡಯಾತ್ರೆಯೂ ವಿಜಯದ ಹಾದಿಯನ್ನು ಹಿಡಿದಿದ್ದಿಲ್ಲ. ಮೌಂಟ್‌ವೆರ್ನಾನಿನಲ್ಲಿ ಕೂಡ ಜಾಕಿಯ ಆಡಳಿತದಲ್ಲಿದ್ದ ಭೂಮಿಯಿಂದ ಆಯವೂ ಬರಲಿಲ್ಲ. ಹೀಗೆ ಚಿಂತೆ, ವ್ಯಾಕುಲಗಳಿಂದ ವಾಶಿಂಗ್‌ಟನ್ ಪೀಡಿತನಾಗಿದ್ದಾಗಲೇ ಆತನು ಪಟ್ಟಣಗಳನ್ನು ಪ್ರತಿನಿಧೀಕರಿಸುವ ಸಭೆಯುಲ್ಲಿಯೂ ಸ್ಪರ್ಧಿಸಿ ಸೋಲನ್ನನುಭವಿಸಬೇಕಾಯಿತು.

ಇದನ್ನು ಕೇಳಿದೊಡನೆಯೇ ಆತನ ಸೇನೆಯಲ್ಲಿದ್ದ ಡಾ। ಕ್ರೈಕರು ಆತನನ್ನು ಸಾಂತ್ವನಗೊಳಿಸುತ್ತ, "ಪರವಾಇಲ್ಲ ಕರ್ನೆಲ್, ಪುನಃ ಸ್ಪರ್ಧಿಸದಿರಬೇಡ, ಮುಂದಾದರೂ ಗೆಲ್ಲಲಿರುವೆ." ಎಂದರು.

"ಹೊಂ ಸ್ಪರ್ಧಿಸುತ್ತೇನೆ", ಎಂದು ಉತ್ತರಿಸುತ್ತಿದ್ದಂತೆ ಆಯಾಸ ದಿಂದ ಬಳಲಿದ್ದ ಜಾರ್ಜನ ಕಣ್ಣುಗಳಲ್ಲಿ ನಸುಬೆಳಕು ಮಿಂಚಿತು.

ಜನವರಿ 1758 ದಾಟುವುದರೊಳಗಾಗಿ ಹೀಗೆ ಅಪಯಶಸ್ಸು ಸೋಲುಗಳಿಂದ ಜರ್ಝರೀಭೂತನಾದ ಜಾರ್ಜ್ ನಿಶ್ಯಕ್ತಿಯಿಂದಲೇ ಹಸೆಹಿಡಿದನು. ಮೌಂಟ್‌ವೆರ್ನ್ಯಾನಿಗೆ ಹೋಗಿ ಈತನು ವಿಶ್ರಾಂತಿ ಪಡೆಯಬೇಕಾಯಿತು. ತಾನು ಆಗ ರಾಜಿನಾಮೆಯನ್ನಿತ್ತುಬಿಡಬೇಕೆಂದು ಸಂಕಲ್ಪಿಸಿದ್ದರೂ ಇಂಗ್ಲಂಡಿನಲ್ಲಿ ವಿಲಿಯಂ ಪಿಟ್ ಅಧಿಕಾರಕ್ಕೆ ಬಂದಿದ್ದನು. ಈತನೂ ಫ್ರೆಂಚರನ್ನು ಅಮೇರಿಕದಿಂದ ಹೊಡೆದೋಡಿಸ ಬೇಕೆಂದು ಸಂಕಲ್ಪಿಸಿದುದರಿಂದ ಈತನ ಆಡಳಿತೆಯಲ್ಲಿ ತನ್ನ ಧ್ಯೇಯ ಧೋರಣೆಗಳು ಸುಮುಖವಾಗಬಲ್ಲುವು ಎಂದು ಜಾರ್ಜ್ ಎಣಿಸಿದ್ದನು. ಯುದ್ಧವೆಂಬ ಮಾತನ್ನು ಕೇಳಿದೊಡನೆ ಆತನಲ್ಲಿ ಹುಮ್ಮಸ್ಸು ಉಕ್ಕುತ್ತಿತ್ತು.

ಹಾಗೆಯೇ ಸ್ವಲ್ಪಚೇತರಿಸಿದ ನಂತರ ಲೌಡನ್ ಕೋಟೆಗೆ ಹೋಗಿ ಪುನಃ ಸೇನಾಸಂಘಟನಾ ಕಾರ್ಯದಲ್ಲಿ ಪ್ರವೃತ್ತನಾದ ವಾಶಿಂಗ್‌ಟನ್ ನಾದರೋ ತಾನು ರಚಿಸಿಕೊಂಡ ಸೇನೆಯಿಂದ ತೃಪ್ತನಾಗಲಿಲ್ಲ. ಈತನ ದಂಡಿಗೆ ತಕ್ಕ ಪ್ರಮಾಣದಲ್ಲಿ ಆಹಾರದವಸಗಳಿಲ್ಲವೆಂಬ ದೂರನ್ನು ಸ್ವತಃ ಪರೀಕ್ಷಿಸಬೇಕೆಂದು ಸರ್ ಸೈಂಟ್ ಕ್ಲೇರ್ ಬಂದು ಅಲ್ಲಿನ ಪರಿಸ್ಥಿತಿಯನ್ನು ಲಕ್ಷಿಸಿ ಈತನನ್ನು ವಿಲಿಯಮ್ಸ್‌ಬರ್ಗಿಗೆ ಕಳುಹಿದನು.

ಅಲ್ಲಿ ಡಿನ್ವಿಡೀಯು ರಾಜೀನಾಮೆಕೊಟ್ಟನಂತರ ಫ್ರೇನ್ಸಿಸ್‌ಫೇಶ್ವಿ ಯರ್ ಗವರ್ನರನಾಗಿದ್ದನು. ಈತನನ್ನು ಭೇಟಿಯಾಗಲು ಜಾರ್ಜ್ ಹೋಗುತ್ತಿದ್ದಂತೆ ಕೂಡಿದವರೆಲ್ಲರೂ ಇವನನ್ನು ಹೊಗಳಲಾರಂಭಿಸಿದರು.

ಅಲ್ಲೇ ಗ್ಲೊಸೆಸ್ಟರ್ ಬೀದಿಯಲ್ಲಿ ತನ್ನ ಹಳೆಯ ಸ್ನೇಹಿತ ರೋಬರ್ಟ್ ಕಾರ್ಟರ್ ನಿಕೋಲಸ್‌ನನ್ನು ಸಂಧಿಸಿದನು. ಆತ,

"ಅಬ್ಬಾ ಉಕ್ಕಿನಮನುಷ್ಯ ನೀನು, ಇನ್ನೂ ಪೂರ್ತಿ ಶರೀರಧಾರಿ ಯಾಗಿಯೇ ಇದ್ದೀಯಲ್ಲಾ! ಏನಯ್ಯಾ? ಇಷ್ಟು ವರ್ಷಗಳ ಯುದ್ಧಗಳ ನಂತರದಲ್ಲಿ ಪ್ರೇಮರಂಗದತ್ತ ನಿನ್ನ ಮನಸ್ಸು ಹರಿದಿಲ್ಲವಲ್ಲಾ ಎಂಬುದು ಆಶ್ಚರ್ಯದ ಮಾತಾಗಿರುತ್ತದೆ," ಎಂದು ಹಾಸ್ಯಮಾಡಿದನು.

ಜಾರ್ಜನ ಬಾಡಿದ ಕಣ್ಣುಗಳಲ್ಲಿ ಪ್ರಕಾಶವು ಮಿನುಗಿತು, ಮುಖವು ಅರಳಿತು, "ಹೌದು ನಿಕಾಲಸ್, ಬಹುಶಃ ನಾನೀಗ ಪ್ರೇಮರಂಗವನ್ನೇ ಪ್ರವೇಶಿಸುವಂತಿದೆ," ಎಂದು ಬಾರದ ನಗುವನ್ನು ತಂದುಕೊಂಡು ಜಾರ್ಜ್ ಉತ್ತರಿಸಿದನು. ಮತ್ತೂ ಒತ್ತಾಯದಿಂದ 'ಯಾರು', ಏನು' ಎಂಬ ವಿವರಗಳನ್ನು ನಿಕಾಲಸ್ ಕೇಳಲು ತಾನು ಆಗಲೇ ತನ್ನ ಸ್ನೇಹಿತ ನೊಬ್ಬನ ಮನೆಯಲ್ಲಿ ಒಬ್ಬಳು ಸ್ತ್ರೀಯನ್ನು ಭೇಟಿಯಾದುದನ್ನು ಹೇಳಿದನು.

"ಬಹಳ ಒಳ್ಳೆಯದು, ಆ ಹೆಂಗಸಿನ ಹೆಸರೇನು?" ಎಂದು ನಿಕಾಲಸ್ ಮತ್ತೂ ಹೆಚ್ಚಿನ ಉತ್ಸುಕತೆಯಿಂದ ಪ್ರಶ್ನಿಸಿದನು

"ಓಹೋ, ಅದಕ್ಕೇನಂತೆ, ಅವಳ ಹೆಸರು ಶ್ರೀಮತಿ ಮಾರ್ತಾ ಡೇಂಡ್ರಿಜ್ ಕಸ್ಟಿಸ್".

'ಹ್ಹಾ!' ಎಂದು ಉದ್ಗಾರವನ್ನು ತೆಗೆದ ನಿಕಾಲಸ್ ನೆಟ್ಟಗೆ ನಿಂತು ಸೈನಿಕನ ತೆರದಲ್ಲಿ ತನ್ನ ಸ್ನೇಹಿತನಿಗೆ ವಂದನೆಗಳನ್ನಿತ್ತು, "ಅವಳು ಡೇನಿಯಲ್ ಪಾರ್ಕ್ ಕಸ್ಟಿಸ್‌ನ ವಿಧವೆಯಾಗಿದ್ದಾಳೆ. ತುಂಬಾ ಹಣ ವಂತಳು, ಯೋಗ್ಯಳೂ ಆಗಿದ್ದಾಳೆ. ಕೀರ್ತಿಶೇಷನಿಂದ ಇವಳಿಗೆ ಎರಡು ಮಕ್ಕಳಾಗಿವೆ ಮತ್ತು ಹೇರಳ ಆಸ್ತಿ ಮತ್ತು ಧನಕನಕಗಳೂ ಲಭಿಸಿವೆ. "ಅವರೆಲ್ಲರೂ (ಮಕ್ಕಳು) ವಿಲಿಯಮ್ಸ್‌ಬರ್ಗಿನಲ್ಲಿ 6 ಚಿಮಿಣಿಗಳ ಮನೆ ಯಲ್ಲಿ ವಾಸಿಸುತ್ತಾರೆ". ಎಂದು ಮುಂದರಿಸಿದನು.

ವಾಶಿಂಗ್‌ಟನ್‌ನಿಗೆ ಮಕ್ಕಳೆಂದರೆ ತುಂಬಾ ಪ್ರೀತಿ "ಹೌದು ಆ ಮಕ್ಕಳನ್ನುಸದ್ಯ ನೋಡಲಿದ್ದೇನೆ," ಎಂದು ಈತನೂ ನಗುತ್ತ ಉತ್ತರ ಕೊಟ್ಟನು.

ವರ್ಷಗಟ್ಟಳೆ ಯುದ್ಧರಂಗಗಳಲ್ಲಿ ಹೊಲಸು ಕೊಂಪೆಗಳಲ್ಲಿ ಶಿಬಿರ ವಾಸಿಯಾಗಿದ್ದ ಜಾರ್ಜನಿಗೆ ಶ್ರೀಮತಿ ಕಸ್ಟಿಸಳ ಮನೆಯು ಅತ್ಯಂತ

ಸೊಗಸಾಗಿ ಕಂಡುದರಲ್ಲಿ ಆಶ್ಚರ್ಯವೇನೂ ಇಲ್ಲ. ಎಲ್ಲ ವಸ್ತುಗಳೂ, ಸಾಮಾನುಗಳೂ ಓರಣವಾಗಿಡಲ್ಪಟ್ಟು ಕಸ್ಟಿಸಳು ಉತ್ತಮ ಮನೆ ವಾರ್ತೆಯ ಹೆಂಗಸಾಗಿದ್ದಳು ಎಂಬುದನ್ನು ಸೂಚಿಸಿದ್ದುವು.

ಅಷ್ಟರಲ್ಲೇ ದೂರದಲ್ಲಿ ಹೊರಗಿನಿಂದ ಕಸ್ಟೀಸಳ ಮಕ್ಕಳು ಬರುತ್ತಿರುವುದನ್ನು ಕಂಡು ಈ ಹೆಂಗಸು ಸಂತೋಷದಿಂದ ಅವುಗಳನ್ನು ಕೂಡಿದಳು. ನೀಗ್ರೋ ಹೆಂಗುಸೊಬ್ಬಳು ಪೇಟ್ಟೀ ಮತ್ತು ಜೇಕಿ ಎಂಬ ಎರಡು ಮಕ್ಕಳನ್ನು ಕರೆದುತಂದು ಅವುಗಳನ್ನು ಜಾರ್ಜನಿಗೊಪ್ಪಿಸಿದಳು. ಅಂತೂ ಮಾರ್ತಾಳು ವಾಶಿಂಗ್‌ಟನ್‌ನನ್ನು ವಿವಾಹವಾಗುವುದು ನಿಶ್ಚಯವಾಯಿತು. ಇದರಿಂದಾಗಿ ಜಾರ್ಜನಿಗೆ ಸಂತೃಪ್ತಿಯು ಮೊದಲಬಾರಿಗೆ ದಕ್ಕಿತು ಎನ್ನಬಹುದು.

ಇದರ ನಂತರ ಪ್ರತಿನಿಧಿಗಳ ಸಭೆಗೆ ಪುನಃ ಆಯ್ಕೆಗೊಳ್ಳುವ ಯತ್ನವನ್ನು ಜಾರ್ಜ್ ಮಾಡಿದನು. ತನ್ನ ಪರವಾಗಿ ವಾದಿಸುವ, ತನ್ನ ಉಮೇದ್ವಾರಿಕೆಯನ್ನು ಸಮರ್ಥಿಸುವ ಇನ್ನೊಬ್ಬನನ್ನು ನೇಮಿಸಿ ಆತನಿಂದ ಬಹಳ ಬಿರುಸಿನಿಂದ ಪ್ರಚಾರವನ್ನು ಮಾಡಿಸಿದನು. ಇದೆಲ್ಲದರ ಪರಿಣಾಮವಾಗಿ ಈತನಿಗೆ ಇತರರಿಗೆಲ್ಲ ಸಿಕ್ಕಿದುದಕ್ಕಿಂತ ಹೆಚ್ಚು ಓಟುಗಳು (ಮತಗಳು) ಸಿಕ್ಕಿದುವು.

ಆ ವರ್ಷದಲ್ಲಿನ ಈತನ ಸಾಹಸಗಳಲ್ಲಿ ಇದೇ ಅತ್ಯಮೋಘವಾದುದು. ಆದರೆ ಅಡಿಗಡಿಗೆ ಈತನನ್ನು ಚಿಕ್ಕಪುಟ್ಟ ಕಾಯಿಲೆಗಳು ಬಾಧಿಸುತ್ತಿದ್ದುವು. ಅಲ್ಲದೆ ಪಶ್ಚಿಮ ಪ್ರಾಂತದಲ್ಲಿನ ಸೋಲು ನೋವುಗಳು ಆತನನ್ನು ತುಂಬಾ ನೋಯಿಸಿದ್ದುವು. ಇಷ್ಟರಲ್ಲಿ ಜನರಲ್ ಫೋರ್ಬಸರು ಬ್ರೆಡ್ಡೋಕದ ಮಾರ್ಗವನ್ನು ಬಿಟ್ಟು ಇತರ ಮಾರ್ಗವನ್ನನುಸರಿಸಿ ಡಕೆಸ್ನೇ ಕೋಟೆಗೆ ಹೋಗುವುದಾಗಿ ನಿಶ್ಚಯಿಸಿದರು.

"ಒಂದು ಹಾದಿ ಇರುವಾಗ ಇನ್ನೊಂದನ್ನೇತಕ್ಕೆ ಕಡಿಯಬೇಕು? ಇದರಿಂದಾಗುವ ಸಮಯದ ನಷ್ಟಕ್ಕೆ ಪೆನ್ಸಿಲ್ವೇನಿಯಾದ ವ್ಯಾಪಾರಿಗಳೇ, ಅವರ ಕಪಟವೇ ಕಾರಣವಾಗಿದೆ", ಎಂದು ಜಾರ್ಜ್ ವಾಶಿಂಗ್‌ಟನ್ ವಿಲಿಯಮ್ ಬೈರ್ಡ್‌ನೊಡನೆ ಅಭಿಘಟಿಸಿದನು.

ಆದರೂ ಶಿಸ್ತಿಗನುಸಾರವಾಗಿ ಅತ್ಯಂತ ವಿಧೇಯನಾಗಿ ಈತನು ಈ ಕಾರ್ಯದಲ್ಲಿ ಪ್ರವೃತ್ತನಾದನಲ್ಲದೆ ತನ್ನ ಸೈನಿಕರನ್ನೂ ಚೆನ್ನಾಗಿ ದುಡಿಸಿದನು. ಅವರು ಕೆಲಸಮಾಡುವ್ರದನ್ನೀಕ್ಷಿಸುತ್ತ ತನ್ನ ಉಪಾಧಿ ಕಾರಿಯೊಡನೆ

'ಅಯ್ಯೋ ಪಾಪ! ಇವರ ಕಾಲುಗಳಿಗೆ ಉತ್ತಮವಾದ ಮೆಟ್ಟುಗಳೂ ಇಲ್ಲವಲ್ಲ' ಎಂದು ಮರುಗುವಂಥ ಸ್ಥಿತಿಯೂ ಬಂದಿತು.

"ಆದರೇನು? ಅವರಿಗೆ ಅತ್ಯುತ್ತಮ ಸಮವಸ್ತ್ರಗಳನ್ನೊದಗಿಸಿರು ವಿರಲ್ಲ?" ಎಂದು ಉಪಾಧಿಕಾರಿ ಮರ್ಸರ್ (Mercer) ಜಾರ್ಜನನ್ನು ಪ್ರಶಂಸಿಸಿ ಹುರಿದುಂಬಿಸಿದನು. ಧ್ವನಿಯು ಅಭಿನಂದನೆಯನ್ನೂ ಸೂಚಿಸುತ್ತಿತ್ತು.

ಅಂದರೆ ಉತ್ತಮ ಪೋಷಾಕುಗಳನ್ನು ಪಡೆಯುವುದು ಕಷ್ಟವಾದ ನಿಮಿತ್ತ ಇಂಡಿಯನರ ಪೋಷಾಕುಗಳನ್ನೂ ತೆಗೆದುಕೊಂಡು ಇದರಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸಗಳನ್ನು ಮಾಡಿಕೊಂಡು ಫಕ್ಕನೆ ಕಟ್ಟಡವಿಗಳಲ್ಲಿ ಅಗೋಚರವೇ ಆಗಿರುವ ಪೋಷಾಕುಗಳನ್ನು ತಯಾರಿಸಿ ಈತನು ತನ್ನ ಜನರಿಗೆ ಒದಗಿಸಿದ್ದನು. ಸೈನಿಕರ ದೃಷ್ಟಿಯಲ್ಲಿ ಇದು ಅತ್ಯಂತ ಹಿತಕರ ಉಡುಪಾಗಿತ್ತು, ಮಾತ್ರವಲ್ಲದೆ ಇಷ್ಟರ ಮಟ್ಟಿನ ಪೋಷಾಕುಗಳನ್ನೊದಗಿಸಲೂ ಜಾರ್ಜನು ತುಂಬಾ ಶ್ರಮಿಸಿದುದನ್ನು ಆತನ ಸೈನಿಕರು ಕಣ್ಣಾರೆ ನೋಡಿದ್ದರು. ಇತ್ತ ಜನರಲ್ ಫೋರ್ಬಸನಾದರೋ ಬಹಳ ಮೆಲ್ಲನೆ ತನ್ನ ಕಾರ್ಯವನ್ನು ಮುಂದರಿಸುತ್ತಿದ್ದನು. ಇದರಿಂದಲಂತೂ ಜಾರ್ಜನಿಗೆ ತುಂಬಾ ಅಸಮಾಧಾನವಾಗಿತ್ತು. ಅಷ್ಟರಲ್ಲೇ ಸೇಲ್ಲಿಯಿಂದ ಬಂದ ಪತ್ರವೊಂದು ಅಲ್ಲಿನ ಸ್ನೇಹಿತರ ವಿಚಾರವನ್ನೆಲ್ಲ ಅರುಹಿತು. ಆತನ ವಿವಾಹದ ನಿಶ್ಚಯದ ಕುರಿತಾಗಿ ಸ್ವಲ್ಪ ಟೀಕೆಯೂ ಅದರಲ್ಲಿದ್ದುದನ್ನು ಜಾರ್ಜ್ ಸಹಿಸದಾದನು. ಅತ್ಯಂತ ಸಿಟ್ಟಿನಿಂದ ಈತನೂ ಉತ್ತರ ವೊಂದನ್ನು ಬರೆದನು: ಆದರಲ್ಲಿ ತನ್ನ ಪ್ರೇಮವು ಸ್ಥಿರವೆಂದೂ ಸತ್ಯವೆಂದೂ ವಾದಿಸಿದನಲ್ಲದೆ ಅತ್ಯಂತ ಉದ್ವೇಗದಿಂದ ಈ ಕೆಳಗಿನಂತೆ ಗೀಚಿದನು...

...."ನಮ್ಮ ಗ್ರೈಮೆಗಳನ್ನೆಲ್ಲ ನಿಯಂತ್ರಿಸುವ ಅದೃಷ್ಟವೊಂದಿದೆ. ಇದನ್ನು ಯಾವನೂ ಎಂಥ ಯತ್ನದಿಂದಲೂ ಮೀರಲಾರನು"

ಈ ಕಾಗದವನ್ನು ತನ್ನ ಮರಣದ ತನಕವೂ ಸೇಲ್ಲಿ ಜೋಪಾಸನೆಯಲ್ಲಿಟ್ಟದ್ದಳು. ಇದನ್ನು ನೋಡಿದರೇನೇ ಜಾರ್ಜ್ ವಾಶಿಂಗ್‌ಟನ್‌ನ ಹೃದಯದ ಕ್ರಾಂತಿಯ ಪರಿಚಯವು ಆಗುತ್ತಿತ್ತು.

ಅಂತೂ ಕೇವಲ ದೈನಂದಿನ ಚಟುವಟಿಕೆಗಳಿಂದ ಹಲವು ವಾರಗಳು ಉರುಳಿದುವು. ಡಕ್‌ಸ್ನೇ ಕೋಟೆಯ ವಿಚಾರವಾಗಿ ಒಬ್ಬ ಕೈದಿಯಿಂದ ಅನೇಕ ವಿಷಯಗಳು ತಿಳಿದುಬಂದುವು. ಕೆನಾಡಾದಲ್ಲಿನ ಸೋಲು ಮತ್ತು ಫ್ರೆಂಚ ಸಮಾನು ಸರಂಜಾಮುಗಳ ನಷ್ಟದಿಂದಲಂತೂ ಓಹಿಯೋ ಸಂಗಮದ ಕೋಟೆಯನ್ನು ಹೊಡೆಯುವುದು ಮುಟ್ಟುವುದೂ ದುಸ್ತರವಾಗಿತ್ತು. ಅಂತೂ ಅಲ್ಲಿಂದ ಇವರ ಸೇನೆಯನ್ನು ಮೆಲ್ಲನೆ ಹಿಂತೆಗೆದು ಥಕ್ಕನೆ ಫ್ರೆಂಚ ಕೋಟೆಯ ಮೇಲೆ ಬೀಳಬೇಕೆಂಬ ತೀರ್ಮಾನವನ್ನು ಮಾಡಲಾಯಿತು.

ಅಂತೂ ಕೊನೆಗೆ ಈತನ ವರ್ಷಗಳ ಕನಸಿನ ವಿಜಯದ ಕಲ್ಪನೆಯು ಫಲಿಸಿತಾದರೂ ಈತನಿಗೆ ದಕ್ಕಿದುದು ಹಾಳುಬಿದ್ದ ಕೋಟೆ ಮಾತ್ರ. ಅದನ್ನು ಬಿಟ್ಟುಹೋಗುವಾಗ ಫ್ರೆಂಚರು ಸಿಡಿಮದ್ದುಗಳನ್ನು ಸುಟ್ಟುಹಾಕಿ, ಕಟ್ಟಡಗಳನ್ನು ಉರುಳಿಸಿ ಮುಂದರಿದಿದ್ದರು. ಹೀಗೆ, ಗೆದ್ದರೂ ಸೋತವನ ಅನುಭವವೇ ಜಾರ್ಜ್‌ನದಾಯಿತು.

ಅಂತೂ ಇಷ್ಟನ್ನು ಸಾಧಿಸಿದನಂತರ ಬಿಡುವು ಬೇಡವೆ? ತನ್ನ ಸೇನಾ ಸಮವಸ್ತ್ರಗಳನ್ನೆಲ್ಲ ತೆಗೆದುಹಾಕಿ ಒಬ್ಬ ಕೃಷಿಕನಾಗಿ ಶಾಂತ ಜೀವನವನ್ನು ನಡೆಸೋಣವೆ? ಎಂದು ಜಾರ್ಜ್ ಆಶಿಸಿದನು. ಆದರೆ ಈತನ ಸಹಚರರು ಇವನನ್ನು ಪ್ರಾರ್ಥಿಸಿ ತಮ್ಮೊಡನೆ ಒಂದು ವರ್ಷದ ತನಕವಾದರೂ ಇರಬೇಕೆಂದು ಕೇಳಿಕೊಂಡರು ಇವರ ಪ್ರಾರ್ಥನೆಯೇ 'ವರ್ಜೀನಿಯಾ ಸೇನಾ ವಿಭಾಗದ ಪ್ರಾರ್ಥನೆ'ಯಾಗಿತ್ತು. ಇದು ನಿಜಕ್ಕಾದರೂ ಜಾರ್ಜನಿಗೆ ಸಿಕ್ಕಿದ ಪ್ರಶಂಸಾ ಪತ್ರಗಳಲ್ಲಿ ಅತ್ಯುತ್ತಮವಾದುದು, ಮಹತ್ತಮವಾದುದು ಎನ್ನಲಡ್ಡಿಯಿಲ್ಲ ಇದರ ಉಪಸಂಹಾರವು ಈ ಕೆಳಗಿನಂತೆ ಇತ್ತು.

'ಪೂಜ್ಯರೇ ತಮ್ಮ ಮೇಲೆ ಎಷ್ಟರ ಅಭಿಮಾನ ಮತ್ತು ಆದರಗಳಿ

ರುವುವೆಂಬುದನ್ನು ನಾವು ನಮ್ಮ ಕೃತಿಗಳಿಂದಲೇ ತೋರತಕ್ಕವರು ತಮ್ಮ ವಿಧೇಯ ಮತ್ತು ವಿನೀತ ಅನುಯಾಯಿಗಳು'.

3 ವರ್ಷಗಳ ಕಠಿಣ ಪರಿಶ್ರಮದ ನಂತರವೂ ಇಂಥ ವಿಶ್ವಾಸ, ಅಲ್ಲದೆ ಹೇಳತಕ್ಕ ವಿಜಯವೇನೂ ಸಾಧ್ಯವಾಗಿಲ್ಲವಾದರೂ ಇಂಥ ಪ್ರೀತಿ ಮತ್ತು ಅಭಿಮಾನ! ಇದಕ್ಕಿಂತ ಹೆಚ್ಚನ್ನು ಯಾವ ವಿಜೇತೃವೂ ಆಶಿಸಲಾರನಷ್ಟೆ!

ಕಂಬರ್ಲೇಂಡ್‌ನಿಂದ ವಿಂಚೆಸ್ಟರ್‌ಗೆ ಹೋಗುವ ಹಾದಿಯಲ್ಲಿ ತಾನು ಗವರ್ನರನನ್ನು ನೋಡುವ ಮುಂಚೆ ಪುನಃ ಮೌಂಟ್‌ವೆರ್ನ್ಯಾನಿಗೆ ಹೋಗಲೇತಕ್ಕುದೆಂದು ಜಾರ್ಜ್ ತೀರ್ಮಾನಿಸಿದನು. ಆಯಾಸ, ಕಷ್ಟ ನಿಷ್ಠುರಗಳಿಂದ ನೊಂದ ಈತನು ತನ್ನಷ್ಟಕ್ಕೇ, 'ಇನ್ನು ಮುಂದಿನ ಭವಿಷ್ಯವು ಅಸ್ಪಷ್ಟವಾಗಿದೆ' ಎಂದು ಅಂದುಕೊಳ್ಳುತ್ತಲೇ ಇದ್ದನು. ಆದರೂ ಮುಂದಾಗತಕ್ಕುದನ್ನು ಅಂದೇ ನೋಡಿದವರಾರು?!

ಅಧ್ಯಾಯ ೮

6–1–1759ರಂದು ಜಾರ್ಜ್ ವಾಶಿಂಗ್‌ಟನ್ ಮಾರ್ತಾ ಕಸ್ಟಿಸಳನ್ನು ವಿವಾಹವಾದನು. ವಿವಾಹವು ಬಹಳ ವಿಜೃಂಭಣೆಯಿಂದ ಜರಗಿತು. ಅನೇಕ ದೊಡ್ಡ ಮಹನೀಯರ ಸಮ್ಮುಖದಲ್ಲಿ ಈ ನೂತನ ದಂಪತಿಗಳು ಎಲ್ಲರಿಂದಲೂ ಅಭಿನಂದನೆಗಳನ್ನು ಪಡೆದು ಅತ್ಯಂತ ಸುಖಿಗಳಾಗಿ ಕಂಡರು.

ಜ್ಹೋನ್ ರಾಬಿನ್‌ಸನ್‌ನು ವಾಶಿಂಗ್‌ಟನ್‌ನನ್ನು ಅಭಿನಂದಿಸುತ್ತ, "ಜಾರ್ಜ್ ನೀನು ಪ್ರತಿನಿಧಿಗಳ ಸಭೆಗೆ ಆಯ್ಕೆಹೊಂದಿದುದು ನಮಗೆಲ್ಲಾ ಹೆಚ್ಚಿನ ಸಂತೋಷವನ್ನುಂಟುಮಾಡಿದೆ. ಅಂತೂ ಸಭೆ ಕೂಡುವ ಮೊದಲೇ ವಿಲಿಯಮ್ಸ್‌ಬರ್ಗಿಗೆ ಬರುವೆಯಷ್ಟೆ?" ಎಂದು ಆತ್ಮೀಯತೆಯಿಂದ ಪ್ರಶ್ನಿಸಿದನು.

"ಓಹೋ! ಖಂಡಿತವಾಗಿಯೂ ನನ್ನ ಮಡದಿಯೂ ನಾನೂ ಕಸ್ಟಿಸ್‌ರ ಮನೆಯಲ್ಲಿರುವುದೆಂದು ಆಲೋಚಿಸಿರುವೆವು" ಎಂದು ಉತ್ತರ

ಬಂದಿತು. ವಾಶಿಂಗ್‌ಟನ್‌ನ ಮಾತುಗಳಲ್ಲಿ ಒಂದು ತರದ ಸ್ಥೈರ್ಯ ವಿತ್ತು, ನಿಶ್ಚಯವಿತ್ತು; ಮತ್ತು, ತಾನೂ ಲಾರೆನ್ಸನಂತೆಯೇ ಆ ಸಭೆ ಯಲ್ಲಿ ಪ್ರತಿನಿಧಿಯಾಗಬಲ್ಲೆನೆಂಬ ಅಭಿಮಾನವೂ ಇತ್ತು.

ಆ ವರ್ಷವಂತೂ ಪ್ರತಿನಿಧಿಗಳ ಸಭೆಯೂ ಕೂಡುವ ಸಮಯವು ವಿಲಿಯಮ್ಸ್‌ಬರ್ಗಿನಲ್ಲೆಲ್ಲಾ ಆನಂದದಾಯಕವಾಗಿತ್ತು. ಎಲ್ಲಿ ನೋಡಿ ದರೂ ಸಂತೋಷ ಕೂಟಗಳು, ಎಲ್ಲಿ ನೋಡಿದರೂ ಸತ್ಕಾರ ಕೂಟಗಳೇ ಇದ್ದು ವಾತಾವರಣವೆಲ್ಲವೂ ಸಂತಸದಿಂದ ಹಿಗ್ಗಿತ್ತು.

ಫೆಬ್ರವರಿಯಲ್ಲೊಂದು ದಿನ ಮಾರ್ತಾಳು ಚಾವನ್ನು ಕುಡಿಯು ತ್ತಿರುವಾಗ ಜಾರ್ಜ್ ಅಲ್ಲೇ ಅತ್ತಿಂದಿತ್ತ ಅಲೆದಾಡುತ್ತಿದ್ದನು. ಅಲ್ಲೇ ಕೆಳಗೆ ಇವನ ಕಾಲುಗಳ ಬುಡದಲ್ಲಿ ಪೇಟ್ಸಿಯು ಆಡುತ್ತಿದ್ದನು. ಇಷ್ಟರಲ್ಲೇ ಆನಂದ ಸೂಚಕ ದನಿಯೊಡನೆ ಮಾರ್ತಾಳು ಅಲ್ಲಿಗೆ ಓಡಿ ಬಂದು ತನ್ನ ಗಂಡನನ್ನು ಮುದ್ದಿಸಿದಳು. 'ಇದೇ ನಿನ್ನ ಹುಟ್ಟುದಿನ ವಲ್ಲವೆ? ನಾನು ಮರೆತೇ ಹೋಗಿದ್ದೆ. ಅಲ್ಲದೆ ಇಂದು ನೀನು ಪ್ರತಿನಿಧಿಗಳ ಸಭೆಯಲ್ಲಿಯೂ ಮೊದಲನೆ ಬಾರಿ ಭಾಗವಹಿಸಲಿರುವೆ" ಎಂದಳು.

ಜಾರ್ಜ್ ಅವಳ ಕೈಯನ್ನು ಅಮುಕಿ ಮುದ್ದಿಸಿದನು. "ನನ್ನ ವಿಷಯದಲ್ಲಿ ಹೆಚ್ಚು ಆಸೆ ಕಟ್ಟಿಕೊಳ್ಳಬೇಡ. ನಾನಾದರೋ ಸಭೆಯಲ್ಲಿ ಭಾಗವಹಿಸುವುದಾದರೂ ನನ್ನಿಂದ ಹೆಚ್ಚೇನೂ ಸಾಧ್ಯವಾಗಲಿಕ್ಕಿಲ್ಲ."

ಅಂದು ಸಭೆಯಲ್ಲಿ ಅಧ್ಯಕ್ಷ ಜೋನ್ ರಾಬಿನ್‌ಸನ್ ಈತನು ಪಶ್ಚಿಮ ರಾಷ್ಟ್ರಗಳ ರಕ್ಷಣೆಗಾಗಿ ಕೈಕೊಂಡ ಕಾರ್ಯಕ್ರಮವನ್ನು ತುಂಬಾ ಹೊಗಳಿದನು ಮತ್ತು ಈ ಬಗ್ಗೆ ಈತನನ್ನು ಅಭಿನಂದಿಸಿದನು. ಇದನ್ನುತ್ತರಿಸಲು ನಿಂತ ವಾಶಿಂಗ್‌ಟನ್ ಮಾತನಾಡಲು ಪ್ರಯತ್ನಿಸಿ ದರೂ ಈತನ ಬಾಯಿಯಿಂದ ಒಂದು ಮಾತೂ ಹೊರಡಲಿಲ್ಲ. ಇವನ ಸ್ಥಿತಿಯನ್ನರಿತು, ಅಧ್ಯಕ್ಷನು, "ಕುಳಿತುಕೋ ವಾಶಿಂಗ್‌ಟನ್, ನಮ್ಮೆ ಲ್ಲರ ಮಾತುಗಳಿಗಿಂತಲೂ ನಿನ್ನ ವಿನಯ ಮತ್ತು ಧೈರ್ಯಗಳೇ ಹೆಚ್ಚು ವಿಚಾರಗಳನ್ನು ಅರುಹುತ್ತಿವೆ" ಎಂದನು.

ಸಭೆಯಲ್ಲಿ ಕುಳಿತುಕೊಳ್ಳುವುದೆಂದರೆ ಈತನಿಗೆ ತುಂಬಾ ಪ್ರೀತಿ. ಸಭೆ ಮುಗಿದ ನಂತರ ಹೊರಗಿನ ಹೊಟೇಲಿನಲ್ಲಿ ಕುಳಿತು ತನ್ನ ಸ್ನೇಹಿತರೊಡನೆ ತುಂಬಾ ಚರ್ಚಿಸುತ್ತಿದ್ದನು. ಆದರೂ ತುಂಬಿದ ಸಭೆಯಲ್ಲಿ ಮಾತನಾಡಲು ನಾಚುತ್ತಿದ್ದನು. ಅಂತೂ ಅನೇಕ ವರ್ಷಗಳ ಸೈನಿಕ ಜೀವನದ ನಂತರ ಇಂಥ ಸುಸಂಸ್ಕೃತ ಜನರೊಡನೆ ವ್ಯವಹರಿಸುವುದೇ ಈತನಿಗೆ ಭೂಷಣವೆನಿಸಿತ್ತು ಎನ್ನಬಹುದು. ಅಲ್ಲದೆ ಈತನ ಕಾರ್ಯತತ್ಪರತೆ ಮತ್ತು ವಿನೀತ ನಡತೆಗಳು ಈತನನ್ನು ಎಲ್ಲರಿಗೂ ಬೇಕಾದವನನ್ನಾಗಿ ಮಾಡಿದುವು.

ಒಂದುದಿನ ಬ್ರೂಟನ್ ಪೇರಿಶ್ ಚರ್ಚಿಗೆ ಹೋಗುವಾಗ, ಮಾರ್ತಾಳೊಡನೆ, ಈತನು, "ಇತ್ತೀಚಿಗೆ ನನಗಂತೂ ನನ್ನ ಹಣವನ್ನು ಹೇಗೆ ವೆಚ್ಚ ಮಾಡುವುದು ಎಂದು ಆಲೋಚಿಸುವುದು ಸುಲಭವಾಗಿದೆ. ಈ ಹಿಂದೆ ನಾನು ನನ್ನ ಸೈನಿಕರಿಗಾಗಿ ಬೇಡುವ ಪ್ರಸಂಗಗಳೇ ಇರುತ್ತಿದ್ದುವು ಎನ್ನಬಹುದು". ಎಂದನು.

ಬೇಸಗೆಯು ಬಂದೊಡನೆ ವಾಶಿಂಗ್‌ಟನ್ ಆತನ ಮಡದಿ ಮತ್ತು ಆಳುಮಕ್ಕಳು ಎಲ್ಲರೂ ಅಲ್ಲಿಂದ ಹೊರಟು ಮೌಂಟ್‌ವೆರ್ನಾನಿಗೆ ಹೋದರು. ತನ್ನ ಅಣ್ಣ ಲಾರೆನ್ಸ್ ಬಿಟ್ಟು ಹೋದ ಭೂಮಿಗೇನೇ ತೆರಳಿ ತಾನು ಇನ್ನು ಮುಂದೆ ಪ್ಲೇಂಟರನಾಗಿರುತಕ್ಕುದೆಂದೇ ಜಾರ್ಜ್ ಭಾವಿಸಿದನು.

ಅಷ್ಟರ ತನಕ ಜೇಕ್ ಆ ಭೂಮಿಗಳನ್ನು ನೋಡಿಕೊಳ್ಳುತ್ತಿದ್ದರೂ ಆತನೇನೂ ಈ ಕಾರ್ಯದಲ್ಲಿ ಯಶಸ್ಸನ್ನು ಸಾಧಿಸಿರಲಿಲ್ಲ. ಆದುದರಿಂದ ಜಾರ್ಜ್ ಈಗ ಜಾರ್ಜ್ ಮೇಸನನ ಸಹಕಾರವನ್ನು ಪಡೆಯಬೇಕಾಯಿತು.

ಇಂಥ ಭೂಮಿಯಲ್ಲಿ ಕೆಲಸ ಮಾಡುವವರೆಲ್ಲ ಎಲ್ಲ ಕೆಲಸವನ್ನೂ ಮಾಡತಕ್ಕವರು ಇರಬೇಕು; ಎಲ್ಲ ಕೆಲಸಗಳನ್ನು ಅವರಿಂದ ಮಾಡಿಸಿದರೇನೇ ಅಂಥ ಜಮೀನು ಉಪಯೋಗಕ್ಕೆ ಬೀಳಬಲ್ಲುದು, ಎಂಬುದು ಮೇಸನನ ಅಭಿಪ್ರಾಯವಾಗಿತ್ತು.

ಆತನ ಭೂಮಿಗಳನ್ನೂ ಕಾರಖಾನೆಗಳನ್ನೂ ಪರೀಕ್ಷಿಸಿದ ವಾಶಿಂಗ್ಟನ್ ಮೇಸನನ ಅಭಿಪ್ರಾಯಗಳನ್ನು ಅನುಮೋದಿಸಿದನು. ಈತನಂತೆಯೇ ತಾನೂ ತನ್ನ ಭೂಮಿಗಳನ್ನು ಊರ್ಜಿತಗೊಳಿಸಬೇಕೆಂದೂ ತೀರ್ಮಾನಿಸಿದನು.

ಅದೇ ಅಕ್ಟೋಬರದಲ್ಲಿ ಪುನಃ ಈತನ ಸೈನಿಕ ಪ್ರವೃತ್ತಿಯನ್ನು ಕೆರಳಿಸುವ ವಾರ್ತೆಯು ಬಂದಿತು. ಬ್ರಿಟಿಷರು ಫ್ರೆಂಚರನ್ನೋಡಿಸಿ ಲುಯಿಸ್ಯಾನಾದ ಉತ್ತರಕ್ಕೆ ಇರುವ ಎಲ್ಲಾ ಭಾಗಗಳನ್ನೂ ಆಕ್ರಮಿಸಿದ್ದರು.

1760ರಲ್ಲಿ ಮೂರನೇ ಜಾರ್ಜ್ ಆಂಗ್ಲ ಸಿಂಹಾಸನವನ್ನೇರಿದನು. ಅದೇ ವರ್ಷದ ಮುಖ್ಯ ಘಟನೆಗಳಲ್ಲಿ ಇದೊಂದಾಗಿದ್ದರೆ, ಮಂತ್ರಿ ಮಂಡಳದ ವಸಾಹತುಪರ ನೀತಿಯು ಮತ್ತೊಂದು ಮುಖ್ಯ ಘಟನೆಯಾಗಿತ್ತು. ವಸಾಹತುಗಳಿಂದ ತಕ್ಕ ಆಯವನ್ನು ಸಂಗ್ರಹಿಸುವ ನೀತಿಯನ್ನಾಧರಿಸಿ 'ನೆವಿಗೇಶನ್ ಲಾಸ್, (Navigation Laws, ಗಳನ್ನು ಇಂಗ್ಲೆಂಡಿನ ಮಂತ್ರಿ ಮಂಡಳವು ಜಾರಿ ಮಾಡಿತು. ಇದರಿಂದ ವಸಾಹತುಗಳಲ್ಲಿರುವವರು ಸಮಸ್ತ ಸಾಮಗ್ರಿಗಳನ್ನೂ ಇಂಗ್ಲಂಡಿನಿಂದಲೇ ಪಡೆಕೊಳ್ಳಬೇಕಿತ್ತು.

ಆದರೆ ನ್ಯೂಇಂಗ್ಲೆಂಡ್ ಮತ್ತು ಬೋಸ್ಟೊನ್‌ನಲ್ಲಿ ಇದನ್ನು ವಿರೋಧಿಸಿ ಅನೇಕರು ಕಳ್ಳತನದಿಂದ ವ್ಯಾಪಾರ ಮಾಡಲಾರಂಭಿಸಿದರು. ಅನೇಕ ವರ್ಷಗಳ ತನಕ ಇಂಗ್ಲಿಷರು ಇದನ್ನು ತಿಳಿದೂ ಗಮನಿಸಲಿಲ್ಲ. ಆದರೆ ಈ ವರ್ಷ 1760ರಲ್ಲಿ ಇಂಥ ಕಳ್ಳ ವ್ಯಾಪಾರವನ್ನು ತಡೆಗಟ್ಟಬೇಕೆಂಬ ತೀರ್ಮಾನಕ್ಕೆ ಎಲ್ಲರೂ ಬಂದಿರುವ ನಿಮಿತ್ತ ಸುಂಕದ ಅಧಿಕಾರಿಗಳು ತಕ್ಕ 'ಸಹಾಯಕ ಆಜ್ಞೆ' (Writs of Assistance)ಗಳನ್ನು ಹಿಡಿದುಕೊಂಡು ಮನೆ ಮನೆಗೂ ಹೋಗಿ ಕಳ್ಳತನದಿಂದ ಸಂಗ್ರಹಿಸಿದ ಸಕ್ಕರೆಯೇ ಮೊದಲಾದ ವಸ್ತುಗಳನ್ನು ಕಂಡು ಹಿಡಿದರು. ಇದರಿಂದ ಸಿಟ್ಟಿಗೆದ್ದ ಬೋಸ್ಟೊನ್‌ನ ಜನರು ಈ ವಿಚಾರವನ್ನು ನ್ಯಾಯಸ್ಥಾನಕ್ಕೆ ಕೊಂಡು ಹೋದರು.

ಕಪಟವನ್ನೇ ಅರಿಯದ ವಾಶಿಂಗ್‌ಟನ್‌ನಿಗೆ ಇದೇನೆಂದು ಮೊದಲು ಹೊಳೆಯಲೇ ಇಲ್ಲ. ಮೇಸನ್ ಅತ್ಯಂತ ಉದ್ರೇಕದಿಂದ ಈ ವಿಚಾರವನ್ನು ವಿವರಿಸಲು, ಈತನು ತಪ್ಪಿತಸ್ಥರೊಡನೆ ತಪ್ಪಿಲ್ಲದವರೂ ಅನಾವಶ್ಯಕವಾದ ತ್ರಾಸಕ್ಕೀಡಾದರು ಎಂಬುದನ್ನು ತಿಳಿದನು.

ಯಾವ ವಿಧದಿಂದಲಾದರೂ ಎಷ್ಟೇ ಎಡರುತೊಡರುಗಳು ಬಂದರೂ ಸುಂಕಗಳನ್ನು ಪಡೆದೇ ತೀರತಕ್ಕುದು ಎಂದು ಇಂಗ್ಲಿಷರು ಹೆಣಗಿದರು. ಮುಖ್ಯ ರೇವುಗಳಲ್ಲೆಲ್ಲ ಯುದ್ಧ ಹಡಗುಗಳನ್ನೇ ನಿಲ್ಲಿಸಿ ಈ ಸುಂಕವನ್ನು ವಸೂಲು ಮಾಡಲಾಯಿತು ವಿಲಿಯಮ್ಸ್‌ಬರ್ಗ್‌ನ ಸಭೆಯಲ್ಲೂ ಈ ಕುರಿತಾದ ವಾಗ್ವಾದಗಳು ಬಲವತ್ತರವಾದುವು. ಆದರೆ ಇದಾವುದೂ ಜಾರ್ಜ್‌ನಿಗೆ ಫಕ್ಕನೆ ಅರ್ಥವಾಗುತ್ತಲಿರಲಿಲ್ಲ. ಇವರ ಬಾಯಿಮಾತಿನ ವಿರೋಧ ಸೂಚನೆಯನ್ನು ಇಂಗ್ಲಂಡದ ಮಂತ್ರಿಗಳು ಸ್ವೀಕರಿಸುವರೆಂದೇ ಈತನ ಭ್ರಮೆಯಾಗಿತ್ತು. ಭ್ರಮನಿರಸನವಾಗಬೇಕಾದರೆ ತುಂಬಾ ಹೊತ್ತೂ ಹಿಡಿಯಿತು ಎನ್ನಬಹುದು.

ಅಲ್ಲದೆ ಈ ಸಮಯದಲ್ಲೆಲ್ಲಾ ತನ್ನ ಭೂಮಿ ಮತ್ತು ಕೃಷಿಯ ವಿಚಾರವೇ ಆತನ ಲಕ್ಷ್ಯವನ್ನು ಆಕರ್ಷಿಸಿದ ಮುಖ್ಯ ವಿಷಯಗಳಾಗಿದ್ದುವು. ಇದನ್ನು ಆತನ ಡೈರಿಗಳಿಂದ ತಿಳಿದುಕೊಳ್ಳುವುದು ಶಕ್ಯವಿದೆ. ಆದರೆ ಇದರೊಡನೆ ಇತರ ರಾಜಕೀಯ ವಿಚಾರಗಳೂ, ಆಂದೋಲನಗಳೂ ಇವನ ಮನಸ್ಸನ್ನು ಸೆಳೆದಿದ್ದುವು. 1763ರಲ್ಲಿ ಬ್ರಿಟನ್ ಮತ್ತು ಫ್ರಾನ್ಸ್‌ಗಳೊಳಗೆ ಒಪ್ಪಂದವಾದರೂ ಕೂಡಲೇ 'ಪೊಂಟ್ಯೇಕ್ ವಾರ್' ಎಂದು ಕರೆಯಲಾದ ಇಂಡಿಯನರ ಯುದ್ಧವಾರಂಭವಾಗಲು ಬ್ರಿಟಿಶ್ ಸೇನೆಯೇ ಇದನ್ನು ನಿಲ್ಲಿಸಬೇಕಾಯಿತು.

ಅಲ್ಲೆಘಿನಿಗಳಾಚೆ ವಸಾಹತುಗಾರರು ಜಾಗವನ್ನಾಕ್ರಮಿಸಬಾರದು ಎಂಬಾಜ್ಞೆಯನ್ನು IIIನೇ ಜಾರ್ಜನು ಹೊರಡಿಸಿದನು. ಆದರೆ ಇದನ್ನು ಯಾವ ಜಮೀನ್ದಾರನೂ ಅಕ್ಷರಶಃ ಪಾಲಿಸಲಿಲ್ಲ.

ಇಷ್ಟೇ ಅಲ್ಲದೆ, ಯುದ್ಧಕಾಲದಲ್ಲಿ ವರ್ಜೀನಿಯಾದಲ್ಲಿ ನೋಟುಗಳ ಚಲಾವಣೆಯಾರಂಭವಾಗಿತ್ತು. ಆದರೆ ಇಂಗ್ಲಿಷರ ವ್ಯಾಪಾರದ ಸಂಸ್ಥೆಯು ಇದನ್ನೆಲ್ಲ ಮುಖ್ಯ ನಗದು ಹಣದಪಾವತಿಯನ್ನು ವಿರೋಧಿಸಿ

ವಸಾಹತುಗಳೆಲ್ಲವೂ ಈ ಆಜ್ಞೆಯನ್ನು ಶಿರಸಾವಹಿಸತಕ್ಕುದೆಂದು ಆಜ್ಞಾಪಿಸಿತು.

ಒಂದು ದಿನ ದೀರ್ಘಕಾಲದತನಕ ಕೂಡಿದ ಸಭೆಯು ಮುಕ್ತಾಯವಾದನಂತರ ಜಾರ್ಜ್ ರಿಚಾರ್ಡ್ ಹೆನ್ರಿ ಲೀ ಯೆಂಬ ಪ್ರತಿನಿಧಿಯೊಡನೆ ತುಸು ಗಾಂಭೀರ್ಯದಿಂದಲೇ, "ನೀನು ಇಂದು ಹೇಳಿದ ವಿಚಾರ ಸರಿಯಾದುದು. ನಾವು ಖಂಡಿತವಾಗಿಯೂ ಲಂಡನಿನ ವ್ಯಾಪಾರೀ ಸಂಸ್ಥೆಯ ಆಜ್ಞಾಧಾರಕರಾಗುವಂತಿಲ್ಲ" ಎಂದನು.

'ಖಂಡಿತ, ನಾವು ವರ್ಜೀನಿಯಾದವರು ಏನು ಆಳುಮಕ್ಕಳೆ? ನಾವೂ ಅವರಂತೆಯೇ ಇಂಗ್ಲಿಷ್ ಜನಾಂಗವೇ, ಇಂಗ್ಲಿಷ್ ಮಕ್ಕಳೇ. ಆದುದರಿಂದ ನಮ್ಮ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳತಕ್ಕುದು ನಮ್ಮ ಧರ್ಮ." ಎಂಬ ಉತ್ತರವು ಬಂದಿತು.

ಉಳಿದ ಅಧಿವೇಶನಗಳಲ್ಲೂ ಈ ಅಭಿಪ್ರಾಯವೇ ಸ್ವೀಕರಿಸಲ್ಪಟ್ಟಿತು. 1763-1765ರ ಅವಧಿಯಲ್ಲಿ ಪರಂಪರಾಗತವಾದ ಅಭಿಪ್ರಾಯಗಳೆಲ್ಲ ತ್ಯಜಿಸಲ್ಪಟ್ಟು ಹೊಸ ಅಭಿಪ್ರಾಯಗಳು ರೂಢವಾಗಹತ್ತಿದುವು. ವರ್ಜೀನಿಯಾದ ಉದ್ದಕ್ಕೂ ಎಲ್ಲರಲ್ಲೂ ಇಂಥ ಆಂದೋಲನವು ಇಂಗ್ಲಂಡ್ ಮತ್ತು ವಸಾಹತುಗಳಲ್ಲಿನ ಅಂತರವನ್ನು ಮತ್ತೂ ಹೆಚ್ಚಿಸಿತು ಎನ್ನಬಹುದು

ಅಧ್ಯಾಯ ೯

ಪ್ರತಿನಿಧಿಗಳ ಸಭೆಯು ಮೇ 1, 1765ರಂದು ಆರಂಭವಾಯಿತು. ಅಲ್ಲಿದ್ದ ಪ್ರತಿನಿಧಿಗಳಲ್ಲಾವನೂ ಮುಂದೆ ಅನೇಕ ವರ್ಷಗಳ ತನಕ ಅಂದು ಹಿಂದಿನ ಭಾಗದಲ್ಲೇ ಕುಳಿತಿದ್ದರೂ, ಮುಂದೆ ಮಹಾ ಖ್ಯಾತಿವಂತನಾದ ಒಬ್ಬ ಸದಸ್ಯನನ್ನು ಮರೆಯಲಿಲ್ಲ. ಬಾಗಿಲಿನ ಹತ್ತಿರ ಥೋಮಸ್ ಜೆಫ್ಫರ್‌ಸನ್‌ನು ಆಗಂತುಕರಲ್ಲೊಬ್ಬನಾಗಿ ನಿಂತಿದ್ದನು.

ಸದ್ದು ಕೇಳಿತು, 'ಸ್ಪೀಕರರೇ?'

'ಸರಿ. ಪೇಟ್ರಿಕ್ ಹೆನ್ರಿಯು ಈಗ ಮಾತನಾಡಬಹುದು" ಎಂದು ಸ್ಪೀಕರರು (ಅಧ್ಯಕ್ಷರು) ವಿಧಿಸಿದರು.

''ಸ್ಟೇಂಪ್ ಏಕ್ಟಿನ ವಿಷಯವಾಗಿ ನಾಲ್ಕು ಠರಾವುಗಳನ್ನು ನಾನು ತಂದಿರುತ್ತೇನೆ''ಂದು ಹೇಳುತ್ತ ಹೆನ್ರಿಯು ಮತ್ತೂ ಮುಂದರಿಸಿದನು.

ಇದರಲ್ಲಿ ಸ್ಟೇಂಪ್ ಏಕ್ಟಿನ ನಿಯಮಗಳನ್ನು ಕಟುವಾಗಿ ಟೀಕಿಸಲಾಗಿತ್ತು. ಇದು ಕೇವಲ ದುಡ್ಡಿನ ಪ್ರಶ್ನೆಯಾಗಿಲ್ಲ. ಪ್ರತಿ ಕಾಗದದ ಚೂರಿಗೂ, ಅಂದರೆ ಯಾವ ವ್ಯವಹಾರವನ್ನು ತೋರಿಸುವ ಕಾಗದದ ಚೂರಿಗೂ ಇಂಥ ಸ್ಟೇಂಪನ್ನಂಟಿಸಬೇಕೆಂಬುದು ಈ ಶಾಸನದ ಮೇರೆಗೆ ಆಜ್ಞಾಪಿಸಲಾಗಿತ್ತು.

ಹೆನ್ರಿಯು ಓದಿದ ಠರಾವಿನ ಅಂತ್ಯಭಾಗವು ಹೀಗಿತ್ತು:

''ಈ ವಸಾಹತುವಿಗೆ ಹೊರತಾಗಿರುವ ಯಾವನೇ ಇರಲಿ, ಯಾವ ರಾಜ್ಯ, ಸಂಸ್ಥೆಗಳೇ ಇರಲಿ, ಅವು ನಮ್ಮ ಮೇಲೆ ತೆರಿಗೆಯನ್ನು ಯಾವುದೇ ರೂಪದಲ್ಲಿ ಹೇರಲು ಇಚ್ಛಿಸಿದರೆ, ಅವು ನಮ್ಮ ಶತ್ರುಸ್ಥಾನದಲ್ಲಿರತಕ್ಕವುಗಳು, ಮತ್ತು ಹಾಗೆಯೇ ಪರಿಗಣಿಸಲ್ಪಡತಕ್ಕವುಗಳು."

ತನ್ನ ಮಾತುಗಳನ್ನು ಮುಗಿಸಿ ಪೇಟ್ರಿಕ್ ಹೆನ್ರಿಯು ಯುದ್ಧ ಹೂಡಲು ಸನ್ನದ್ಧನಾದಂತೆ ಎದ್ದುನಿಂತನು. ಆಗಲೇ ಚರ್ಚೆಯು ಆರಂಭವಾಯಿತು. ಅನೇಕರ ದೃಷ್ಟಿಯಲ್ಲಿ ಈ ಮಸೂದೆಯು ಅತ್ಯಂತ ತೀವ್ರವಾಗಿತ್ತು. ಇವರ ಅಭಿಪ್ರಾಯಗಳನ್ನೆಲ್ಲ ಕೇಳಿದ ನಂತರ ಹೆನ್ರಿಯು ತಾನು ಮಾತಾಡಿದನು. ಇವನನ್ನಾಲಿಸಿದ ವಾಶಿಂಗ್‌ಟನ್ ಪ್ರಭೃತಿಗಳು ದಬ್ಬಾಳಿಕೆಯ ಪ್ರಬಲ ವಿರೋಧಿಗಳಾದರು, ಮತ್ತು ತಮ್ಮ ಸ್ವಾತಂತ್ರ್ಯಕ್ಕಾಗಿ ಪಣತೊಟ್ಟರು.

ಎಲ್ಲಾ ದಬ್ಬಾಳಿಕೆಯನ್ನು ವಿರೋಧಿಸುತ್ತ ಈತನ ಮಾತು ಎಲ್ಲರನ್ನೂ ದಂಗುಬಡಿಸಿತ್ತು, ''ಟಾರ್ಕ್ವಿನ್ ಸೀಸರರಿಗೆ ಬ್ರೂಟಸ್ ಇದಂತೆಯೇ ಹಾಗೆಯೇ, Iನೆಯ ಚಾರ್ಲ್ಸ್‌ಗೆ ಕ್ರೋಮ್‌ವೆಲ್‌ನಂತೆಯೇ, ಇದೇ ಈಗಿನ 3ನೇ ಜಾರ್ಜನಿಗೆ........"

ಅಷ್ಟರಲ್ಲಿ, 'ರಾಜದ್ರೋಹ, ರಾಜದ್ರೋಹ' ಎಂದು ಎಲ್ಲೆಡೆಗಳಲ್ಲೂ ಕೂಗು ಕೇಳಿತು.

ಆದರೆ ಕೈಯನ್ನೆತ್ತಿ ಈತನು ಮತ್ತೂ ಮುಂದುವರಿಸಿದನು, "ಸರಿ, ಇವರ ಉದಾಹರಣೆಯಿಂದಲಾದರೂ 3ನೇ ಜಾರ್ಜ್ ಬುದ್ಧಿ ಕಲಿಯತಕ್ಕುದು. ಇದೇನೂ ರಾಜದ್ರೋಹವಲ್ಲ, ಖಂಡಿತವಾಗಿಯೂ ದ್ರೋಹವಲ್ಲ" ಎಂದು ಘೋಷಿಸಿದನು.

ಈ ಭಾಷಣದಿಂದ ಈ ಮಸೂದೆಯನ್ನು ಚರ್ಚಿಸುವ ಇತರ ಭಾಷಣಗಳಿಂದಲೂ ವಾಶಿಂಗ್‌ಟನ್‌ನಲ್ಲಿ ವಿದ್ಯುತ್ಸಂಚಾರವಾದಂತಾಯಿತು. ಆ ತನಕ ಇಲ್ಲದ ಭಾವನೆ, ಪ್ರೇರಣೆಗಳು ವಾಶಿಂಗ್‌ಟನ್‌ನಲ್ಲಿ ಶಕ್ತಿಯನ್ನು ತುಂಬಿದುವು. ಈ ಠರಾವುಗಳನ್ನೆಲ್ಲ ಬ್ರಿಟಿಷ್ ಸರಕಾರಕ್ಕೆ ಕಳುಹಲಾಯಿತು.

ಹೆನ್ರಿಯ ಭಾಷಣಗಳಿಂದ ಪ್ರೋತ್ಸಾಹಿತರಾದ ಅನೇಕ ಮಂದಿ ಅಮೇರಿಕನರು ಬ್ರಿಟಿಷರ ವಿರೋಧವಾಗಿ ಸಭೆ ಸೇರಿಸಿದರು, ಕೃತಕ ನ್ಯಾಯಾಲಯಗಳನ್ನು ರಚಿಸಿಕೊಂಡು ಆಂಗ್ಲರನ್ನು ತಪ್ಪಿತಸ್ಥರನ್ನಾಗಿ ನಿರ್ಣಯಿಸಿ ಅವರ ಬೊಂಬೆಗಳನ್ನೂ 'ಮಿಸ್ಟರ್ ಸ್ಟೇಂಪ್ ಏಕ್ಟ'ನ್ನೂ ಸುಟ್ಟು ಹಾಕಿದರು.

ಶರದೃತುವಿನಲ್ಲಿ ಸ್ಟೇಂಪುಗಳನ್ನು ಬ್ರಿಟಿಷ ಹಡಗುಗಳು ತಂದಾಗ ಪುನಃ ವಿರೋಧಪರ ಕೂಗುಗಳು ಕೇಳಿ ಬಂದುವು. ಬೊಂಬೆಗಳನ್ನು ಸುಡುತ್ತಲೂ ಮತ್ತು ತಮ್ಮ ಧ್ವಜಗಳನ್ನು ಅರ್ಧದಷ್ಟೇ ಏರಿಸುತ್ತಲೂ ಜನರು ತಮ್ಮ ವಿರೋಧವನ್ನು ಸೂಚಿಸಿದರು.

ನ್ಯೂಯಾರ್ಕಿನಲ್ಲಿ ಜನರ ಕೂಟವು ಅಲ್ಲಿನ ಗವರ್ನರನ ಬೊಂಬೆಯನ್ನು ಮಾಡಿ ಅದನ್ನು ಆತನ ರಥದಲ್ಲಿಟ್ಟು ಸುಟ್ಟು ಹಾಕಿದರು. ಇದರಿಂದಾಗಿ ಅವನು ಇದ್ದ ಎಲ್ಲಾ ಸ್ಟೇಂಪುಗಳನ್ನು ಅಡಗಿಸಿಡುವಂತಾಯಿತು. ಇಂಥ ಸ್ಟೇಂಪುಗಳನ್ನು ಯಾವನೂ ತಾನು ಉಪಯೋಗಿಸಲಾರೆನೆಂದು ಪಣ ತೊಟ್ಟನು. ಇದರಿಂದಾಗಿ ಕೋರ್ಟುಗಳು ಮುಚ್ಚುವ ಪ್ರಸಂಗವೂ, ವಾರ್ತಾಪತ್ರಿಕೆಗಳೂ ನಿಲ್ಲುವ ಪ್ರಸಂಗವೂ ಬಂದುವು.

ಜಾರ್ಜ್ ಮೇಸನನನ್ನು ಭೇಟಿಯಾದ ವಾಶಿಂಗ್‌ಟನ್ ಒಂದು

ದಿನ "ಅಯ್ಯಾ ನಿಮಗೆ ಇಂಥ ಕೂಟ, ವಿರೋಧ ಪ್ರದರ್ಶನಗಳಿಂದ ದುಃಖವಿಲ್ಲವೇ?" ಎಂದು ಪ್ರಶ್ನಿಸಿದನು.

ತಲೆಯನ್ನಲ್ಲಾಡಿಸುತ್ತ ಮೇಸನ್ ಉತ್ತರಿಸಿದನು, "ಇಲ್ಲ; ಇಷ್ಟು ಮಾತ್ರವೇ ಅಲ್ಲದೆ, ಎಲ್ಲ ವಸಾಹತುಗಳವರೂ ಈ ವಿಷಯದಲ್ಲಿ ಒಮ್ಮತ ವನ್ನು ಪ್ರದರ್ಶಿಸಿರುತ್ತಾರೆ. ಆದುದರಿಂದಲೇ ಡಾ| ಫ್ರೇಂಕ್ಲಿನರನ್ನು ಅವರು ಎಲ್ಲಾ ವಸಾಹತುಗಳನ್ನು ಪ್ರತಿನಿಧೀಕರಿಸುವಂತೆ ಕೇಳಲಾಗಿದೆ ಮತ್ತು ಕಾಮನ್ಸ್ (House of Commons)ಗೆ ಕಳುಹಲಾಗಿದೆ."

1766ರ ವಸಂತದ ಸಮಯ ಈ ಸ್ಟೇಂಪ್ ಏಕ್ಟನ್ನು ಹಿಂದೆಗೆ ಯಲ್ಪಟ್ಟ ವಾರ್ತೆ ಬಂದಿತು.

ಇದರ ನಂತರ ಒಂದು ವರ್ಷದೊಳಗಾಗಿ ಬ್ರಿಟಿಷ್ ಅರ್ಥ ಮಂತ್ರಿ ಗಾಜು, ಕಾಗದ, ಬಣ್ಣ ಮತ್ತು ಚಾ ಇವುಗಳ ಮೇಲೆ ತೆರಿಗೆಯನ್ನು ಹೊರಿಸುವ ಬಿಲ್ಲೊಂದನ್ನು ತಂದನು. ಪುನಃ ಅಮೇರಿಕದಲ್ಲಿ ವಿರೋಧ ಪ್ರದರ್ಶನಗಳಾರಂಭವಾದುವು. ಇಂಗ್ಲೆಂಡಿನಿಂದ ವಸ್ತುಗಳನ್ನು ಆಮದು ಮಾಡುವುದನ್ನೇ ಅಮೇರಿಕದವರು ನಿಲ್ಲಿಸಲಾರಂಭಿಸಿದರು. ಇಂಥ ಕಾರ್ಯಕ್ರಮಗಳಲ್ಲೆಲ್ಲಾ ಬೋಸ್ಟೋನ್‌ನಲ್ಲಿ ಏಡಮ್ಸ್ ಮುಖಂಡನಾಗಿ ದ್ದನು.

ಮಾರ್ಚ್ 1768ರಲ್ಲಿ ಗವರ್ನರ್ ಫೇಕ್ವಿರ್ ಸತ್ತು ಹೋದನು. ಆಗ ಪ್ರತಿನಿಧಿಗಳ ಸಭೆಯು ತಾತ್ಕಾಲಿಕ ಮುಖ್ಯಸ್ಥನಾದ ಜ್ಹೋನ್ ಬ್ಲೇರ್‌ನ ನೇತೃತ್ವದಲ್ಲಿ ತನ್ನ ಅಧಿಕಾರವನ್ನು ಹೆಚ್ಚಿಸುತ್ತ ವಿವಿಧ ವಸಾ ಹತುಗಳ ಸಮಾನ ಸ್ಥಾನಮಾನ ಮತ್ತು ಹಕ್ಕು ಬಾಧ್ಯತೆಗಳನ್ನು ನಿಶ್ಚ ಯಿಸಿತು. ಇದರಿಂದಲೂ ಜಾರ್ಜ್ ವಾಶಿಂಗ್‌ಟನ್‌ನಲ್ಲಿನ ದಂಗೆ ಯೇಳುವ ಪ್ರವೃತ್ತಿಯೂ ಜಾಗ್ರತವಾಯಿತು ಎನ್ನಬಹುದು.

ಇಷ್ಟರಲ್ಲಿ ಉತ್ತರದಲ್ಲೂ ಜನರು ಸುಮ್ಮನೆ ಕುಳಿತುಕೊಂಡಿರಲಿಲ್ಲ. ಸುಂಕದ ಅಧಿಕಾರಿಗಳನ್ನು ನೋಯಿಸುತ್ತಲೂ, ದಂಡಿಸುತ್ತಲೂ ಪ್ರೊವಿ ಡೆನ್ಸ್ ಮತ್ತು ನ್ಯೂಯಾರ್ಕ್‌ಗಳಲ್ಲಿ ಜನರು ಅಧಿಕಾರಿ ವರ್ಗಕ್ಕೆ ಕೀಟಲೆ ಕೊಡುತ್ತಿದ್ದರು. ಅನೇಕರಂತೂ ಮುಖಮರೆಸಿ, ಕಪ್ಪು ಪೋಷಾಕುಗಳನ್ನು

ಧರಿಸಿ ಸಿಕ್ಕಾಬಟ್ಟೆ ಅನ್ಯಾಯಗಳನ್ನು ಮಾಡುತ್ತಿದ್ದರು. ಇವೇನೂ ಅಪರಾಧವೆಂದು ಪರಿಗಣಿಸಲ್ಪಡಲಿಲ್ಲ.

ಬೆಲ್ವಾಯ್ರ್ ಮತ್ತು ಮೌಂಟ್ ವೆರ್ನಾನಿನ ಮನೆತನಗಳು ಕೂಡಿದ ಒಂದು ಸಂದರ್ಭದಲ್ಲಿ ಸೇಲ್ಲಿ ಫೇರ್‌ಫೇಕ್ಸ್ ಜಾರ್ಜನನ್ನು ಪ್ರಶ್ನಿಸದಿರಲಿಲ್ಲ, "ಇದೇನು? ನಿನ್ನ ಮುಖದಲ್ಲಿನ ಹೊಸ ಕಳೆಯು ಬ್ರಿಟಿಷರ ವಿರೋಧವನ್ನೇ ಸಾರುತ್ತಿದೆಯಲ್ಲ." ಎಂದಳು ಸೇಲ್ಲಿ.

ಮಕ್ಕಳಂತೆ ನಾಚಿಕೆಯಿಂದ ಕೆಂಪಡರುತ್ತ, 'ಹೌದು ತಾಯೀ, ನಮ್ಮ ಹಕ್ಕುಗಳ ಬಗ್ಗೆ ವರ್ಜೀನಿಯಾದವರಂತೆ ಹೆಣಗತಕ್ಕದ್ದು ಎಂದು ಭಾವಿಸಿದ್ದೇನೆ. ಆಮದುಗಳನ್ನೇ ನಿಲ್ಲಿಸಿಬಿಟ್ಟರೆ ಆ ಹಡಗದವರೇ ಅವರ ಮಂತ್ರಿಗಳ ವಿರೋಧವಾಗಿ ವಾದಿಸುವಂತಾಗುತ್ತದೆ ಎಂಬುದು ನಮ್ಮ ನೂತನ ತಂತ್ರ' ಎಂದು ಜಾರ್ಜ್ ಉತ್ತರಿಸಿದನು.

'ಹೂಂ ಹೌದು ಇದೇ ಮೇಸನನ ಮಹಾ ಅಸ್ತ್ರ", ಎಂದು ಸೇಲ್ಲಿ ಇದನ್ನು ಅನುಮೋದಿಸಿದಳು.

ಅಂದಿನ ರಾತ್ರಿಯ ಕೂಟಗಳಲ್ಲೆಲ್ಲಾ ವರ್ಜೀನಿಯಾದ ನೂತನ ಗವರ್ನರ್ ಬೊಟೋರ್ಡ್‌ನದೇ ಮಾತು. ಈತನು ಬ್ರಿಟನದಲ್ಲಿ ಬಹಳ ಜನಾದರಣೀಯನೆಂದು ಖ್ಯಾತನಾಗಿದ್ದರಿಂದ ಇಲ್ಲಿ ಹೇಗೆ ವರ್ತಿಸಿಯಾನು ಎಂಬುದೇ ಎಲ್ಲರ ಪ್ರಶ್ನೆಯಾಗಿತ್ತು.

ಮೇ,1769ರಲ್ಲಿ ಸಭೆಯನ್ನು ನೂತನ ಗವರ್ನರನು ಕೂಡಿಸಿದನು. ಈ ಬಾರಿ ಮೇಸನನ ತಂತ್ರವನ್ನೂ ಪ್ರಯೋಗಿಸಿ ನೋಡಬೇಕೆಂದು ವಾಶಿಂಗ್‌ಟನ್ ಯೋಚಿಸಿದ್ದನು.

ಭವ್ಯವಾದ ವೇಷ ಭೂಷಣಗಳಿಂದ ಅಲಂಕೃತನಾದ ನೂತನ ಗವರ್ನರನು ಇವಿಷ್ಟರಿಂದಲೇ ಈ ವಸಾಹತುಗಳ ಮೇಲೆ ಇಂಗ್ಲಂಡದ ಸಾರ್ವಭೌಮಪದವನ್ನು ಬೀರುತ್ತಿರುವನೋ ಎಂಬುದನ್ನು ಆತನ ಠೀವಿಯಿಂದ ಜನರು ಭ್ರಮಿಸುವಂತಾಯಿತು. ಆದರೆ ಇಂಥ ವಿಭ್ರಮಗಳಿಗೆ ಬಲಿಬೀಳುವಷ್ಟು ಇಂಥ ವೇಷಭೂಷಣಗಳಿಗೆ ಮರುಳಾಗುವಷ್ಟು ಆಗ ಮಂದಿ ಹಿಂದುಳಿದಿರಲಿಲ್ಲ.

ಇನ್ನೊಂದು ಶಾಸನವು ಈ ಮನುಷ್ಯರನ್ನು ಮತ್ತೂ ರೇಗಿಸಿತು. ಇಲ್ಲಿನ ತಪ್ಪಿತಸ್ಥರನ್ನು ಇಲ್ಲೇ ಶಿಕ್ಷಿಸದೆ ಇಂಗ್ಲಂಡಿಗೆ ಕಳುಹಿ ಅಲ್ಲಿ ಅವರನ್ನು ವಿಚಾರಿಸಿ ದಂಡಿಸತಕ್ಕದು ಎಂದು ರೂಢಿಗೆ ಬಂದ ಶಾಸನವು ಅರ್ಧಮರ್ಧ ಪ್ರೇರಣೆ ಪಡೆದಿದ್ದ ಪುಕ್ಕಲು ಜೀವಗಳನ್ನೂ ರೇಗಿಸಿ ಸೆಟೆದು ನಿಲ್ಲುವಂತೆ ಮಾಡಿತು. ಇದರಿಂದಲಂತೂ ಅಮೇರಿಕದ ಸಂಸ್ಥೆಗಳಿಗೇನೇ ಹಾನಿ ಬರುವಂತಿತ್ತು. ಇಂಥ ಶಾಸನವನ್ನು ಪ್ರಬಲವಾಗಿ ಎಲ್ಲ ಪ್ರತಿನಿಧಿ ಸಭೆಗಳೂ ವಿರೋಧಿಸಿದುವು ಮತ್ತು ಉಳಿದ ವಸಾಹತುಗಳ ಸಭೆಗಳಿಗೂ ಇವುಗಳ ನಕಲುಗಳನ್ನು ಕಳುಹಲಾಯಿತು.

ಹೀಗೆ ತಮ್ಮ ಸ್ವಾತಂತ್ರ್ಯವನ್ನು ತೋರಲೆತ್ನಿಸಿದ ಸಭೆಗಳನ್ನು ಗವರ್ನರನು ವಿಸರ್ಜಿಸಿದನು. ಆಗ ಈ ಸಭೆಗಳೆಲ್ಲವೂ ರಾಲೀ ಟೀವರ್ನ್ ಹೋಟೇಲಿನಲ್ಲಿ ಕೂಡುತ್ತ ಬ್ರಿಟನಿನಿಂದ ಆಮದುಗಳನ್ನು ನಿಲ್ಲಿಸುವ ಮೇಸನ್ ಪ್ರಣೀತತಂತ್ರವನ್ನು ಅಂಗೀಕರಿಸಿದುವು. ಇದರ ಸೂತ್ರಧಾರಿಯು ಜಾರ್ಜ್ ವಾಶಿಂಗ್‌ಟನ್ ಆಗಿದ್ದನೆಂದರೆ ಎಲ್ಲರಿಗೂ ಆಶ್ಚರ್ಯ. ಚಿಕ್ಕ ಮತ್ತು ನೂತನ ಪ್ರತಿನಿಧಿಗಳೂ ಈತನ ಆದರ್ಶವನ್ನೂ ನಿಲುಮೆಯನ್ನೂ ಮುಕ್ತಕಂಠದಿಂದ ಹೊಗಳುತ್ತಿದ್ದರು.

ಥೋಮಸ್ ಜೆಫ್ಫರ್‌ಸನ್‌ನೂ ಇದನ್ನು ಅನುಮೋದಿಸಿದನು. ಇಷ್ಟರಲ್ಲಿ ಗವರ್ನರನಿಂದ ಪಶ್ಚಿಮದ ಪ್ರಾಂತಗಳ ವಿಭಜನೆಯ ಪ್ರಶ್ನೆಯು ನಿಷ್ಕರ್ಷೆಯಾಗುವದರಲ್ಲಿತ್ತು. ಪ್ರತಿಯೊಬ್ಬ ಅರ್ಥಿಯೂ (claimant) ಆತನನ್ನು ಕಂಡು ತನಗೆ ಅವಶ್ಯವಿರುವ ಸರ್ವೆ ಮೊದಲಾದುವನ್ನೆಲ್ಲ ನಡೆಸಿ ಪ್ರಾರ್ಥಿಸಬೇಕೆಂದು ಈತನು ಆಜ್ಞಾಪಿಸಿದನು. ಜಾರ್ಜ್ ಓಹಿಯೋ ಪ್ರಾಂತಕ್ಕೆ ತಾನೇ ಹೋಗುವುದಾಗಿ ನಿಶ್ಚಯಿಸಿದನು.

ಒಂಭತ್ತು ವಾರಗಳ ಪ್ರಯಾಣದ ನಂತರ ಈತನು 'ಗ್ರೇಟ್ ಕೆನ್ವಾ'ದ ಉತ್ತರಕ್ಕೆ ತಲಪಿದನು. ಈ ಭಾಗವನ್ನೆಲ್ಲ ಸೈನಿಕರ ಬಗ್ಗೆ ಮೀಸಲಿಡತಕ್ಕತೆಂದೂ ಈತನು ಸಕಾರಣವಾಗಿ ವಾದಿಸಿದನು.

ಈ ಸಮಯದಲ್ಲಿಯೇ ಬೋಸ್ಟೋನ್ ನಗರವು ತುಂಬಾ ಬೆಳಕಿಗೆ ಬಂದಿತ್ತು ಎನ್ನಬಹುದು. ಬೋಸ್ಟೋನ್‌ನ ಕೊಲೆಯ ಅನಾಹುತವು ಜನಜನಿತವಾಗಿ ಇತರ ವಸಾಹತುಗಳಲ್ಲಿಯೂ ಅನೇಕರಲ್ಲಿ ಮರುಕ

ವನ್ನೂ ಹಾಗೆಯೇ ಉದ್ವೇಗವನ್ನೂ ಉಂಟುಮಾಡಿತ್ತು. ನಿಶ್ಯಸ್ತ್ರ ಅಮೇರಿಕ ಪ್ರಜೆಗಳ ಕೊಲೆಯೆಂದರೆ ನವಿರೇಳಬೇಡವೆ? ಆದರೂ ಇದರ ವಿಚಾರವನ್ನಲ್ಲಿ ಪರಿಶೀಲಿಸಿದಾಗ ಇದರ ದೂರು ಆ ಬೇಜವಾಬ್ದಾರೀ ಜನರ ಮೇಲೂ ಬೀಳತಕ್ಕುದು ಎನ್ನುವುದು ಸಿದ್ಧವಾಯಿತು.

ಈ ಗವರ್ನರ್ ಬೊಟೋರ್ಟ್‌ನೂ ಅಕಾಸ್ಮತ್ತಾಗಿ ಸತ್ತು ಹೋದನು. ಇವನ ನಂತರ ಲಾರ್ಡ್ ಡನ್ಮೂರ್ ವರ್ಜೀನೀಯಾಕ್ಕೆ ನ್ಯೂಯಾರ್ಕ್‌ನಿಂದ ವರ್ಗವಾಗಿ ಬಂದನು.

'ಮೇರಿಲೆಂಡದ ಗವರ್ನರನಷ್ಟು ಚುರುಕಾಗಿದ್ದರೆ ನಮ್ಮ ಪುಣ್ಯವೇ ಸರಿ', ಎಂದು ಜಾರ್ಜ್ ವಾಶಿಂಗ್‌ಟನ್ ತನ್ನ ಹೆಂಡತಿಯೊಡನೆ ಹೇಳುತ್ತಿದ್ದನು.

ಜೇಕ್ ಕಸ್ಟಿಸ್ ಅನಾಪೋಲಿಸ್‌ನಲ್ಲಿ ಶಾಲೆಯಲ್ಲಿ ಕಲಿಯುತ್ತಿದ್ದನು. ಅವನನ್ನು ಸಂದರ್ಶಿಸಲು ಹೋಗುತ್ತಿದ್ದ ಜಾರ್ಜ್ ಆ ಪಟ್ಟಣದ ದೊಡ್ಡವರೆಲ್ಲರಲ್ಲೂ ಕಲೆತುಕೊಳ್ಳಲೂ ಶಕ್ತನಾಗಿದ್ದನು.

ಇವರಿಬ್ಬರೂ ಒಂದು ದಿನ ಬೆನೆಡಿಕ್ಟ್ ಕಾಲ್ವರ್ಡ್‌ನ ಜಮೀನಿನಲ್ಲಿ ಭೋಜನಕ್ಕೆ ಹೋಗಿದ್ದರು. ಅಲ್ಲೇ ಜೇಕ್ ತನ್ನ ಭಾವೀ ಮಡದಿ ಇಲೀವರ್ ಕಾಲ್ವರ್ಡ್‌ಳನ್ನು ಮೊದಲು ಕಂಡುದು.

ಹೀಗೆ ಹನ್ನೆರಡು ವರ್ಷಗಳ ಕಾಲ, ಅಂದರೆ 1772ರ ತನಕ ಜಾರ್ಜ್ ಹತ್ತು ಸಮಸ್ತರೊಡನೆ ಕೂಡಿ ಸಮಾಜದಲ್ಲಿ ಪ್ರತಿಷ್ಠಿತನಾಗಿ ಬಾಳಿದನು ಎನ್ನಬಹುದು. ತನ್ನ ಜಮೀನಿನ ಕೆಲಸ, ಕೃಷಿ ಸಂಬಂಧವಾದ ಕೆಲಸ ಮತ್ತು ಸ್ನೇಹಿತರೊಡನೆ ವರ್ತನೆ ಹಾಗೂ ಸಾಮಾಜಿಕ ಮತ್ತು ರಾಜಕೀಯ ಕಾರ್ಯಗಳಲ್ಲೆಲ್ಲಾ ಈತನು ಒಳ್ಳೇ ಹದವರಿತು ಕೆಲಸ ಮಾಡಲು ಕಲಿತಿದ್ದನು. ಸೈನಿಕರು, ಅಧಿಕಾರಿಗಳು ಮತ್ತು ಸಾಮಾನ್ಯ ಜೀವಿಗಳು ಎಲ್ಲರೊಡನೆಯೂ ಈತನ ಸಂಪರ್ಕವಿತ್ತು. ಅನಂತರದ ಮೂರು ವರ್ಷಗಳಲ್ಲಿ ಈತನು ಬಹಳ ದ್ರುತತರವಾಗಿಯೇ ಹೆಚ್ಚಿನ ಸ್ಥಾನಮಾನಗಳನ್ನು ಪಡೆಯಲು ಶಕ್ತನಾದನು.

ಅಧ್ಯಾಯ ೧೦

1773ರಲ್ಲಿ ವಿಲಿಯಮ್ಸ್‌ಬರ್ಗ್‌ಗೆ ಹೋದ ಜಾರ್ಜ್ ವಾಶಿಂಗ್‌ಟನ್ ವಸಾಹತುವಿನ ಖಜಾನ್ಜಿಯ ಮನೆಯನ್ನು ಸಂದರ್ಶಿಸಿ ಅಲ್ಲಿನ ವಿವರಗಳನ್ನೆಲ್ಲ ಸಂಗ್ರಹಿಸಿದನು. ಮೆಸೆಚುಸೆಟ್ಸ್‌ನ ಗವರ್ನರ್ ಹಚಿನ್‌ಸನ್‌ನಾದರೋ ಅಲ್ಲಿನ ಎಲ್ಲ ಮುಖಂಡರ ಮೇಲೆ ಅಲ್ಲ ಸಲ್ಲದ ಆಪಾದನೆಗಳನ್ನೂ ಹೊರಿಸಿದ್ದನು. ಇವುಗಳನ್ನು ಲಂಡನಿನಲ್ಲಿ ಫ್ರೇಂಕ್ಲಿನ್ ಪಡೆದು ಅವುಗಳನ್ನು ಪುನಃ ಬೋಸ್ಟೊನಿಗೆ ಕಳುಹಿದ್ದುದರಿಂದ ಹಚಿನ್ಸನ್‌ನ ಆಟವು ಬಯಲಿಗೆಳೆಯಲ್ಪಟ್ಟು ಆತನು ರಾಜಿಯನ್ನೀಯಬೇಕೆಂದು ಜನರು ಒತ್ತಾಯಿಸಲು ಹತ್ತಿದ್ದರು. ಆತನು ಸಾಧ್ಯವಿಲ್ಲವೆನ್ನಲು ಊರಿನ ಎಲ್ಲಾ ಪ್ರಮುಖರೂ, ಪ್ರತಿನಿಧಿಗಳೂ ಸೇರಿ ತಮ್ಮ ವಿರೋಧವನ್ನು ಬಹಿರಂಗವಾಗಿ ಪ್ರದರ್ಶಿಸಿದರು. ಆದರೆ ಇದರಿಂದ ಸತ್ಪರಿಣಾಮವೇನೂ ಕಂಡುಬರಲಿಲ್ಲ.

'ಸರಿ, ಇದರಿಂದ ಪರಿಣಾಮವೇನೂ ಇಲ್ಲದಿದ್ದರೂ ನಮ್ಮ ಆಮದುಗಳ ಬಹಿಷ್ಕಾರದ ನೀತಿಯಿಂದ ಅತ್ಯುತ್ತಮ ಪರಿಣಾಮವಾಗಿದೆ. ಈಸ್ಟ್ ಇಂಡಿಯ ಕಂಪೆನಿಯಿಂದ 9,00,000 ರಾತ್ಲು ಚಾ ವನ್ನು ಈ ಹಿಂದೆ ತರಿಸುತ್ತಿದ್ದರೆ ಈಗ ಈ ಬಹಿಷ್ಕಾರದ ಕಾರಣದಿಂದ ಕೇವಲ 90,000 ರಾತ್ಲು ಬರುತ್ತಿದ್ದು ಕಂಪೆನಿಯೇ ದಿವಾಳಿ ಆಗಹತ್ತಿದೆ. ಕರ್ನಲ್ ಇಷ್ಟಾದರೂ ಒಳ್ಳಿತು ನಮ್ಮ ಬಹಿಷ್ಕಾರದಿಂದ ಲಭಿಸಿಲ್ಲವೆ?', ಎಂದು ಕಾರ್ಟರ್ ನಿಕೋಲಸ್ ಜಾರ್ಜನನ್ನು ಪ್ರಶ್ನಿಸಿದನು.

ಜಯವನ್ನು ಪಡೆದ ಹುಮ್ಮಸ್ಸಿನಿಂದ ವಾಶಿಂಗ್‌ಟನ್, "ಒಹೋ, ಈ ಬಹಿಷ್ಕಾರವು ನಮ್ಮ ವರ್ಜೀನಿಯಾಕ್ಕೆ ಕೀರ್ತಿಯನ್ನೇ ತಂದಿದೆ" ಎನ್ನಬೇಕಾಯಿತು.

ಜೆಫ್ಪರ್‌ಸನ್ ಯೋಜಿಸಿದ ನೂತನ ಉಪಾಯವನ್ನು ಪ್ರತಿನಿಧಿಗಳ ಸಭೆಯು ಅಂಗೀಕರಿಸಿತು. ಇದರಿಂದ ಇತರ ವಸಾಹತುಗಳೊಡನೆ ವಾರ್ತಾಸಂಪರ್ಕವನ್ನಿಟ್ಟುಕೊಳ್ಳುವ ಸಮಿತಿಯೊಂದನ್ನು ರಚಿಸಲಾಯಿತು. ಇತರ ವಸಾಹತುಗಳಲ್ಲಿಯೂ ಇಂಥ ಸಮಿತಿಗಳನ್ನು

ರಚಿಸಿಕೊಂಡರೆ ಎಲ್ಲ ವಸಾಹತುಗಳಲ್ಲಿಯೂ ಒಂದೇ ವಿಧವಾದ ಆಂದೋಲನವನ್ನು ಮುಂದರಿಸುವುದು ಸಾಧ್ಯವೆಂಬುದನ್ನು ತತ್ವತಃ ಇವರೆಲ್ಲರೂ ಅಂಗೀಕರಿಸಿದಂತಾಯಿತು.

'ಇದರಿಂದಾಗಿ ಖಂಡಿತವಾಗಿಯೂ ನಮ್ಮ ಸ್ವಾತಂತ್ರ್ಯವೇ ಲಭಿಸುವುದು', ಎಂದು ಜಾರ್ಜ್ ರೇಂಡೊಲ್ಫ್‌ನೊಡನೆ ಘೋಷಿಸಿದನು.

ಸಭೆಯನ್ನು ಗವರ್ನರನು ವಿಸರ್ಜಿಸಿದನು. ಆದರೆ ಆ ಮೊದಲೇ ಸಭೆಯು ತನ್ನ ಕಾರ್ಯವನ್ನು ನೆರವೇರಿಸಿತ್ತು. ಎಲ್ಲ ವಸಾಹತುಗಳಲ್ಲಿಯೂ ಪರಸ್ಪರ ವಿಚಾರ ವಿನಿಮಯವನ್ನು ಸುಲಭವಾಗಿ ಸಾಗಿಸುವ ಸಮಿತಿಗಳು ಸ್ಥಾಪಿಸಲ್ಪಟ್ಟುವು. ಮತ್ತು ಎಲ್ಲವುಗಳಿಂದಲೂ ಏಕಪ್ರಕಾರವಾದ ಧ್ಯೇಯ ಧೋರಣೆಗಳೂ ಸಾಧಿಸಲ್ಪಟ್ಟುವು ಎನ್ನಲೂಬಹುದು. ಇದರಿಂದ ಇಂಗ್ಲಂಡಿನ ಮಂತ್ರಿಮಂಡಲದ ಮೇಲೆ ಸ್ಟೇಂಪ್ ಏಕ್ಟಿನಿಂದಾದ ಆಘಾತ ದಷ್ಟೇ ತೀವ್ರವಾದ ಆಘಾತವುಂಟಾಯಿತು', ಎಂದು ಇಂಗ್ಲಂಡಿನಲ್ಲಿ ವಿಲಿಯಮ್ ಲೀ ಬರೆಯುವಂತಾಯಿತು.

ವಾಶಿಂಗ್‌ಟನ್‌ನ ಜೀವನವು ಏಕಪ್ರಕಾರವಾಗಿ ಸಾಗಿತ್ತು. ಅಕಾಸ್ಮಾತ್ತಾಗಿ, ಜೂನ್‌ನಲ್ಲೊಂದುದಿನ ಈತನ ಮಲ-ಮಗಳುಸತ್ತು, ಈತನ ಹೆಂಡತಿ ವಿಪರೀತವಾಗಿ ಅಳುವಂತಾಯಿತು. ಅನಂತರ ಅನೇಕ ದಿನಗಳ ತನಕ ಈತನು ತನ್ನ ಹೆಂಡತಿಯನ್ನು ಸಂತೈಸುವುದರಲ್ಲೇ ಕಳೆದನು.

ಕೆಲವು ದಿನಗಳ ನಂತರ, ಒಂದುದಿನ ಸೇಲ್ಲಿಯು ಮಾರ್ತಾಳಿಗೆ ತನ್ನ ಅನುಕಂಪವನ್ನು ಸೂಚಿಸಲು ಬಂದಿದ್ದಳು. ಹಿಂದೆ ಹೊರಡುವಾಗ ತಾನೂ ತನ್ನ ಗಂಡನೂ ಇಂಗ್ಲಂಡಿಗೆ ಆ ಬೇಸಗೆಯಲ್ಲಿ ಹೋಗುವುದಾಗಿ ತಿಳಿಸಿದಳು.

'ಇಂಗ್ಲಂಡಿಗೆ ಹೋಗುವಿರಾ', ಎಂದು ಆಶ್ಚರ್ಯದಿಂದ ಜಾರ್ಜ್ ಉದ್ಗಾರ ತೆಗೆದನು. ಈ ಇಪ್ಪತ್ತೈದು ವರ್ಷಗಳ ಹಿಂದೆ ಸೇಲ್ಲಿಯು ಮದುಮಗಳಾಗಿ ಫೇರ್‌ಫೇಕ್ಸರ ಮನೆಗೆ ಬಂದಿದ್ದಾಗ ಅವಳ ಮತ್ತು ಆಗ ಅಂಜುಬುರುಕ ಮೊದ್ದು ಹುಡುಗನಾಗಿದ್ದ ಜಾರ್ಜ್‌ನ ಪರಿಚಯವಾಗಿತ್ತು. ಅನಂತರ ಪ್ರತಿ ದಿನವೂ ಎನ್ನುವಂತೆ ಇವಳು ತನ್ನ ಪ್ರಭಾವ

ವನ್ನು ಅವನ ಎಲ್ಲ ವರ್ತನೆ ಮತ್ತು ವ್ಯವಹಾರಗಳ ಮೇಲೂ ಬೀರಿದ್ದಳು ಎನ್ನುವುದರಲ್ಲಿ ಏನೂ ಉತ್ಪ್ರೇಕ್ಷೆಯಿಲ್ಲ.

ಕೆಲವು ದಿನ ಈತನಿಗೆ ಪ್ರಬಲ ಆಸರೆಯೊಂದು ತಪ್ಪದಂತಾದರೂ ಎರಡು ತಿಂಗಳುಗಳಲ್ಲಿ ಈತನು ಪುನಃ ಹಿಂದಿನಂತೆಯೇ ಎಲ್ಲಾ ಕ್ಷೇತ್ರ ಗಳಲ್ಲಿಯೂ ವ್ಯವಹರಿಸಲಾರಂಭಿಸಿದನು. ಅತ್ತ ಈಸ್ಟ್ ಇಂಡಿಯಾ ಕಂಪೆನಿಯು ತನ್ನ ಎಲ್ಲಾ ಚಾವನ್ನೂ ಕಮ್ಮಿ ದರಕ್ಕೆ ಮಾಡುವುದಾಗಿ ಸುದ್ದಿ ಹರಡಿತ್ತು. ಸಾಗಣೆಯ ಚಾರ್ಜು ಮೊದಲಾದುವುಗಳಿಲ್ಲದಿದ್ದರೂ, ಇದರ ಕ್ರಯವು ಕಡಿಮೆಯಾಗುವುದಾದರೂ, ಇವರು ನೇರಾದ ತೆರಿಗೆ ಯನ್ನು ಕೊಡಬೇಕಿತ್ತು "ಈ ತೆರಿಗೆಯು ಮಾತ್ರ ಅಮೇರಿಕದ ಮೇಲೆ ಹೇರಿಸಿದ ದೊಡ್ಡ ಅಪಮಾನ" ಎಂಬುದೇ ಅಮೇರಿಕದ ಜನರ ಪ್ರತಿ ಕ್ರಿಯೆಯಾಗಿತ್ತು.

ಇಂಗ್ಲೆಂಡಿಗೆ ಅಮೇರಿಕದ ಮೇಲೆ ಇಂಥ ಆಸಡ್ಡೆ ಏನು, ಏಕೆ? ಎಂಬುದು ಜಾರ್ಜನನ್ನು ಚಕಿತಗೊಳಿಸುತಿತ್ತು. ದಶಂಬರ 1773ರಲ್ಲಿ ಇಂಡಿಯನರೆಂದು ವೇಷ ಹಾಕಿದ ಕೆಲವರು ಬಂದು ಹಡಗದಿಂದ 340 ಪೆಟ್ಟಿಗೆ ಚಾವನ್ನು ಬೋಸ್ಟೋನ್‌ನಲ್ಲಿಳಿಸಿದರು. ಇದನ್ನು ಬೋಸ್ಟೋನ್‌ನ ಜನತೆಯು ವಿರೋಧಿಸಿದುದಲ್ಲದೆ, ಈಸ್ಟ್ ಇಂಡಿಯಾನರ ಮೇಲೂ ತಮ್ಮ ಬಹಿಷ್ಕಾರ ಹಾಕಿದರು.

ಹೀಗೆ ಇಂಥ ವಿರೋಧಪರ ಕಾರ್ಯಗಳಲ್ಲಿ ಮುಂದಾದ ಬೊಸ್ಟೋನ್ ಎಲ್ಲಾ ಶಿಕ್ಷೆಯನ್ನು ಪಡೆಯುವಂತಾಯಿತು. ಜೂನ್‌ನಲ್ಲೇ ಈ ರೇವನ್ನು ಮುಚ್ಚಲಾಗುವುದೆಂದೂ ಘೋಷಿಸಲಾಯಿತು. ಈ ಘೋಷ ಣೆಯಂತೂ ವರ್ಜೀನಿಯಾದ ಉದ್ದಕ್ಕೂ ದೊಡ್ಡ ಕಲ್ಲೋಲವನ್ನೆಬ್ಬಿ ಸಿತು. ಜೇಕ್ ಕಸ್ಟಿಸ್ ಮತ್ತು ಇಲಿನೋರಳ ವಿವಾಹದ ಸಂದರ್ಭ ದಲ್ಲೂ, ಗಂಡಹೆಂಡಿರಿಗೆ ಶುಭಾಶಯುಗಳನ್ನು ಕೋರುವಷ್ಟೇ ಉತ್ಸಾಹ ವನ್ನು ಜನರು ನ್ಯೂಇಂಗ್ಲೆಂಡದ ಸ್ವಯಂ ಸೇವಕರನ್ನು ಹೊಗಳುವದ ರಲ್ಲೂ ತೋರುತ್ತಿದ್ದರು. ಇದನ್ನಷ್ಟರ ಮಟ್ಟಿಗೆ ಮಾರ್ತಾಳು ಒಪ್ಪ ದಿದ್ದರೂ ತನ್ನ ಗಂಡನೊಡನೆ ಅದೇ ಮೇ ತಿಂಗಳಲ್ಲಿ ವಿಲಿಯಮ್ಸ್ ಬರ್ಗಿಗೆ—ಸಭೆಯ ಅಧಿವೇಶನಕ್ಕೆ—ಹೋದಳು. ಬೋಸ್ಟೋನಿಗೆ ಆದ

ಅನ್ಯಾಯುವನ್ನು ಪ್ರತಿಭಟಿಸಿ ಠರಾವುಗಳನ್ನು ಈ ಸಭೆಯಲ್ಲಿ ಅಂಗೀಕರಿಸ ಲಾಯಿತು. ಇಷ್ಟೇ ಅಲ್ಲದೆ, ಜೂನ್ 1ನೇ ತಾರೀಕಿಗೆ ಪ್ರತಿಭಟನೆಯ ಸೂಚಕವಾಗಿ ಎಲ್ಲರೂ ಉಪವಾಸವನ್ನಾಚರಿಸಬೇಕೆಂತಲೂ ನಿಶ್ಚಯ ವಾಯಿತು.

ಪುನಃ ಸಭೆಯನ್ನು ಗವರ್ನರ್ ಡನ್ಮೂರ್ರ್ ವಿಸರ್ಜಿಸಿದನು. ಪುನಃ ರಾಲೀ ಟೆವರ್ನ್ ಹೊಟೇಲಲ್ಲಿ ಪ್ರತಿನಿಧಿಗಳ ಸಭೆಯು ಅಧಿವೇಶನ ಗೊಂಡು ವಸ್ತುಗಳನ್ನು ಆಮದು ಮಾಡಲೇಬಾರದೆಂದೂ, ಈ ಬಗೆ ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳಲೇಬೇಕೆಂದು ತೀರ್ಮಾನಿಸಿತು. ಇದೇ ಅಭಿಪ್ರಾಯವನ್ನು ನ್ಯೂ ಇಂಗ್ಲಂಡ್ ಕೂಡ ವ್ಯಕ್ತಪಡಿಸಿತ್ತು. ಎಲ್ಲಾ ವಸಾಹತುಗಳಿಂದಲೂ ಪ್ರತಿನಿಧಿಗಳು ಬಂದು ಸಪ್ಟಂಬರ ಮಾಸದಲ್ಲಿ ಫಿಲಡೆಲ್ಫಿಯಾ ನಗರದಲ್ಲಿ ಸಭೆ ಕೂಡುವುದು ನಿಶ್ಚಯ ವಾಯಿತು.

ವರ್ಜೀನಿಯಾದಿಂದ ಆರಿಸಲ್ಪಟ್ಟ ಏಳು ಪ್ರತಿನಿಧಿಗಳು ಪ್ರತಿನಿಧಿ ಸಭಾಧ್ಯಕ್ಷ, ಪೇಟನ್ ಡೇಂಡೋಲ್ಫ್, ರಿಚಾರ್ಡ್ ಬ್ಲೇಂಡ್, ಹೆನ್ರಿ ಲೀ, ಎಡ್ಮಂಡ್ ಪೆಂಡ್ಲೇಟನ್, ಬೆಂಜಮಿನ್ ಹೇರಿಸನ್, ಪೇಟ್ರಿಕ್ ಹೆನ್ರಿ ಮತ್ತು ಜಾರ್ಜ್ ವಾಶಿಂಗ್‌ಟನ್. ತನ್ನ ಆಯ್ಕೆಯಿಂದ ಅಚ್ಚರಿಗೊಂಡ ಜಾರ್ಜ್ ವಾಶಿಂಗ್‌ಟನ್, ತನ್ನ ಗೆಳೆಯ ಹೇರಿಸನ್‌ನೊಡನೆ, 'ನನ್ನಲ್ಲಿ ತಕ್ಕಷ್ಟು ವಾಕ್ಚಾತುರ್ಯವಿಲ್ಲ,ಆದರೂ ನನ್ನನ್ನು ಆರಿಸಿದ್ದಾರಲ್ಲ!',ಎಂದು ತನ್ನ ಆಶ್ಚರ್ಯವನ್ನು ವ್ಯಕ್ತಪಡಿಸಿದ್ದನು. ಆದರೂ ಅದೇ ಅಧಿವೇಶನ ದಲ್ಲಿ ಈತನು ತನ್ನ ಭಾಷಣದಿಂದ ಎಲ್ಲರನ್ನೂ ಮುಗ್ಧಗೊಳಿಸಿದ್ದನು. ಇವನು ಉತ್ತರದಲ್ಲಿ ನಡೆಯುತ್ತಿದ್ದ ದಬ್ಬಾಳಿಕೆಯನ್ನು ಕಟುವಾಗಿ ಟೀಕಿಸುತ್ತ, 'ನಾನು ನನ್ನ ಖರ್ಚಿನಿಂದಲೇ ಬೋಸ್ಟನ್‌ಗೆ ಮುನ್ನುಗ್ಗಲು ಒಂದು ಸಾವಿರ ಮಂದಿ ಸೈನಿಕರನ್ನು ಕೂಡಿಸಲಿರುವೆನು,' ಎಂದು ಖಂಡಿತವಾಗಿ ನುಡಿದಿದ್ದನು.

ಈ ಘೋಷವು ಎಲ್ಲರನ್ನೂ ಚಕಿತಗೊಳಿಸಿತು, ಹುರಿದುಂಬಿಸಿತು. ಮತ್ತು ಮುಂದರಿಯುತ್ತ, 'ಅರ್ಜಿ ಪ್ರಾರ್ಥನೆಗಳ ಕಾಲವೆಲ್ಲವೂ ಗತಿಸಿ ಹೋಗಿದೆ, ಈಗ ಉಳಿದುದು ನಮಗೆ ಯುದ್ಧ ಮಾರ್ಗ ಮಾತ್ರ' ಎಂದು

ಧೀರ ವಾಣಿಯಿಂದ ಜಾರ್ಜ್ ಹೇಳುತ್ತಿದ್ದಾಗ ಕೂಡಿದವರೆಲ್ಲರೂ ಈತನನ್ನು ಮನಸಾ ವಾಚಾ ಪ್ರಶಂಸಿಸಿದರು.

ಆಗಸ್ಟ 31ನೇ ದಿನ ಎಡ್ಮಂಡ್ ಪೆಂಡ್ಲೇಟನ್ ಮತ್ತು ಪೇಟ್ರಿಕ್ ಹೆನ್ರಿಯವರನ್ನೊಡಗೂಡಿಕೊಂಡು ಜಾರ್ಜ್ ಫಿಲಡೆಲ್ಫಿಯಾ ನಗರಕ್ಕೆ ಹೋದನು. ಅಲ್ಲಿನ ಎಲ್ಲಾ ವಸಾಹತುಗಳ ಅಧಿವೇಶನದ ಸನ್ನಿವೇಶವು ಎಲ್ಲರನ್ನೂ ಹುರಿದುಂಬಿಸಿತ್ತು ಮಾತ್ರವಲ್ಲದೆ ಎಲ್ಲರ ಮನೋವೃತ್ತಿಯನ್ನೂ ಖಂಡಿತವನ್ನಾಗಿಸಿತ್ತು ಎನ್ನಬಹುದು.

ಈ ಅಧಿವೇಶನವು ಕೂಡ ಹಲವಾರು ಪ್ರಾರ್ಥನೆಗಳನ್ನು ಅರಸನಿಗೆ, ಇಂಗ್ಲೆಂಡಿಗೆ ಕಳುಹಿದರೂ, ಫಲ ಬರಲಿಲ್ಲ. ಪುನಃ ಮೇಯಲ್ಲಿ ಇದೇ ಸಭೆ ಕೂಡಬೇಕೆಂಬ ನಿರ್ಣಯಾನಂತರದಲ್ಲಿ ಜಾರ್ಜ್ ಮೌಂಟ್ ವೆರ್ನ್ನಾನಿಗೆ ಹಿಂದಿರುಗಿದನು. ಇಲ್ಲಿಂದ ಅಲೆಕ್ಸಾಂಡ್ರಿಯಾಕ್ಕೆ ಹೋಗಿ ಮೇಸನನನ್ನು ಭೇಟಿಯಾದನು. "ನಿಮ್ಮ ಮಹಾ ಅಧಿವೇಶನದಲ್ಲಿ ಏನೆಲ್ಲಾ ನಡೆಯಿತು?", ಎಂದು ಮೇಸನ್ ಪ್ರಶ್ನಿಸಲು, ಕ್ಷಣ ಕಾಲ ಯೋಚಿಸಿ ವಾಶಿಂಗ್‌ಟನ್ ಉತ್ತರಿಸಿದನು.

"ಮೊದಲು ನಮ್ಮ ಎಲ್ಲಾ ದೌರ್ಬಲ್ಯಗಳನ್ನೂ ಕಷ್ಟಗಳನ್ನೂ ಎಣಿಸಿಕೊಂಡನಂತರ, ಇಂಗ್ಲಂಡದೊಡನೆ ಇನ್ನೂ ಸಾಮಮಾರ್ಗದಿಂದಲೇ ವ್ಯವಹಾರವು ಸಾಧ್ಯವೆಂದು ಅನೇಕರು ಪರಿಗಣಿಸಿದ ಮೇರೆಗೆ ನಮ್ಮ ಪ್ರಾರ್ಥನೆಗಳನ್ನು ಕಳುಹಿದ್ದೇವೆ. ಆದರೆ ಇದರ ಸಾರ್ಥಕ್ಯದ ಮಟ್ಟಿಗೆ ನಮಗೆಲ್ಲಾ ಶಂಕೆಯಿದೆ. ನಮ್ಮ ಅಭ್ಯರ್ಥನೆಗಳಿಗೆಲ್ಲಾ ಅವರು ಕಿವುಡಾಗಿರುವರೆಂದೇ ನನ್ನ ಅಭಿಮತ," ಎಂದನು ವಾಶಿಂಗ್‌ಟನ್.

'ಇಲ್ಲ, ಅವರು ಕೇಳುವಂತಿಲ್ಲ', ಎಂದು ತನ್ನ ಮುಷ್ಟಿಯಿಂದ ಎಡ ಕೈಯನ್ನು ಗುದ್ದುತ್ತ ಮೇಸನ್ ಆಗ್ರಹದಿಂದ ಮಾತಾಡಹತ್ತಿದನು. 'ನೋಡಿರಿ, ಬೋಸ್ಟೋನ್‌ನಲ್ಲಿ ಮಿಲಿಟರಿಯನ್ನಿಟ್ಟಿರುವ ಅರ್ಥವೇನು? ನಾವೇಕೆ ಇನ್ನೂ ಸುಪ್ತರಾಗಿದ್ದೇವೆಯೋ ಕಾಣೆ ವಾಶಿಂಗ್‌ಟನ್?' ಎಂದನು.

ಈ ಪ್ರಶ್ನೆಯಂತೂ ವಿದ್ಯುದಶನಿಯಂತೆ ಎಲ್ಲೆಡೆಯೂ ನವಚೇತನ

ವನ್ನು ಹರಡಿಸಿತು. ದಶಂಬರದಲ್ಲೊಂದು ದಿನ ಥೋಮಸ್ ಬ್ಲೇರ್ ಬರ್ಗ್ ವಾಶಿಂಗ್‌ಟನ್‌ನ ಮನೆಗೆ ಬಂದನು. ಬಂದವನೇ,

"ಕರ್ನೆಲ್, ಪ್ರಿನ್ಸ್ ವಿಲಿಯಮ್ ಪ್ರಾಂತದಿಂದ ನಾನು ಬಂದಿರುತ್ತೇನೆ. ನಾವು ಅಲ್ಲಿ ಸ್ವತಂತ್ರ ದಳವೊಂದನ್ನು ರಚಿಸಲು ಪ್ರವೃತ್ತಿಸಿದ್ದೇವೆ. ಅವಶ್ಯಬಿದ್ದಾಗ ಈ ದಳವು ಹೋರಾಡಬೇಕಾಗಬಹುದು. ಆ ಬಗ್ಗೆ ನಮಗೆ ತಕ್ಕ ಶಿಕ್ಷಣವನ್ನು ಕೊಡುವಂತೆ ನಿಮ್ಮನ್ನು ಮುಖಂಡರಾಗಿ ಬರಹೇಳಲು ನನ್ನನ್ನು ಕಳುಹಿಸಿದ್ದಾರೆ. ನೀವೇ ನಮ್ಮ ಸಮವಸ್ತ್ರಗಳ ಕುರಿತಾಗಿಯೂ ತೀರ್ಮಾನಿಸತಕ್ಕದು." ಎಂದು ವಾಶಿಂಗ್‌ಟನ್‌ನನ್ನು ಪ್ರಾರ್ಥಿಸಿದನು.

ವಾಶಿಂಗ್‌ಟನ್‌ನಲ್ಲಿ ವಿದ್ಯುತ್ಪ್ರವಾಹವು ಸಂಚರಿಸಿದಂತಾಯಿತು. "ಸರಿ, ತಮ್ಮ ಕೇಳಿಕೆಯನ್ನು ಪೂರೈಸಲು ಯತ್ನಿಸುತ್ತೇನೆ; ನನ್ನ ಆಯ್ಕೆಗೆ ನಿಮಗೆಲ್ಲಾ ಋಣಿ", ಎಂದು ಅತ್ಯಂತ ಅಭಿಮಾನದಿಂದ ಮರುನುಡಿದನು.

ಈ ಘಟನೆಯಂತೂ ಬಹಳ ಮಾರ್ಮಿಕವಾಗಿತ್ತು. ಇದನ್ನು ಅವರಿಬ್ಬರೂ ಆಗ ತಿಳಿದುಕೊಳ್ಳದಿದ್ದರೂ ನಿಜಕ್ಕಾದರೂ ಮುಂದಿನ ಕ್ರಾಂತಿಕಾರಕ ಯುದ್ಧಕ್ಕೆ ಇದೇ ನಾಂದಿಯಾಯಿತು ಎನ್ನಬಹುದಾಗಿದೆ.

ಅಧ್ಯಾಯ ೧೧

ಬಹುಶಃ 1775ರಿಂದ ಮೌಂಟ್‌ವೆರ್ನ್ಯಾನ್ ಸೈನಿಕರ ಮತ್ತು ಸೇನಾ ವಿಭಾಗಗಳ ಪ್ರಮುಖ ಕೇಂದ್ರವಾಯಿತು ಎನ್ನಬಹುದು. ಇದರಿಂದಲಂತೂ ಬ್ರೆಡ್ಡೋಕನ ಕಾಲದ ದಂಡಯಾತ್ರೆ ಮತ್ತು ವಾಶಿಂಗ್‌ಟನ್ ಆದರಲ್ಲಿ ವಹಿಸಿದ ಪಾತ್ರಗಳು ಪುನಃ ಜನರ ಸ್ಮೃತಿಗೆ ಬಂದುವು, ಹಾಗೆಯೇ ಬೋಸ್ಟೊನ್‌ನಲ್ಲಿ ಜನರಲ್ ಗೇಜ್ ವರ್ತಿಸಿದ ಬಗೆಗಳು ಟೀಕೆಗೊಳಗಾದುವು.

ಮಾರ್ಚಿಯಲ್ಲಿ ವರ್ಜೀನಿಯಾ ಸಭೆಯು ಕೂಡಬೇಕಿತ್ತು. ಗವರ್ನರನೇನೋ ಇದನ್ನು ಕಾನೂನುಬದ್ಧ ಸಭೆಯೆಂದು ಸ್ವೀಕರಿಸದಿದ್ದರೂ ಇದು ತನ್ನ ಸಭೆಯನ್ನು ರಿಚ್ಮಂಡಿನಲ್ಲಿ ನಡೆಸಲು ಆರಂಭಿಸಿತು.

ಸೈಂಟ್ ಜ್ಹೋನ್ ಚರ್ಚಿನಲ್ಲಿ ಈ ಸಭೆಯು ಸೇರಿದಾಗ ಪೇಟ್ರಿಕ್ ಹೆನ್ರಿಯು ಕೂಡಲೇ ಈ ವಸಾಹತುವಿನಲ್ಲಿ ಸುಸಜ್ಜಿತವಾದ ಸೇನೆಯನ್ನು ಸಂಗ್ರಹಿಸಬೇಕೆಂದು ವಾದಿಸಿದನು. ಇದನ್ನು ಅವಿರೋಧವಾಗಿ ಪರಿಗ್ರಹಿಸುವಷ್ಟು ಜನ ಮುಂದಾಗಿರಲಿಲ್ಲ, ಒಂದಾಗಿರಲೂ ಇಲ್ಲ.

ಆಗ ಹೆನ್ರಿಯು ಮತ್ತೂ ಆಗ್ರಹದಿಂದ ನುಡಿಯಲಾರಂಭಿಸಿದನು: "ನಮ್ಮ ಪ್ರಾರ್ಥನೆಗಳ ಕಾಲ ಮುಗಿಯಿತು, ಇನ್ನು ಪ್ರತ್ಯಕ್ಷವರ್ತನೆ ಮತ್ತು ನೇರಾದ ಕಾರ್ಯಕ್ರಮಗಳೇ ನಮ್ಮ ಪಾಲಿಗೆ ಬಂದವುಗಳು. ನಾವು ಯುದ್ಧಮಾಡದೆ ಇನ್ನು ನಿರ್ವಾಹವಿಲ್ಲ. ಯುದ್ಧವಿಲ್ಲದೆ, ನಮಗೆ ಸ್ವಾತಂತ್ರ್ಯವಿಲ್ಲ. ಆದುದರಿಂದ ಗೆಳೆಯರೇ, ಅಧ್ಯಕ್ಷರೇ, ನನಗೆ ಸ್ವತಂತ್ರ ಅಥವಾ ಮೃತ್ಯು ಇವುಗಳಲ್ಲೊಂದನ್ನು ದಯಪಾಲಿಸಿರಿ" ಎಂಬ ಆಗ್ರಹದ ಈ ವಿನಂತಿಯು ಎಲ್ಲರನ್ನೂ ಹೊಡೆದೆಬ್ಬಿಸಿತು. ಸೇನೆಯ ಸಂಗ್ರಹವಾಗಲು ಎಲ್ಲರೂ ಒಮ್ಮತದಿಂದ ಒಪ್ಪಿದರು.

ಇತ್ತ ಮೆಸೆಚುಸೆಟ್ಸ್‌ನಲ್ಲಿ ಜನರಲ್ ಗೇಜನು ನಿಜವಾಗಿಯೂ ಹಿಂಸ್ರಕನಾಗಿ ಮೆರೆಯುತ್ತಿದ್ದನು. ಇವನೊಡನೆ 4000 ಸೈನಿಕರು ಇದ್ದರು. ಈತನು ಕೊಸ್ಕೋರ್ಡ್‌ದಲ್ಲಿದ್ದ ಸ್ಥಳೀಯರ ಸೇನಾ ಸಂಗ್ರಹವೆಲ್ಲವನ್ನೂ ಕಸಿದುಕೊಳ್ಳಬೇಕೆಂದು ಹವಣಿಸಿ ಮುಂದರಿದಾಗ ಲೆಕ್ಸಿಂಗ್‌ಟನ್‌ನಲ್ಲಿ ಸ್ಥಳೀಯ ಸೈನಿಕರು ತರಬೇತಿಗಾಗಿ ನಿಂತಿದ್ದರು. ಇವರನ್ನು ಚದರುವಂತೆ ಬ್ರಿಟಿಶರು ಕೇಳಿಕೊಂಡರೆಂದೂ ಅವರು ಒಲ್ಲದೆ ಬ್ರಿಟಿಶರತ್ತ ಗುಂಡನ್ನೆಸೆದರೆಂದೂ ಬ್ರಿಟಿಶ್ ಚರಿತ್ರಕಾರರು ಹೇಳುತ್ತಾರೆ. ಅಂತೂ ಬ್ರಿಟಿಶರು ತುಪಾಕಿ ಹಾರಿಸಲಾರಂಭಿಸಿದೊಡನೆಯೇ ಸ್ಥಳೀಕ ಸೇನೆಯ ಹಲವರು ಅಲ್ಲೇ ಮಡಿದುಬಿದ್ದು ಉಳಿದವರು ಅಲ್ಲಿಂದ ಕಾಲ್ದೆಗೆದು ಪಲಾಯನಮಾಡಿದರು.

ಆದರೆ ಅಲ್ಲಿಂದ ಅವರು ಬೊಸ್ಟೋನಿಗೆ ಮರಳಲಾರಂಭಿಸುವಷ್ಟರಲ್ಲಿ ರೊಚ್ಚಿಗೆದ್ದ ಜನತೆಯು ಇವರ ಮುನ್ನಡೆಯನ್ನು ಪ್ರತಿಭಟಿಸಲನು

ವಾಯಿತು. ಹಾದಿಯಲ್ಲಿ ಎರಡರಸಾಲುಗಳಲ್ಲಿ ನಡೆಯುತ್ತಿದ್ದ ಈ ಸೈನಿಕರನ್ನು ಜನತೆಯು ನೋಟವಿಟ್ಟು ಗುಂಡಿಕ್ಕಲಾರಂಭಿಸಿದರು. ಇದರಿಂದ ಅನೇಕರು ಮಡಿಯಲೇ ಬೇಕಾಯಿತು. ಬಹುಶಃ ಇವರ ಸಹಾಯಕ್ಕೆ ಮತ್ತೊಂದಷ್ಟು ಜನವನ್ನೂ ಆಹಾರ ಸಂಗ್ರಹವನ್ನೂ ಜನರಲ್ ಗೇಜ್ ಕಳುಹುವುದಲ್ಲವಾದರೆ ಇವರಲ್ಲಿ ಕೇವಲ ಕೈಬೆರಳೆಣಿಕೆಯಷ್ಟು ಮಂದಿ ಹಿಂದಿರುಗಬಹುದಿತ್ತೋ ಏನೋ.

ಅಂತೂ ಅಮೇರಿಕದಲ್ಲಿ ರಕ್ತಪಾತದ ಆರಂಭವಾಯಿತು ಎನ್ನಬಹುದು. ಇದರ ಸುದ್ದಿಯು ಹರಡುತ್ತಹೋದಂತೆ ಎಲ್ಲೆಡೆಗಳಲ್ಲೂ ನ್ಯೂಹೇಂಪ್‌ಶ್ಯಾರ್, ಕೊನೆಕ್ಟಿಕಟ್ ಮತ್ತು ಮೆಸೆಚುಸೆಟ್ಸ್‌ಗಳಲ್ಲಿ ಜನರು ಸೇನೆಯನ್ನು ತಾವಾಗಿಯೇ ಸೇರಲು ಆರಂಭಿಸಿ ತರಬೇತಿಯನ್ನು ಪಡೆಯಲಿಚ್ಛಿಸಿದರು.

ವಿಲಿಯಮ್ಸ್‌ಬರ್ಗಿನಲ್ಲಿದ್ದ ಸಿಡಿಮದ್ದನ್ನೆಲ್ಲ ವಶಪಡಿಸಿಕೊಂಡರೆ ಒಳ್ಳೆಯದೆಂದು ಭಾವಿಸಿದ ವರ್ಜೀನಿಯಾದ ಗವರ್ನರನು ಹಾಗೆಯೇ ಮಾಡಿದನು. ಇದು ನಡೆದುದು ಎಪ್ರಿಲ್ 20ರಲ್ಲಿ ಮತ್ತು ಲೆಕ್ಸಿಂಗ್‌ಟನ್ ಪ್ರಕರಣವು ಎಪ್ರಿಲ್ 18ರಲ್ಲಿ. ಇವೆರಡೂ ಜನರನ್ನು ಮತ್ತೂ ರೊಚ್ಚಿಗೆಬ್ಬಿಸಿತು. ಪೇಟ್ರಿಕ್ ಹೆನ್ರಿಯು ತನ್ನ ಸೇನೆಯೊಡನೆ—ಶಸ್ತ್ರ ಸುಸಜ್ಜಿತ ಸ್ವಯಂಸೇವಕರೊಡನೆ—ಪಟ್ಟಣದತ್ತ ನುಗ್ಗಿದನು.

ಅವನಂತೆಯೇ ಇತರರು ಲಾರ್ಡ್ ಡನ್ಮೂರಿನ ಸೌಧವನ್ನು—ಗವರ್ನರನ ವಸತಿಯನ್ನು—ಆಕ್ರಮಿಸುವುದಾಗಿ ನಿಶ್ಚಯಿಸಿದರು, ಆದರೆ ಸ್ವಲ್ಪ ತಡೆದುದರಿಂದ ಲಾಭವಿದೆ ಎಂದು ಮನಗಂಡವರಲ್ಲಿ ವಾಶಿಂಗ್‌ಟನ್ ಒಬ್ಬನು. ಕೊನೆಗೆ ಇವನ ಅಭಿಪ್ರಾಯದಂತೆಯೇ ಇತರರೂ ಮತವಿತ್ತು ಇವರ ಮುನ್ನಡೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಿದರು.

ಈ ಜನರ ಸೇನೆಯ ಒಬ್ಬ ಮುಖಂಡನು ಕದ್ದಿರುವ ಸಿಡಿಮದ್ದನ್ನು ಹಿಂದೆ ಕೊಡುವಂತೆ ಕೇಳಿಕೊಂಡನು, ಅಥವಾ, ಇದರ ಬೆಲೆಯನ್ನೇ ಆಗಲೀ ಕೊಡುವಂತೆ ಆಗ್ರಪೂರ್ವಕವಾಗಿ ಕೇಳಿದನು. ಮೇ 4ರಂದು ಇದನ್ನೂ-ಇದರ ಬೆಲೆಯನ್ನೂ ಗವರ್ನರನು ಕೊಡಲೊಪ್ಪಿದರೂ ಪೇಟ್ರಿಕ್ ಹೆನ್ರಿಯನ್ನು ದೇಶದ ವೈರಿಯೆಂದು ಸಾರಿದನು.

ಪುನಃ ಮೇ 8ಕ್ಕೆ ಸಭೆಯು ಕೂಡಿದಾಗ ದೇಶದಲ್ಲೆಲ್ಲಾ ಅವ್ಯವಸ್ಥೆ ಮತ್ತು ಅಶಾಂತಿಗಳೇ ನೆಲಸಿದ್ದುವು. ಸಭೆಯಲ್ಲಿ ಇಂಗ್ಲಂಡಿನಿಂದ ಹಿಂದಿರುಗಿಬಂದ ಬೆಂಜಮಿನ್ ಫ್ರೇಂಕ್ಲಿನನೂ ಇದ್ದನು. ಈತನೂ ಅನಿವಾರ್ಯವೆನಿಸಿದ ಗಂಭೀರ ಪರಿಸ್ಥಿತಿಯನ್ನೆದುರಿಸಲು ಸನ್ನದ್ಧನಾದಂತೆಯೇ ಇತ್ತು.

ಜೋನ್ ಹೆನಕ್ ಇದರ-ಈ ಸಭೆಯ ಅಧ್ಯಕ್ಷನಾಗಿ ಚುನಾಯಿತನಾದನು. ಎಲ್ಲ ವಸಾಹತುಗಳೂ ಸೇರಿ ತಂತಮ್ಮ ಆಂತರಿಕ ನೀತಿಯನ್ನು ನಿರ್ಣಯಿಸತಕ್ಕುದೆಂಬ ನಿಶ್ಚಯವನ್ನು ಎಲ್ಲರೂ ಮಾಡಿದರು. ಯುದ್ಧ ಅಥವಾ ಶಾಂತಿಗಳ ನಿರ್ಣಯವನ್ನು ಇವರೇ ಮಾಡತಕ್ಕುದೆಂಬ ನಿರ್ಣಯವನ್ನೂ ಅಂಗೀಕರಿಸಲಾಯಿತು.

ಒಂದು ದಿನ ಸಾಯಂಕಾಲ ಅಂದಿನ ಪತ್ರಿಕೆಯನ್ನೋದುತಿದ್ದ ವಾಶಿಂಗ್‌ಟನ್‌ನನ್ನು ಕುರಿತು ಏಡಮ್ಸ್ "ಪರಿಸ್ಥಿತಿ ಮತ್ತೂ ವಿಷಮವಾಗಿದೆಯೇ?" ಎಂದು ಪ್ರಶ್ನಿಸಿದರು.

ವಾಷಿಂಗ್‌ಟನ್‌ನಿಂದ ಉತ್ತರವು ಬಂದಿತು, "ಬೊಸ್ಟೋನ್ ಆವರಿಸಲ್ಪಟ್ಟಿದೆ, ನಮ್ಮ ಸ್ವಯಂಸೇವಕ ದಳವು ತಯಾರಿಲ್ಲವೆಂದು ಕಾಣುತ್ತದೆ. ಅವರ ಉತ್ತರದಿಂದ ಈಥನ್ ಎಲ್ಲನ್ ಮತ್ತು ಬೆನೆಡಿಕ್ಟ್ ಆರ್ನಲ್ಡ್‌ರ ವಿಚಾರವನ್ನಷ್ಟೇ ತಿಳಿಯಲು ಉತ್ಸುಕನಾಗಿದ್ದೇನೆ".

ಈಥನ್ ಎಲ್ಲನ್‌ನ ನೇತೃತ್ವದಲ್ಲಿ ಸೇರಿದ ಯುವಕರು ಕ್ರೌನ್ ಪ್ಯೊಂಟ್‌ನ್ನು ಆವರಿಸಲು ಉತ್ಸುಕರಾಗಿದ್ದರು. ಮೇ ತಿಂಗಳಲ್ಲಿ ಕರ್ನೆಲ್ ಬೆನೆಡಿಕ್ಟನೂ ಇವರೊಡನೆ ಸೇರಿದ್ದನು. ಕ್ರೌನ್ ಪ್ಯೊಂಟ್ ಮತ್ತು ಟಿಕನ್ಡ್ರೋಗಾ ಕೋಟೆಗಳು ವಶವಾದೊಡನೆ ಅಮೆರಿಕನೆಲ್ಲರೂ ಈ ವಿಜಯದಿಂದ ಉತ್ಸಾಹಿತರಾದರು, ಕಾರಣ ಈ ವಿಜಯದಿಂದ ಜಾರ್ಜ್ ಮತ್ತು ಚೇಂಪ್ಲೈನ್ ಸರೋವರಗಳ ಮೇಲೆ ಇವರ ಅಧಿಕಾರವೇ ಜಮಾಯಿಸಿತು. ಸಾಲದುದಕ್ಕೆ, ಇವುಗಳ ಮೂಲಕ ಕೆನಡಾಕ್ಕೆ ಪ್ರವೇಶವನ್ನು ಪಡೆಯಬಹುದಿತ್ತು.

ಆದರೆ ಯುದ್ಧ ಮಾಡಲು ತಕ್ಕ ಮುಖಂಡರು ಬೇಡವೆ? ಅನೇಕರು ನಾಮುಂದೆ ತಾಮುಂದೆ ಎಂದು ಬರುತ್ತಿದ್ದರೂ ಯೋಗ್ಯತೆಯುಳ್ಳವನನ್ನೇ ಆರಿಸತಕ್ಕುದೆಂದು ಜೋನ್ ಏಡಮ್ಸ್ ಭಾಷಣವಿತ್ತನು.

ವಾಶಿಂಗ್‌ಟನ್‌ನ ಆಯ್ಕೆಗೂ ಪ್ರಬಲ ವಿರೋಧವಿತ್ತು. ಆ ಕನಕ ಈತನೊಂದೂ ಯುದ್ಧವನ್ನು ಗೆದ್ದಿಲ್ಲವೆಂಬುದೇ ಆತನ ಊನವಾಗಿತ್ತು. ಆದರೆ ಈತನ ವಿನಾ ಇನ್ಯಾವನೂ ಸಲ್ಲನೆಂದು ಏಡಮ್ಸ್ ವಾದಿಸುತ್ತ ಪ್ರತಿಯೊಬ್ಬನನ್ನೂ ಸಮಜಾಯಿಸುತ್ತ ಹೋದನು. ಈತನು ಅದ್ವಿತೀಯ ಸಾಹಸಿ, ಉದಾರಿ, ಶ್ರೀಮಂತ; ಇವೆಲ್ಲ ಸದ್ಗುಣಗಳಿಂದಲೂ ಈ ಕೆಲಸಕ್ಕೆ ಯೋಗ್ಯ, ಅರ್ಹತೆಯುಳ್ಳವ ಎಂಬಿತ್ಯಾದಿ ವಾದಗಳಿಂದ ಜನರನ್ನು ಪ್ರತಿನಿಧಿಗಳನ್ನು ಪುಸಲಾಯಿಸಿ ವಾಶಿಂಗ್‌ಟನ್‌ನನ್ನೇ ಸೇನಾ ಮುಖಂಡನನ್ನಾಗಿ ಆರಿಸಿದನು.

ಜೂನ್ 15ನೇ ದಿನ ತನ್ನ ನೂತನ ಹುದ್ದೆಗೆ ಆಯ್ಕೆಹೊಂದಿದ ವಾಶಿಂಗ್‌ಟನ್ ಅತ್ಯಂತ ವಿನಯದಿಂದ ತನ್ನ ಯೋಗ್ಯತೆಗೆ ಮಿಕ್ಕ ಗೌರವವನ್ನು ಅವರೆಲ್ಲರೂ ತೋರಿದುದಕ್ಕೆ ತನ್ನ ಧನ್ಯವಾದಗಳನ್ನೂ ಮತ್ತು ದೇಶಕ್ಕಾಗಿ ಹೆಣಗಲು ತಾನು ಸರ್ವತೋಮುಖವಾಗಿ ದುಡಿಯುವೆನೆಂದೂ ಆಶ್ವಾಸನೆಯನ್ನಿತ್ತರು.

ಅದೇ ದಿನ ಬೋಸ್ಟೋನಿನಿಂದಲೂ ಹೊಸ ವಾರ್ತೆ ಬಂದಿತ್ತು. ಹೋ, ಬುಗ್ಯಾಯ್ನ್, ಕ್ಲಿಂಟನ್ ಮೊದಲಾದವರು ಬ್ರಿಟಿಶ್ ಅಧಿಕಾರಿ ಜನರಲ್ ಗೇಜಿನೊಡನೆ ಸಹಕರಿಸಿದ್ದರು. ಬೋಸ್ಟೋನ್ ಪಟ್ಟಣದಲ್ಲಿ ಮಾರ್ಶಲ್ ಲಾ ಜಾರಿಗೆ ಬಂದಿತ್ತು ಮತ್ತು ಊರನಾಯಕರಾದ ಸೇಮ್ ಏಡಮ್ಸ್ ಮತ್ತು ಜ್ಹೋನ್ ಹೇನಕ್ ಇಬ್ಬರೂ ಘಾತುಕರೆಂದು ಸಾರಲಾಗಿತ್ತು. ಇದನ್ನಾಲಿಸಿದ ವಾಶಿಂಗ್‌ಟನ್ ಮನಸ್ಸು ಗಟ್ಟಿಮಾಡಿ ತಮ್ಮ ಸೈನ್ಯದ ಬಡಾವಣೆಯ ಮಾರ್ಗಗಳನ್ನು ತನ್ನ ಸಹಚರರೊಂದಿಗೆ ಚರ್ಚಿಸಿದನು.

ಜೂನ್ 23ರಂದು ವಾಶಿಂಗ್‌ಟನ್‌ನು ಮುಖಂಡನಾಗಿ ನ್ಯೂಯಾರ್ಕಿಗೆ ಸವಾರಿಮಾಡಿದನು. ಅತ್ಯಂತ ವೈಭವದಿಂದಲೂ, ಗೌರವದಿಂದಲೂ ಆತ್ಮೀಯತೆಯಿಂದಲೂ ಜನ ಇವನನ್ನು ಬೀಳ್ಕೊಂಡರು.

ಇಪ್ಪತ್ತು ಮೈಲಿ ದೂರ ಈತನು ಮುಂದರಿದಿದ್ದಿರಬಹುದು ಅಷ್ಟೆ. ಆಗ ಈತನ ಇದಿರಿಗೆ ಸವಾರನೊಬ್ಬನು ಬಂದು 'ಬಂಕರ್ ಹಿಲ್'ನ ಯುದ್ಧದ ವಾರ್ತೆಯನ್ನು ಮುಟ್ಟಿಸಿದನು. ಈ ಗುಡ್ಡದಿಂದ ಕೆಲವೇ ಮಂದಿ ಅಮೇರಿಕದ ಯೋದ್ಧರು ಸುಸಜ್ಜಿತ ಇಂಗ್ಲಿಷ ಸೈನಿಕರನ್ನು

ಮೂರುಬಾರಿ ಹೊಡೆದಿದ್ದರೂ, ಕೊನೆಗೆ ಸೇನಾನಿ ಹೋ ಈ ಗುಡ್ಡವನ್ನು ವಶಪಡಿಸಿಕೊಂಡರೂ ಅಮೇರಿಕನರ ಸಾಹಸವೇ ಗೆದ್ದಂತಿತ್ತು.

ಇದನ್ನಾಲಿಸಿದ ವಾಶಿಂಗ್‌ಟನ್, 'ಸರಿ, ಹೀಗಿದ್ದರೆ ನಮ್ಮ ಸ್ವಾತಂತ್ರ್ಯವು ರಕ್ಷಿಸಲ್ಪಟ್ಟಂತೆಯೇ!' ಎಂದು ಉದ್ಗಾರ ತೆಗೆದನು.

ನ್ಯೂಯೋರ್ಕನ್ನು ಬಿಟ್ಟು ತೆರಳುವಮುಂಚೆ ಜನರಲ್ ಶುಯಿಲರ್‌ಗೆ ತಕ್ಕ ಆಜ್ಞೆಗಳನ್ನು ವಿಧಿಸಿಟ್ಟು ಅಲ್ಲಿಂದ ಈಶಾನ್ಯಾಭಿಮುಖವಾಗಿ ಮುಂದರಿದನು. ಎಲ್ಲೆಲ್ಲಿಯೂ ಜನರು ತನ್ನ ಮೇಲೆ ಈ ಹಿಂದೆ ತೋರದ ಆದರ, ನಂಬಿಕೆಗಳನ್ನು ಕಂಡು ಈತನಲ್ಲಿ ಅಭಿಮಾನವುಕ್ಕಿಬಂದಿತು. ಅಂತೂ ಬೊಸ್ಟೋನನ್ನು ಈತನು ಮುಟ್ಟಿದಾಗ ಈತನಲ್ಲಿ ನಿಜವಾದ ಸೇನಾನಿಯುಲ್ಲಿರತಕ್ಕ ಭವ್ಯ ಗುಣಗಳೆಲ್ಲವೂ ಪ್ರಾದುರ್ಭವಿಸಿದ್ದುವು.

ಅಲ್ಲಿ ಸೇರಿದ ಸೇನೆಯಲ್ಲಿ ಶಿಸ್ತೇನೂ ಇದ್ದಿಲ್ಲ. ಸಿಕ್ಕಾಬಟ್ಟೆ, ತಮಗೆ ಬೇಕಾದಾಗ ಜನರು ಸೈನ್ಯವನ್ನು ಬಿಟ್ಟು ತಂತಮ್ಮ ಹೊಲಗಳಿಗೆ ಹೋಗುತ್ತಿದ್ದರು. ಆದುದರಿಂದ ಶಿಸ್ತಿನ ಸಂಘಟನೆಯು ಅತ್ಯವಶ್ಯವೆಂದರಿತು ವಾಶಿಂಗ್‌ಟನ್ ಕಾರ್ಯಪ್ರವೃತ್ತನಾದನು.

ಕ್ರಮಪ್ರಕಾರ ಅನ್ನಾಹಾರ, ಸಂಬಳಗಳ ವಿತರಣೆಯನ್ನು ಕೈಗೊಂಡು, ಸೈನಿಕರಲ್ಲಿ ಆಸೆ, ಅಭಿಮಾನಗಳನ್ನು ತುಂಬಿದನಲ್ಲದೆ, ವಾಶಿಂಗ್‌ಟನ್ ಅವರಲ್ಲಿ ಕಠಿಣ ಶಿಸ್ತನ್ನೂ ಬೋಧಿಸಿದನು. ಈತನೂ ಬಹಳ ಶಿಸ್ತಿನಿಂದ ಇದ್ದುದನ್ನು ಕಂಡೇ ಇವರೂ ಇವನ ಆಜ್ಞೆಗಳನ್ನು ಶಿರಸಾವಹಿಸಿದರು ಎನ್ನಬಹುದು. ಅಂತೂ ಇವನ ಆಜ್ಞೆಗಳನ್ನು ಪಾಲಿಸುತ್ತ ಇವನಿಂದ ತಕ್ಕ ಪ್ರಶಸ್ತಿಗಳನ್ನು ಪಡೆಯುವುದೇ ಈತನ ಅನುಯಾಯಿಗಳ ಉದ್ದೇಶವಾಗಿತ್ತು.

ಕೆಲವೇ ದಿನಗಳ ತರಬೇತಿಯನಂತರ ಅವರೆಲ್ಲರನ್ನೂ ಪರೀಕ್ಷಿಸಿದಾಗ, ತನ್ನ ಸೈನ್ಯದಲ್ಲಿ ತುಂಬಾ ಶಿಸ್ತು ಸಂಘಟಿಸಿದುದನ್ನು ವಾಶಿಂಗ್‌ಟನ್ ಮನಗಂಡನು. ಕೂಡಲೇ ತನ್ನ ಉಪಾಧಿಕಾರಿಯಾದ ನೇಥನೀಲ್ ಗ್ರೀನ್‌ನನು ಈತನನ್ನು ಮನಸಾರೆ ಕೊಂಡಾಡಿದನು; ಮಾತ್ರವಲ್ಲದೆ ಆ ಉಪಾಧಿಕಾರಿಯಿಂದಲೂ, ಈತನು ಮನ್ನಣೆಯನ್ನು ಪಡೆದನು.

ಎಲ್ಲರನ್ನೂ ತಕ್ಕಂತೆ ಅಭಿನಂದಿಸಿ, ಹೊಗಳುತ್ತ, ಉತ್ತೇಜನ ಗೊಳಿಸುತ್ತ ಇದ್ದುದರಿಂದಲೇ ವಾಶಿಂಗ್‌ಟನ್ ಬಹಳ ಜನಪ್ರೀತ ದಂಡಾಧಿಕಾರಿಯಾದನು. ಇವನ ಈ ಸದ್ಗುಣಗಳಿಂದಲೇ ಮುಖ್ಯವಾಗಿ ಗುಣಗ್ರಾಹಿ ಬುದ್ಧಿಯು ದೆಸೆಯಿಂದಲೇ ಈತನನ್ನು ಇತರರು ವೈಮನಸ್ಸಿನಿಂದ ಕಾಣುತ್ತಿದ್ದಿಲ್ಲ. ಅಲ್ಲದೆ ಮುಂದಿನ 7 ವರ್ಷಗಳ ತನಕವು ಚಾ ಚೂ ಎನ್ನದೆ ಈತನ ಛಾಯಾನುವರ್ತಿಗಳಾಗಿದ್ದರು. ಹೆನ್ರಿ ನೋಕ್ಸ್ ಎಂಬ ಪುಸ್ತಕವ್ಯಾಪಾರಿಯೊಬ್ಬ, ಜೋಸೆಫ್ ರೀಡ್ ಎಂಬ ಕೆಲವುಕಾಲ ಈತನ ಕಾರ್ಯದರ್ಶಿಯಾಗಿ ಕೆಲಸಮಾಡಿದ ಮತ್ತೊಬ್ಬ, ಥೋಮಸ್ ಮಿಫ್ಲಿನ್ ಎಂಬವನೊಬ್ಬ, ಇಸ್ರೇಲ್ ಪುಟ್ನೇಮ್ ಮತ್ತು ಜನರಲ್ ಆರ್ಟೆಮಸ್ ಮೊದಲಾದವರೇ ಈತನ ಅನಯಾಯಿಗಳಲ್ಲಿ ಪ್ರಮುಖರು. ಇವರೊಡನೆ ಡೇನಿಯಲ್ ಮೋರ್ಗನ್ ಎಂಬ ಬೇಟೆಗಾರನೂ ಮತ್ತು ಈಗಾಗಲೇ ಪ್ರಸ್ತಾಪಿಸಲ್ಪಟ್ಟಿರುವ ನೇಥನಲ್ ಗ್ರೀನ್ ಎಂಬಾತನೂ ಮತ್ತು ಸುಲಿವನ್ ಎಂಬಾತನೂ ಇವನ ಅನುವರ್ತಿಗಳಾಗಿದ್ದು ಸದಾ ಆಜ್ಞಾಧಾರಕರಾಗಿದ್ದರು.

ಬೇಸಗೆಯೆಲ್ಲಾ ಎರಡು ಸೈನ್ಯಗಳೂ ಒಂದನ್ನೊಂದು ಪರೀಕ್ಷಿಸುತ್ತಲೇ ಕುಳಿತವು. ಬಹುಶಃ ಹೌ ಇವನಮೇಲೆ ಯುದ್ಧಮಾಡಲು ಸ್ವಲ್ಪ ಹೆದರಿರಬೇಕು, ಅಷ್ಟೆ.

ನವಂಬರದಲ್ಲೊಂದುದಿನ ಈ ಡೇರೆಗೆ ಮಾರ್ಥಾ, ಅವಳ ಮಗ ಜೇಕ್ ಮತ್ತು ಈತನ ಹೆಂಡತಿ ಇಲೀನರಳು ಬಂದಿಳಿದರು ಮರುದಿನವೆಲ್ಲವೂ ಎಲ್ಲಾ ಸೈನಿಕರಿಗೂ ತಿಂಡಿ ತೀರ್ಥಗಳನ್ನು ಒದಗಿಸಲಾಯಿತು. ಇದರಿಂದಲಂತೂ ಜಾರ್ಜ್ ವಾಶಿಂಗ್‌ಟನ್‌ನ ಮೇಲಣ ಮಮತೆ ಮತ್ತು ಅಭಿಮಾನಗಳು ಮತ್ತೂ ಬೆಳೆದುವು.

ಚಳಿಗಾಲ ಮುಗಿದೊಡನೆ ಹೌನಮೇಲೆ, ಆತನ ಸೇನೆಯ ಮೇಲೆ ಬೀಳತಕ್ಕುದೆಂಬುದನ್ನು ಜಾರ್ಜ್ ನಿಶ್ಚಯಿಸಿದ್ದನು ಕಠಿಣ ತೊಡರುಗಳನ್ನೆಲ್ಲಾ ಇದಿರಿಸಿ ಕರ್ನೆಲ್ ನೋಕ್ಸ್ ತುಂದಗನ್ ಮತ್ತು ಸಿಡಿಮದ್ದುಗಳನ್ನೂ ಇವರ ಸಂಗ್ರಹದೊಡನೆ ಸೇರಿಸಿ ಯುದ್ಧಹೂಡಲು ಸನ್ನದ್ಧರಾದರು. ಬೊಸ್ಟ್ಟೇನ್ ಪಟ್ಟಣದ ಹತ್ತಿರದ ಎರಡು ಗುಡ್ಡಗಳನ್ನು

ಮೊದಲು ಆಕ್ರಮಿಸುವುದೇ ಇವರು ಯೋಚಿಸಿದ ಮಾರ್ಗವಾಗಿತ್ತು. ಇದಾದರೋ ಸಾಹಸದ ಕಾರ್ಯವೇ ಆಗಿತ್ತು. ಮೆಲ್ಲನೆ, ಸೈನಿಕರು ಸಾಲು ಸಾಲಾಗಿ ಗುಡ್ಡವನ್ನೇರಿದರು. ಬೆಳಗಾಗುವುದರೊಳಗೆ ಇವರ ಗುಂಡುಗಳು ಪಟ್ಟಣಿಗರನ್ನು ಇಂಗ್ಲಿಷ್ ಸೈನಿಕರನ್ನೂ ದಂಗುಬಡಿಸಿದುವು.

ವಿಜಯಧ್ವನಿಯಿಂದ, 'ಅವರನ್ನು ಗೂಡಿನೊಳಗೆ ಹಾಕಿದಂತಾಯಿತು', ಎಂದು ನೋಕ್ಸ್ ಆರ್ಭಟಿಸಿದನು.

ಅಂತೂ ಬೊಸ್ಟೋನ್ ಪಟ್ಟಣವು ಇವರ ಕೈಗೆ ಸಿಕ್ಕಿತು. ಇಂಗ್ಲಿಷರು ಇದನ್ನು ಬಿಟ್ಟುಕೊಟ್ಟು, ತಾವು ಹಿಂದೆಗೆದರು.

ಅಮೇರಿಕದ ದಳಗಳ ಪತಾಕೆಯು ಯೂನಿಯನ್ ಜೇಕಿನ ಸ್ಥಾನವನ್ನಾಕ್ರಮಿಸಿತು. ಜಾರ್ಜ್ ವಾಶಿಂಗ್‌ಟನ್ ಹೋದಲ್ಲೆಲ್ಲಾ ವಿಜಯೋತ್ಸಾಹದ ಧ್ವನಿಗಳು ಈತನನ್ನು ಸ್ವಾಗತಿಸಿದುವು. ಇದೇನೋ ಆತನ ಮೊದಲಿನ ವಿಜಯವಾಗಿದ್ದರೂ ಇದರಿಂದಲೇ ಆತನ ಹೆಸರು ತಮ್ಮ ದೇಶದಲ್ಲೂ, ಸಹಸ್ರಮೈಲಿಗಳಾಚೆಗಿನ ಇಂಗ್ಲೆಂಡಿನಲ್ಲಿಯೂ ಮನೆಮಾತಾಯಿತು.

ಅಧ್ಯಾಯ ೧೨

ನ್ಯೂಯಾರ್ಕಿನಲ್ಲೊಂದು ದಿನ ವಾಶಿಂಗ್‌ಟನ್ ಮತ್ತು ಇತರ ಅಧಿಕಾರಿಗಳೂ ಊಟೋಪಚಾರಗಳಲ್ಲಿ ತೊಡಗಿದ್ದರು. ಕೆಲವು ಅಧಿಕಾರಿಗಳ ಸಮ್ಮೇಲನವು ಅಲ್ಲಿ ಕೂಡಿತ್ತು. ಹೌ ತಾನು ಬೊಸ್ಟೋನ್‌ನಿಂದ ಕಾಲ್ತೆಗೆದ ನಂತರ ಬ್ರಿಟನಿನಿಂದ ತನ್ನ ಸಹಾಯಕ್ಕೆ ದೊಡ್ಡ ಸೈನ್ಯವು ಮತ್ತು ಯುದ್ಧ ನಾವೆಗಳು ಬರುವುದನ್ನೇ ಪ್ರತೀಕ್ಷಿಸುತ್ತಿದ್ದನು. ಆವನ ಹದಗೆಟ್ಟ ಮತ್ತು ಹರಿಹಂಚಾದ ಸೇನಾ ವಿಭಾಗವು ಸ್ಟೇಟೆಸ್ ದ್ವೀಪದಲ್ಲಿ ತಂಗಿತ್ತು.

"ವಾಶಿಂಗ್‌ಟನ್ನರೇ, ಈ ಅಲಸ ಜೀವನಕ್ಕಿಂತ ನಮ್ಮ ಸೈನ್ಯದ ಮುಖ್ಯ ಠಾಣೆಗೆ ಹೋಗುವುದೇ ಒಳ್ಳೆಯದೆಂದು ಕಾಣುತ್ತದೆ", ಎಂದು ನೇಥೆನಿಲ್ ಗ್ರೀನ್ ಊಟಮಾಡಿ ಏಳುವಾಗ ಅಂದನು.

ಇದನ್ನು ಕೇಳಿ ಸಮ್ಮತಿ ಸೂಚಕವಾದ ನಗೆಯು ವಾಶಿಂಗ್‌ಟನ್‌ನ ಮುಖದಲ್ಲಿ ಮಿನುಗಿತು. ಎಲ್ಲರೂ ಎದ್ದು ನಿಂತು ತಂತಮ್ಮ ಶಕ್ತಿಗಳನ್ನು ಭದ್ರವಾಗಿ ತಮ್ಮ ಉಡುಪುಗಳಲ್ಲಿ ಸಿಕ್ಕಿಸಿಕೊಂಡರು. ತನ್ನ ಆಪ್ತ ಕಾರ್ಯದರ್ಶಿಯೊಡನೆ ಸ್ವಲ್ಪಕಾಲ ಸಮಾಲೋಚನೆ ಮಾಡಿ ವಾಶಿಂಗ್‌ಟನ್ ಇತ್ತೀಚೆಗೆ ವಿವಿಧ ಪ್ರತಿನಿಧಿ ಸಭೆಗಳಿಂದ ಬಂದ ವಿಚಾರಗಳನ್ನೆಲ್ಲಾ ಸಂಗ್ರಹಿಸುತ್ತಿದ್ದನು.

ಅತ್ತ ಜೋನ್ ಏಡಮ್ಸ್ ಮತ್ತು ಹೆನ್ರಿ ಲೀ ಇವರಿಬ್ಬರೂ, ತೀವ್ರ ಗಾಮಿಗಳ ಪಂಥದ ಮುಖಂಡರಾಗಿ ತಮ್ಮ ಪತ್ರಿಕೆ 'ಕೋಮನ್ ಸೆನ್ಸ್' (Common Sense)ನಿಂದ ಜನರನ್ನು ಆಲಸ್ಯದಿಂದ ಹೊಡೆದೆಬ್ಬಿಸುತ್ತಿದ್ದರು. ಥೋಮಸ್ ಪೈನ್ ಎಂಬಾತನ ಬರೆಹಗಳು ಈ ಪತ್ರಿಕೆಯನ್ನು ಜನಪ್ರಿಯವನ್ನಾಗಿ ಮಾಡುವುದರೊಡನೆ, ಅವರಿಗೆ ತಕ್ಕಷ್ಟು ರಾಜಕೀಯ ಜ್ಞಾನ ಮತ್ತು ಹಕ್ಕು ಬಾಧ್ಯತೆಗಳ ಪರಿಚಯವನ್ನೊದಗಿಸಿದ್ದುವು.

ಹೀಗೆ ಜನರ ಒಲವು ತಮ್ಮತ್ತ ಇರುವುದನ್ನು ಮನಗಂಡು ಏಡಮ್ ಮತ್ತು ಲೀ ಹಾಗೂ ಇವರ ಬೆಂಬಲಿಗರು ಪ್ರತಿ ವಸಾಹತುವಿನ ಮತ್ತು ಪಟ್ಟಣದ ಸಭೆಯಲ್ಲಿಯೂ ತಮ್ಮದೇ ಆದ ನ್ಯಾಯಾಲಯಗಳ ಸ್ಥಾಪನೆಯಾಗತಕ್ಕದೆಂಬ ನಿರ್ಣಯವನ್ನು ಮುಂದೆ ತಂದರು. ಹೀಗೆ ಅಮೇರಿಕದ ವಸಾಹತುಗಳು ತಮ್ಮ ಸ್ವಾತಂತ್ರ್ಯದ ಗುರಿಯತ್ತ ತಮಗೆ ತಿಳಿಯದಂತೆಯೇ ಮುಂಬರಿದುವು. ಒಂದುದಿನ ಜಾರ್ಜ್ ವಾಶಿಂಗ್‌ಟನ್‌ನ ಕಾರ್ಯದರ್ಶಿಯು, "ಜನರಲ್, ಸುವಾರ್ತೆ, ಫಿಲಡೆಲ್ಫಿಯಾದಿಂದ ಸುವಾರ್ತೆ" ಎನ್ನುತ್ತಾ ಕರ್ನೆಲನ ಕೋಣೆಯನ್ನು ಪ್ರವೇಶಿಸಿದನು.

"ಕರ್ನೆಲರೇ, ಸ್ವಾತಂತ್ರ್ಯವು ಘೋಷಿಸಲ್ಪಟ್ಟಿದೆ, ನಾವು ಸಂಯುಕ್ತ ಅಮೇರಿಕದಲ್ಲಿ ಇಂದಿರುವೆವು" ಎಂದುಸುರಿದ ಮಾತುಗಳು ಜಾರ್ಜ್‌ನಿಗೆ ಕರ್ಣಾಮೃತವಾಗಿ ಪರಿಣಮಿಸಿದುವು. ಈತನ ಹೃದಯವು ತುಂಬಿ ಬಂದಿತು, ಕಣ್ಣುಗಳು ಹನಿಗೂಡಿದುವು ಮತ್ತು 'ಅಮೇರಿಕದ ಸಂಯುಕ್ತ ರಾಷ್ಟ್ರಗಳು' ಎಂಬ ಮಾತುಗಳು ಈತನಿಗೆ ತಿಳಿಯದಂತೆಯೇ ಬಾಯಿಯಿಂದ ಉದುರಿದುವು.

ಕೂಡಲೇ ಇವನನ್ನು ಎಲ್ಲಾ ಅಧಿಕಾರಿಗಳು ಸುತ್ತುವರಿದು ನಿಂತರು. ಇವರೆಲ್ಲರೂ ಆಗ ಸ್ವಾಮಿದ್ರೋಹಿಗಳು, ರಾಜದ್ರೋಹಿಗಳು ಬೋಸ್ಟನಿನ ಕಾರ್ಯಕ್ರಮವು ಇವರ ವಿಶ್ವಾಸ ಘಾತಕತನದ ಮೊದಲ ಘಟ್ಟವಾಗಿತ್ತು. ಆದರೆ ಇವರಾದರೂ ತಮ್ಮ ಸ್ವಾತಂತ್ರ್ಯಕ್ಕಾಗಿ ಹೆಣಗಿದವರಲ್ಲವೆ? ಅಂತೂ 4ನೇ ಜುಲೈಯಂದು ಇವರ ಸ್ವಾತಂತ್ರ್ಯ ಘೋಷವು ಎಲ್ಲೆಲ್ಲೂ ಅಂಗೀಕೃತವಾಯಿತು. ಈಗಲಂತೂ ತಾಯಿ ನಾಡಿನೊಡನೆ ತಾವು ಯುದ್ಧಕ್ಕೆ ಅನುವಾಗತಕ್ಕುದೆಂಬುದನ್ನು ಜಾರ್ಜ್ ವಾಶಿಂಗ್‌ಟನ್ ಪೂರ್ತಿ ಮನಗಂಡನು.

ಒಂದುದಿನ ಗ್ರೀನ್ ಒಬ್ಬ ಚಿಕ್ಕ ಆಫೀಸರನನ್ನು-ಅಲೆಕ್ಸಾಂಡರ್ ಹೇಮಿಲ್ಟನ್ ಎಂಬಾತನನ್ನು- ಜಾರ್ಜ್‌ನಲ್ಲಿಗೆ ಕರೆತಂದು ಅವನ ಪರಿಚಯವನ್ನೊದಗಿಸಿದನು. ಆ ಚಿಕ್ಕ ಆಫೀಸರನಿಂದ ಆಕರ್ಷಿತನಾದ ಜಾರ್ಜ್, 'ಈತನೋ ಬಹಳ ಬುದ್ಧಿವಂತನಿದ್ದಾನೆ, ಇವನ ವಿಚಾರ ನನಗೆ ಯಾವಾಗಲೂ ತಿಳಿಸುತ್ತಿರಬೇಕು' ಎಂದು ಹೇಳುತ್ತ ಆತನನ್ನು ಬೀಳ್ಕೊಂಡನು.

"ಈತನು ವೆಸ್ಟ್‌ಇಂಡೀಸ್‌ನಲ್ಲಿ ಹುಟ್ಟಿದವನು. ಮೊನ್ನೆ ಮೊನ್ನೆಯತನಕ ಕಿಂಗ್ಸ್ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದವನು. ಬಹಳ ಚುರುಕು ಬುದ್ಧಿಯುವನು," ಎಂದು ಆತನ ಪೂರ್ಣ ಪರಿಚಯವನ್ನು ಗ್ರೀನ್ ಹೇಳಿದನು.

ಇವನಂಥ ಬುದ್ಧಿವಂತರು ಅಮೇರಿಕದ ಪಕ್ಷವನ್ನು ಸೇರುವುದು, ಸೇರಿ ದುಡಿಯುವುದು ಅತ್ಯವಶ್ಯವಿತ್ತು. ಉದಾಹರಣೆಗೆ, ತನ್ನ ಧೀಶಕ್ತಿಯಿಂದಲೇ ಇಸ್ರೇಲ್ ಪುಟ್ನೇಮ್ ಹಡ್ಸನ್ ನದಿಯಲ್ಲಿ ಬ್ರಿಟಿಶ್ ಹಡಗಗಳನ್ನು ತಡೆದುಹಿಡಿಯುವ ಉಪಾಯವನ್ನು ಕೇವಲ ಮರದ ತೊಲೆಗಳ ಮತ್ತು ಚಿಕ್ಕ ದೋಣಿಗಳ ಸಹಾಯದಿಂದ ರಚಿಸಿದ್ದನು. ಜೋರ್ಜ್ ಕ್ಲಿಂಟನ್ ಎಂಬವನೂ ಈತನೊಡನೆ ಸಹಕರಿಸಿದ್ದನು. ಹಡ್ಸನ್ ನದಿಯನ್ನು ರಕ್ಷಿಸಿಕೊಂಡರೆ ನ್ಯೂ ಇಂಗ್ಲಂಡನ್ನು ಉಳಿದ ವಸಾಹತುಗಳಿಂದ ಪ್ರತ್ಯೇಕಿಸುವುದು ಸಾಧ್ಯವಾಗದು ಎಂಬ ಕಾರಣವೇ ಇವರನ್ನು ಈ ಯೋಜನೆಯ ಬಗ್ಗೆ ದುಡಿಸಿತ್ತು.

ಆಗಸ್ಟ ಅಂತ್ಯದಲ್ಲಿ ಹೌ ಅಣ್ಣ ತಮ್ಮಂದಿರು ಪುನಃ ಕಾರ್ಯ ಪ್ರವೃತ್ತರಾದರು. ಎಡ್ಮಿರಲ್ ಹೊರೇಶ್ ಎಂಬಾತನು ಹೆಸ್ಸನ್ ಸೈನಿಕರನ್ನೂ ಮತ್ತು ಯುದ್ಧ, ಆಹಾರ ಸಾಮಗ್ರಿಗಳನ್ನೂ ತಂದೊದಗಿಸಿದುದೇ ಇದಕ್ಕೆ ಕಾರಣವಾಗಿತ್ತು. ಅಲ್ಲದೆ ಹೆಸ್ಸನ್ ಸೈನಿಕರೂ ಸಂಬಳಕ್ಕಾಗಿ ಯಾರನ್ನು ಕೊಲ್ಲಲೂ ಹೇಸುತ್ತಿದ್ದಿಲ್ಲ. ಇವರನ್ನು ಯುದ್ಧಕ್ಕಾಗಿ ತಂದುದಂತೂ ಅಮೇರಿಕನರಲ್ಲಿ ಮತ್ತೂ ಹೆಚ್ಚಿನ ದ್ವೇಷವನ್ನುಂಟುಮಾಡಿತು.

ನ್ಯೂಯಾರ್ಕಿನ ಸುತ್ತಲಿನ ಯುದ್ಧದ ಕಾರ್ಯಾಚರಣೆಯು ಬ್ರಿಟಿಶರನ್ನು ಅಲ್ಲೇ ಇರುವಂತೆ ಮಾಡಿತ್ತು. ಈ ಪಟ್ಟಣವನ್ನು ಮತ್ತು ರೇವನ್ನು ಉಳಿಸಿಕೊಳ್ಳುವುದು ಕಷ್ಟವಾಗಿತ್ತು. ಅಲ್ಲದೆ ಗ್ರೀನ್ ಕೂಡ ಇಂಥ ಕಾರ್ಯಕ್ರಮವನ್ನು ವಿರೋಧಿಸಿದ್ದನು. ಆದರೂ ಸುದೈವವಶಾತ್, ಈ ಕಾರ್ಯಾಚರಣೆಯಲ್ಲಿ ವಾಶಿಂಗ್‌ಟನ್ ಮತ್ತು ಆತನ ಅನುಯಾಯಿಗಳು ಬಂಧಿಸಲ್ಪಡಲಿಲ್ಲ.

ವಾಶಿಂಗ್‌ಟನ್‌ನ ಮೊದಲನೆಯ ದೊಡ್ಡ ಯುದ್ಧದಲ್ಲಿ ಈತನ ಸೈನ್ಯದ ಸುತ್ತಲೂ ಮೂರೂ ಕಡೆಗಳಿಂದ ವೈರಿಗಳು ಮುಂದರಿಯುತ್ತಿದ್ದರು. ಹೀಗೆ ಮೇನ್ಹಟನ್‌ನಿಂದ ತಾವು ಪ್ರತ್ಯೇಕವಾಗುವುದು ಇನ್ನು ದೂರವಿಲ್ಲವೆಂದರಿತ ವಾಶಿಂಗ್‌ಟನ್ ಇದನ್ನು ತಪ್ಪಿಸುವರೆ ಆಗಸ್ಟ 29ರಂದು ತನ್ನ ಸೈನ್ಯವನ್ನು ಹಿಂದೆ ಸರಿಯಲು ಆಜ್ಞಾಪಿಸಿದನು. ಎಲ್ಲ ಜನರೂ, ಸಾಮಗ್ರಿಗಳೂ ಸುರಕ್ಷಿತವಾಗಿ ನದಿಯನ್ನು ದಾಟಿದರು. ಸಪ್ತಂಬರದಲ್ಲಿ ವೈರಿಯ ವಿಷಯಗಳನ್ನು ತಿಳಿದುಕೊಂಡು ಬರುತ್ತೇನೆಂದು ಮುನ್ನುಗ್ಗಿದ ಕಪ್ತಾನ್ ನೇಥನ್‌ಹೇಲ್ ಎಂಬಾತನು ಕೊಲೆಯಾದನು. ಅಕ್ಟೋಬರ ಮತ್ತು ನವಂಬರಗಳಲ್ಲಿ ಯುದ್ಧವು ಅವಿಚ್ಛಿನ್ನವಾಗಿ ಸಾಗಿತು.

ವಾಶಿಂಗ್‌ಟನ್ ಕೋಟೆಯು ತನ್ನ 3000 ಮಂದಿ ಮತ್ತು ಆಹಾರ ಸಾಮಗ್ರಿಗಳೊಂದಿಗೆ ಕೋರ್ನ್‌ವಾಲೀಸನಿಗೆ ಶರಣು ಬಂದಿತು. ಲೀ ಕೋಟೆಯನ್ನು ಇವರು ಬಿಟ್ಟು ಬಿಡಬೇಕಾಯಿತು. ಮೆಲ್ಲನೆ ಚಳಿಗಾಲ ಸಮೀಪಿಸುತ್ತಿರುವ ವೇಳೆ ನ್ಯೂ ಜರ್ಸಿ ನದಿಯನ್ನು ದಾಟಿ ಉತ್ತಮ

ಸಂದರ್ಭವನ್ನು ಕಾದು ಕುಳಿತಿದ್ದನು. ಜನರಲ್ ಹೌ ನ್ಯೂಯಾರ್ಕಿಗೆ ಹೋಗಿದ್ದನು ಮತ್ತು ಬ್ರಿಟಿಷ್ ಸೈನ್ಯಗಳು ಚೆಲ್ಲಾಪಿಲ್ಲಿಯಾಗಿ ಹೆಚ್ಚಿನವರು ಟ್ರೆಂಟನ್‌ನಲ್ಲಿದ್ದರು. ಇದೇ ಸಂದರ್ಭವನ್ನರಿತು ವಾಶಿಂಗ್‌ಟನ್‌ನು ವೈರಿಯನ್ನು ಹೊಡೆಯಲು ನಿರ್ಣಯಿಸಿದನು.

2500 ಮಂದಿಯೊಡನೆ ಮಂಜು ತೇಲುತ್ತಿದ್ದ ಡಿಲಾವಾರ್ ನದಿಯನ್ನು ದಾಟಿ ಕ್ರಿಸ್‌ಮಸ್ ರಾತ್ರಿಯಂದು ಸರಿಯಾಗಿ ಕುಡಿದು ಮಲಗಿದ್ದ ಹೆಸ್ಸ್ಯನ್ ಸೈನಿಕರ ಮೇಲೆ ದಾಳಿ ನಡೆಸಲಾಯಿತು. ಇವರು ಅಮಲಿನಲ್ಲಿದ್ದರು. ತೂಗುತ್ತ ಎದ್ದರೂ ಯುದ್ಧ ಮಾಡಲಾಗದೆ ಶರಣು ಬಂದರು. ಚಿಂದಿ ಸಮವಸ್ತ್ರಗಳಲ್ಲಿದ್ದ ಅರೆಹೊಟ್ಟೆಯುಂಡಿದ್ದ ಅಮೇರಿಕನ್ ಸೈನಿಕರು ಚೆನ್ನಾಗಿ ಉಂಡು ಉತ್ತಮ ವಸ್ತ್ರ ಪಾದರಕ್ಷೆಗಳಲ್ಲಿದ್ದ 800 ಮಂದಿ ಹೆಸ್ಸ್ಯನ್ ಸೈನಿಕರನ್ನು ಬಂಧಿಸಿದರು.

ಬೆಳಗಾಗುವಾಗ ಹೆಸ್ಸ್ಯನ್ ಆಫೀಸರನೊಬ್ಬನ ಮನೆಯಲ್ಲೇ ಅಮೇರಿಕನ್ ಸೇನಾಧಿಕಾರಿಗಳು ಚಹಾ ಕುಡಿಯುವಂತಾಯಿತು. ಎಲ್ಲರಲ್ಲೂ ಮುಖ್ಯವಾಗಿ ವಾಶಿಂಗ್‌ಟನ್‌ನ ಹಳೆಯ ಸ್ನೇಹಿತ ಜನರಲ್ ಹ್ಯೂ ಮರ್ಸರ್‌ನ ಮುಖದಲ್ಲಿ ತೃಪ್ತಿಯು ಮನೆಮಾಡಿತ್ತು.

“ಇದು ಸಂತೋಷದ ದಿನ, ನಮ್ಮ ವಿಜಯದ ಕಾರಣದಿಂದ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಸ್ವಯಂ ಸೇವಕರು ನಮ್ಮನ್ನು ಕೂಡಿಕೊಳ್ಳುವುದು ಖಂಡಿತ”, ಎಂದು ಮರ್ಸರ್ ಹೇಳಿದನು.

ಆದರೆ ವಾಶಿಂಗ್‌ಟನ್‌ನ ಮನಸ್ಸಿನಲ್ಲಿ ಹಣದ ಕೊರತೆಯು ದೊಡ್ಡ ಸಮಸ್ಯೆಯಾಗಿ ಪರಿಣಮಿಸಿತ್ತು. ಸೈನಿಕರನ್ನು ಸಾಕ ಬೇಕಾದರೆ ಹಣ ಬೇಡವೆ?

ಫಿಲಡೆಲ್ಫಿಯಾದ ಬೇಂಕರನಾದ ರಾಬರ್ಟ್ ಮೋರಿಸನ ಮನೆಗೆ ಹಣಕ್ಕಾಗಿ ಜನರು ಧಾವಿಸಿದರು. ಮೋರಿಸನು ತಾನು 5000 ಡಾಲರುಗಳಷ್ಟು ಹಣವನ್ನು ಸಾಲ ತೆಗೆದು ಕಳುಹಿದನು. ಸಂಬಳ ಮತ್ತು ಬೋನಸ್ಸನ್ನು ಪಡೆದ ಸೈನಿಕರು ತೃಪ್ತರಾದರು. ಇಷ್ಟೇ ಅಲ್ಲದೆ, ಎಲ್ಲೆಡೆಗಳಿಂದಲೂ ಬರುತ್ತಿದ್ದ ಅಭಿನಂದನೆಯ ವಾರ್ತೆಗಳು,ಕೋರಿಕೆಗಳು ಇವರಲ್ಲಿ ತುಂಬಾ ಹುಮ್ಮಸ್ಸನ್ನು ತುಂಬಿದುವು. 2-1-1777ರಲ್ಲಿನ

ಅಮೇರಿಕದ ದಳದಲ್ಲಂತೂ 6,000ಕ್ಕೂ ಮಿಕ್ಕಿ ಸೈನಿಕರು ಇದ್ದು ಅವರೆಲ್ಲರೂ ತೃಪ್ತರಾಗಿದ್ದರು ಎಂದರೂ ತಪ್ಪಿಲ್ಲ.

ಇಷ್ಟರಲ್ಲಿ ಕಾರ್ನ್‌ವಾಲೀಸ್ ಟ್ರೆಂಟನ್‌ನತ್ತ ಧಾವಿಸಿದನು. ಅವ ಸರವಸರವಾಗಿ ತನ್ನ ಉಪಾಧಿಕಾರಿಗಳನ್ನು ಕೂಡಿಸಿ ವಾಶಿಂಗ್ಟನ್ ಇವರ ಸೇನೆಯನ್ನು ದಾಟಿ ಹಿಂದಿನಿಂದ ಇವರ ಮೇಲೆ ಬೀಳುವುದಾಗಿ ತೀರ್ಮಾನಿಸಿದನು.

ಪ್ರಿನ್ಸ್‌ಟನ್‌ನ ಹತ್ತಿರ ಸ್ಟೋನ್‌ಬ್ರೂಕ್ ಎಂಬಲ್ಲಿಗೆ ಬೆಳಗಾಗುವ ಮುಂಚೆಯೇ ಸೇನೆಯ ಮುಂಭಾಗವು ಮರ್ಸರ್‌ನ ನೇತೃತ್ವದಲ್ಲಿ ಬಂದುಸೇರಿತು, ಬೆಳಗಾಯಿತು. ಅಷ್ಟರಲ್ಲಿ ಒಂದಷ್ಟು ಎತ್ತರದ ಜಾಗದಲ್ಲಿ ಬ್ರಿಟಿಶ್ ಸೇನೆಗಳೂ ತಂಗಿರುವುದನ್ನು ಕಂಡರು. ಇವು ಕಾರ್ನ್‌ವಾಲೀಸನನ್ನು ಸೇರಿಕೊಳ್ಳಲು ಪ್ರಿನ್ಸ್‌ಟನ್ನಿಗೇ ಹೋಗುತ್ತಿದ್ದುವು.

ಸರಿ, ಯುದ್ಧಾರಂಭವಾಯಿತು. ಮರ್ಸರನ ಸೈನಿಕರು ಅದ್ಭುತವಾಗಿ ಹೋರಾಡಿದರೂ ಬ್ರಿಟಿಶ್ ಸೈನಿಕರೆದುರಿಗೆ ನಿಲ್ಲದಾದರು. ಮರ್ಸರನು ಧೀರನಂತೆ ಬಹಳ ಕಾಲ ಯುದ್ಧಮಾಡಿ ಹಲವಾರು ಜನರನ್ನು ಯಮಸದನಕ್ಕಟ್ಟಿ ತಾನೂ ಸತ್ತನು. ಅಷ್ಟರಲ್ಲಿ ವಾಶಿಂಗ್ಟನ್ ಅಶ್ವಾರೂಢನಾಗಿ ಮುಂದರಿದು ತನ್ನ ಸೈನಿಕರನ್ನು ಹುರಿದುಂಬಿಸುತ್ತ ಜೀವದ ಹಂಗು ತೊರೆದು ಶೌರ್ಯದಿಂದ ಕಾದಾಡಿದನು, ಇಷ್ಟರಲ್ಲಿ ಹಿಂದಿನಿಂದ ಮತ್ತಷ್ಟು ಸೈನಿಕರು ಒಂದು ಸೇರಿ ಕಾದಲಾರಂಭಿಸಿದರು. ವಾಶಿಂಗ್ಟನ್‌ನಿಗೇ ವಿಜಯಶ್ರೀಯು ಒಲಿದಳು. ಈತನು ಮೊರಿಸ್ಟೌನ್‌ಗೇನೇ ತನ್ನ ಸೇನೆಯನ್ನು ಕೊಂಡುಹೋದನು. ಅಂತೂ ಇದರಿಂದ ತಾನೂ ಸುರಕ್ಷಿತನಾದನಲ್ಲದೆ, ಫಿಲಡೆಲ್ಫಿಯಾವನ್ನೂ ಸಂರಕ್ಷಿಸಲು ಸಮರ್ಥನಾದನು. ಮತ್ತು ಕೆಲಕಾಲದ ತನಕ ಬ್ರಿಟಿಶರ ಯತ್ನಗಳು ಸಫಲವಾಗುವ ಸಂಭವವಿರಲಿಲ್ಲ.

ಇತ್ತ ವಾಶಿಂಗ್ಟನ್ನಿನ ವೈಯಕ್ತಿಕ ವಿಚಾರಗಳತ್ತ, ಮನೆಯತ್ತ ಆತ ಗಮನವನ್ನು ಹರಿಯಿಸಲೇ ಬೇಕಿತ್ತು. ಆದರೂ ತನ್ನ ಸೇನೆಯ ಆವಶ್ಯಕತೆಗಳ ವಿಚಾರವಾಗಿ ಈತನು ಪ್ರತಿನಿಧಿಗಳ ಸಭೆಗೆ ಸ್ವಲ್ಪ ಜೋರಾಗಿಯೇ ಬರೆದಿದ್ದನು.

ಒಂದು ದಿನವಂತೂ ಒಂದು ಗುಪ್ತ ಕಾಗದವನ್ನು ಈತನಿಗೆ ಮುಟ್ಟಿಸಿದರು. ಇದನ್ನು ಗ್ರೀನ್‌ಗೆ ತೋರುತ್ತ, "ಇದೋ 'ಅವು' ಬಂದಿರುತ್ತವೆ," ಎಂದು ಉತ್ಸಾಹದಿಂದ ಮಾತನಾಡಿದನು.

'ಅವು' ಎಂದರೆ ಯುದ್ಧ ಸಾಮಗ್ರಿ ಮತ್ತು ಆಹಾರಗಳನ್ನು ತುಂಬಿಸಿಟ್ಟ ಮೂರು ಹಡಗುಗಳು, ಇವುಗಳನ್ನು ಫ್ರಾನ್ಸ್ ಅಮೇರಿಕದೊಡನೆ ಸ್ನೇಹ ಸೂಚಕವಾಗಿ ಕಳುಹಿತ್ತು. ಇಂಥ ಸ್ನೇಹಸಂಪಾದನೆಗಾಗಿ ಬೆಂಜಮಿನ್ ಫ್ರೇಂಕ್ಲಿನ್ ಕಳುಹಲ್ಪಟ್ಟಿದ್ದನು.

ಇಷ್ಟರಲ್ಲಿ ಇಂಗ್ಲಿಷ್ ಸೇನಾಧಿಕಾರಿ ಜೋನ್ ಬುಗ್ವಾರ್ಯನ್ ಎಂಬಾತನು ಉತ್ತರದಲ್ಲಿ ಒಂದು ವಿಶಿಷ್ಟ ದಂಡಯಾತ್ರೆಯನ್ನಾರಂಭಿಸಿದ್ದನು. ಈತನು ಕ್ವಿಬೆಕ್‌ನಲ್ಲಿಳಿದು ಟಕೆನ್ಡೆರೋಗಾವನ್ನಾಕ್ರಮಿಸಿ ಆಲ್ಬೆನಿಗೆ ಬರತಕ್ಕುದಾಗಿ ತೀರ್ಮಾನಿಸಿದ್ದನು. ಅಷ್ಟರಲ್ಲೇ ಹೌ ಕೂಡ ತನ್ನ ಸೇನೆಯೊಂದಿಗೆ ನ್ಯೂಯಾರ್ಕಿಗೆ ಬಂದು ಈತನನ್ನು ಸೇರಿದರೆ ಪುನಃ ಹಡ್ಸನ್ ನದಿಯ ಆಧಿಕಾರವೆಲ್ಲವೂ ಇವರಿಗೆ ಸೇರುತ್ತಲಿತ್ತು.

ಜೂನ್ ಕೊನೆಯ ಭಾಗದಲ್ಲಿ ಹೌನ ಸೈನಿಕರು ಬುಗ್ವಾರ್ಯನೊಡನೆ ಸೇರಲು ಪಯಣ ಬೆಳೆಸುತ್ತಿದ್ದರು. ಅವರು ತೆರಳುತ್ತಿರುವಷ್ಟರಲ್ಲೇ ಸೈಂಟ್ ಕ್ಲೇರನು ಟಕೆನ್ಡೆರೋಗಾ ಕೋಟೆಯನ್ನು ಬಿಟ್ಟು ಓಡುತ್ತಿದ್ದನೆಂದೂ ಅವನ ಹಿಂದೆಯೇ ಸಾರಟೋಗಾದ ಹತ್ತಿರ ಬುಗ್ವಾರ್ಯನ್ ಆತನನ್ನು ಹಿಂಬಾಲಿಸುತ್ತಿದ್ದಾನೆಂದೂ ವರದಿ ಬಂದಿತು. ಇದು ಎಲ್ಲರನ್ನೂ ದಂಗು ಬಡಿಸಿತು.

ಇನ್ನು ಜುಲೈ ಮಾಸದ ಅಂತ್ಯದೊಳಗಾಗಿ ಅಲೆಕ್ಸಾಂಡರ್ ಹೆಮಿಲ್ಟನ್‌ನು ಧಾವಿಸಿ ಮುಖ್ಯಾಧಿಕಾರಿ ವಾಶಿಂಗ್‌ಟನ್‌ನಿಗೆ ಬ್ರಿಟಿಷ ನೌಕೆಯು, ಯುದ್ಧ ನಾವೆಗಳು ಡಿಲಾವಾರ್ ಭೂಶಿರದ ಹತ್ತಿರ ಬರುತ್ತಿರುವುದು ಕಾಣುತ್ತಿದೆಯೆಂದು ವರದಿ ಮಾಡಿದನು.

"ಹಾಗಾದರೆ ಫಿಲಡೆಲ್ಫಿಯಾವನ್ನು ನುಂಗಲು ಹವಣಿಸುತ್ತಿದ್ದಾರೆ, ಎಲ್ಲ ಆಧಿಕಾರಿಗಳನ್ನೂ ಒಡನೆಯೇ ಕರೆಯಿರಿ" ಎಂದು ಜಾರ್ಜ್ ಕೂಡಲೇ ಆಜ್ಞಾಪಿಸಿದನು.

ಮರುದಿನವೇ ಜರ್ಮನ್‌ಟೌನ್‌ನಲ್ಲಿ ಅಧಿಕಾರಿಗಳ ಸಭೆ ಕೂಡಿದಾಗ ವಾಶಿಂಗ್‌ಟನ್ ಫಿಲಡೆಲ್ಫಿಯಾಕ್ಕೆ ಹೋಗಿ ಏಡಮ್ಸ್, ವಿಲ್ಸನ್ ಮತ್ತಿತರ ಯುದ್ಧ ಸಮಿತಿಯ ಸದಸ್ಯರನ್ನು ಕಂಡನು. ಯುದ್ಧಕ್ಕಾಗಿ ಅವರಿಂದ ತಕ್ಕ ಆಣತಿಯನ್ನು ಪಡೆದನಲ್ಲದೆ, ತನ್ನಿಚ್ಛೆಯ ಒಬ್ಬ ಜನರಲ್‌ನನ್ನು ತನಗೊದಗಿಸುವಂತೆ ಕೇಳಿಕೊಂಡನು.

ಅದೇ ಮಧ್ಯಾಹ್ನ ಈ ಫ್ರೆಂಚ ಜನರಲನನ್ನು—ಮಾರ್ಕ್ವಿಸ್ ಲಾಫೇ (Marquis of Lafayelte)-ವಾಶಿಂಗ್‌ಟನ್ ಇದ್ದಲ್ಲಿಗೆ ಕಳುಹಲಾಯಿತು. ಈ ಅಧಿಕಾರಿಯನ್ನು ಅತ್ಯಂತ ಸೌಹಾರ್ದದಿಂದ ಬರ ಮಾಡಿಕೊಂಡ ವಾಶಿಂಗ್‌ಟನ್, "ನನ್ನ ಉಪಾಧಿಕಾರಿಗಳೆಲ್ಲ ನನ್ನ ಕುಟುಂಬದವರಂತೆಯೇ. ನಾವೆಲ್ಲರೂ ಒಂದೇ ತಾಯಿಯ ಮಕ್ಕಳು" ಎನ್ನುವಾಗ, ಈ ಫ್ರೆಂಚ ಸರದಾರನು ಹರ್ಷಾತಿಶಯದಿಂದ ಪುಳಕಿತನಾದನು. ಅವರಲ್ಲಿ ನಿಕಟ ಬಾಂಧವ್ಯವೇ ಮುಂದೆ ಬೆಳೆಯಿತು.

ಮರುದಿನ ಈತನನ್ನು ತನ್ನ ಗಾಡಿಯಲ್ಲಿ ಕುಳ್ಳಿರಿಸಿ ಎಲ್ಲ ವ್ಯವಸ್ಥೆಗಳನ್ನೂ ಈತನಿಗೆ ಜಾರ್ಜ್ ತೋರಿಸಿದನು. ಈ ಸೈನಿಕರ ತರಬೇತಿಯ ಅವ್ಯವಸ್ಥೆ ಮತ್ತು ಅಶಿಸ್ತಿನ ಸಂಪ್ರದಾಯಗಳನ್ನು ನೋಡುತ್ತ ಫ್ರೆಂಚ ಸರದಾರನು ಮ್ಲಾನವದನನಾದರೂ ತನ್ನ ಅಸಹನೆಯನ್ನು ತೋರದೆ, 'ಈ ಸೈನಿಕರಿಂದ ನಾನೇ ಕಲಿಯತಕ್ಕುದಿದೆ', ಎಂದು ಔದಾರ್ಯದ ಮಾತುಗಳನ್ನಾಡಿದನು.

ಅಂತೂ ಇಂಥ ಸೌಜನ್ಯದಿಂದ, ತನ್ನ ದೊಡ್ಡಮನಸ್ಸಿನ ಕಾರಣದಿಂದ ಈ ನೂತನ ಸರದಾರನೂ ಜನಪ್ರೀತನಾದನು. ಕೆಲವೇ ದಿನಗಳಲ್ಲಿ ಇವರೆಲ್ಲರ ಸೌಜನ್ಯ ಮತ್ತು ಪರಸ್ಪರ ಸಹಾಕಾರಗಳನ್ನು ಕಂಡ ಈತನು, "ಇವರೆಲ್ಲರೂ, ಮುಖ್ಯ, ನಿಮ್ಮ ಅಧಿಕಾರಿವರ್ಗವು ಮುಖಂಡರನ್ನೇ ಒಳಗೊಂಡಿದೆ" ಎನ್ನುವಂತಾಯಿತು.

ಅನೇಕವೇಳೆ ಈ ಫ್ರೆಂಚ ಸರದಾರನಿಗೆ ಇವರೊಡನೆ ಅವರಷ್ಟೇ ಲಘುವಾಗಿ ವರ್ತಿಸಲು ಆಗುತ್ತಿರಲಿಲ್ಲ. ಯಾವ ಸಂದರ್ಭದಲ್ಲೂ ಅವರು ಉತ್ಸಾಹಿತರಾಗಿಬಿಡುತ್ತಿದ್ದರು. ತಮ್ಮ ಪತಾಕೆಯ ಬದಲಾವಣೆಯ ಕಾರ್ಯಕ್ರಮದಲ್ಲೂ, ಯೂನಿಯನ್ ಜೇಕನ್ನು ತೆಗೆದುಹಾಕಿ, ಕೆಂಬಣ್ಣದ

ಮತ್ತು ಬಿಳಿಯ ಬರೆಗಳ ಮೇಲೆ ನೀಲಿ ಬಣ್ಣದ ಮೇಲೆ 13 ಚುಕ್ಕಿಗಳನ್ನು ಬರೆದ ನಿಶಾನೆಯನ್ನಂಗೀಕರಿಸುವಾಗಲಂತೂ ಇವರ ಹುಮ್ಮಸ್ಸು, ಉತ್ಸಾಹ ಮತ್ತು ಆನಂದಗಳು ಆ ಫ್ರೆಂಚ ಸೇನಾನಿಗೆ ತೀರ ವಿಚಿತ್ರವೆಂದು ತೋರಿದುವು.

ಹೌ ಮತ್ತು ಕಾರ್ನ್‌ವಾಲೀಸರು ಪೆನ್ಸಿಲ್ವೇನಿಯಾದತ್ತ ಮುಂಬರಿವಾಗ, ಬ್ರೇಂಡ್ವಿನ್‌ನ ಹತ್ತಿರ ಇವರನ್ನೆದುರಿಸಲು ಅಮೇರಿಕದ ಸೇನೆಯು ನಿಶ್ಚಯಿಸಿತು. ಸಪ್ತಂಬರ 11ರಂದು ನಡೆದ ಯುದ್ಧದಲ್ಲಿ ಅಮೇರಿಕದ ಸೇನೆಯು ಹಿಮ್ಮೆಟ್ಟಲೇಬೇಕಾಯಿತು. ಹೆಚ್ಚಿನಮಂದಿ ಯೋಧರನ್ನು ಚೆಸ್ಟರ್‌ಗೆ ಕತ್ತಲಾಗುವ ಮುಂಚೆಯೇ ಕಳುಹಿ, ಗ್ರೀನ್ ಕತ್ತಲಾದೊಡನೆ ತನ್ನ ಸೈನಿಕರನ್ನು ಹಿಮ್ಮೆಟ್ಟಿಸಿದನು. ಫಿಲಡೆಲ್ಫಿಯಾವನ್ನು ಇವರು ಕಳೆದುಕೊಂಡರು ಮತ್ತು ಹೌ ತನ್ನ ಸೇನೆಯೊಂದಿಗೆ ವಿಜಯಶಾಲಿಯಾಗಿ ಫಿಲಡೆಲ್ಫಿಯಾವನ್ನು ಪ್ರವೇಶಿಸಿದನು.

ಡಿಲಾವರ್‌ನದಿಯ ಉದ್ದಕ್ಕೂ ಇರುವ ಕೋಟೆಗಳನ್ನೆಲ್ಲ ವಶಪಡಿಸಿಕೊಳ್ಳುತ್ತ ಹೌ ಮುಂದರಿದನು. ಇತ್ತ ಸರ್ ಹೆನ್ರಿ ಕ್ಲಿಂಟನ್ ಕೂಡ ಹಡ್ಸನ್ ನದಿಯ ಉದ್ದಕ್ಕೂ ಭಯವನ್ನೇ ಹರಡುತ್ತಲಿದ್ದನು.

ಇಷ್ಟರಲ್ಲಿ ಅಕ್ಟೋಬರದ ಅಂತ್ಯ ಭಾಗದಲ್ಲಿ ಉತ್ತರದಿಂದ ಬುಗ್ವಾರ್ಯನ್‌ನ ಸೋಲಿನ ಸುದ್ದಿಯು ಬಂದು ಅಮೇರಿಕನರಲ್ಲಿ ಸ್ವಲ್ಪ ಆಸೆಯನ್ನು ಬಿತ್ತಿತು. ಬುಗ್ವಾರ್ಯನ ಸುಸಜ್ಜಿತ ಸೇನೆಯನ್ನು ಅನ್ನಾಹಾರವಿಲ್ಲದಂತೆ ಮಾಡಿ ಉಪವಾಸ ಹಾಕಿ ಸೋಲಿಸಲಾಗಿತ್ತು. ವಿಜೇತೃಗಳು ಬೆನಡಿಕ್ಟ್ ಆರ್ನಾಲ್ಡ್ ಮತ್ತು ಮೋರ್ಗನರಾಗಿದ್ದರು.

ಆದೇ ವರ್ಷಾಂತ್ಯದಲ್ಲಿ ಹೌ ಫಿಲಡೆಲ್ಫಿಯಾದಲ್ಲಿ ಬಹಳ ವಿಜೃಂಭಣೆಯಿಂದಲೂ ಸಂತಸದಿಂದಲೂ ಅಲಸನಾಗಿ ಕಾಲಕಳೆಯುತ್ತಿದ್ದನು. ಇತ್ತ ವೇಲ್ಲಿ ಜೋರ್ಜ್‌ನಲ್ಲಿ ತನ್ನ ಚೆಲ್ಲಾಪಿಲ್ಲಿಯಾದ ಸೈನ್ಯವನ್ನು ಒಟ್ಟುಗೂಡಿಸುತ್ತಲಿದ್ದ ಜಾರ್ಜ್ ವಾಶಿಂಗ್‌ಟನ್ ಈ ಚಳಿಗಾಲವನ್ನು ದೂಡುವ ಬಗೆ ಹೇಗೆ ಎಂದು ಚಿಂತಿಸುತ್ತಲಿದ್ದನು. ಅಪಯಶಸ್ಸು, ಸೋಲುಗಳು ಆತನನ್ನು ಹದಮಾಡಿದ್ದುವು. "ನನ್ನ ಸೈನಿಕರು ಬಟ್ಟೆ

ಬರೆಗಳಿಲ್ಲದೆ ನಗ್ನರಾಗಿದ್ದಾರೆ, ಉಪವಾಸಬಿದ್ದು ಬಳಲುತ್ತಿದ್ದಾರೆ," ಎಂದು ಈತನ ಪರವಾಗಿ ಹೇಮಿಲ್ಟನ್ ಕಾಂಗ್ರೆಸಿಗೆ ಪತ್ರಬರೆದನು.

ಇತ್ತ ತನ್ನ ಗಂಡನನ್ನು ಸಂತಯಿಸಲು ಮಾರ್ಥಾಳು ಬಂದಳು. ಇದರಿಂದ ತನ್ನ ದುಃಖವನ್ನು ಸ್ವಲ್ಪ ಮರೆಯುವಂತಾಯಿತು. ಆದರೆ ಹೌ ಮತ್ತು ಆತನ ಸೇನೆಯು ಈ ಅರ್ಧನಗ್ನ ಮತ್ತು ಅರೆಹೊಟ್ಟೆಯ ಸೈನಿಕರ ಮೇಲೆ ಬೀಳದಿದ್ದುದು ಅಮೇರಿಕದವರ ಪುಣ್ಯವೇ ಸರಿ, ಸೃಷ್ಟಿನಿಯಾಮಕನ ಆಟವೇ ಸರಿ.

1778ನೇ ವರ್ಷವು ಬಂತು. ಇದರೊಡನೆ ಇವರ ಸೈನ್ಯಕ್ಕೆ ಆಹಾರ ಬಟ್ಟೆಗಳೂ ಸರಬರಾಯಿ ಆದುವು. ಅಷ್ಟೇ ಅಲ್ಲದೆ, ಬೇರನ್ ವೊನ್ ಸ್ಟ್ಯೂಬೆನ್ ಎಂಬಾತನು ಸೈನಿಕರಿಗೆ ಕವಾಯತು ಕಲಿಸಲು ನಿಯೋಜಿತನಾದನು. ಮೇ 1ನೇ ತಾರೀಕಿನ ದಿನ ಲಾಫೇಯು ವಾಶಿಂಗ್‌ಟನ್ ಇದ್ದಲ್ಲಿಗೆ ಬಂದು, "ಗೆಳೆಯಾ ಇದೋ ಅತ್ಯಂತ ಸಮಾಧಾನಕರವಾದ ವಾರ್ತೆಯಿದೆ, ಇದೀಗ ಫ್ರಾನ್ಸ್ ಮತ್ತು ಅಮೇರಿಕಗಳು ಒಂದಾಗಿವೆ" ಎಂಬ ಸುವಾರ್ತೆಯನ್ನು ಹೇಳಿದನು.

ನಶಿಸುತ್ತಿದ್ದ ಧೈರ್ಯ ಸ್ಥೈರ್ಯಗಳು ಪುನಃ ಚೇತರಿಸಿದುವು. ಫ್ರಾನ್ಸ್ ಅರಸ ಲುಯಿಯು ಹಡಗನ್ನೂ, ಆಹಾರ ಬಟ್ಟೆಗಳನ್ನೂ ಕಳುಹಿಸಲು ಒಪ್ಪಿದುದರಿಂದ ಅಮೇರಿಕನರಿಗೆ ಜೀವ ಬಂದಂತಾಯಿತು.

ಈ ಸಂತೋಷದ ಸುದ್ದಿಯು ಬಂದುದಕ್ಕಾಗಿ ಮೇ 6, 1778ರಲ್ಲಿ ವೇಲ್ಲಿ ಫೋರ್ಜ್‌ನಲ್ಲಿ ವಾಶಿಂಗ್‌ಟನ್ ಮತ್ತು ಆತನ ಸೈನಿಕರು ಭಗವಂತನಿಗೆ ಪ್ರಾರ್ಥನೆ ಸಲ್ಲಿಸಿ ಆ ದಿನವನ್ನು ಅತಿ ವಿಜೃಂಭಣೆಯಿಂದ ಆಚರಿಸಿದರು. ದೂರದಲ್ಲಿನ ಫ್ರಾನ್ಸ್ ಇವರೊಡನೆ ಸಹಕರಿಸುವ ಆಸೆಯು ಫಲಿಸುವುದರಲ್ಲಿತ್ತು.

ಅಧ್ಯಾಯ ೧೩

ವಾಶಿಂಗ್‌ಟನ್‌ನ ಉಪಾಧಿಕಾರಿಯು ಅಲ್ಲೇ ಶಿಖರದ ಹತ್ತಿರ ತಯಾರಾಗಿ ನಿಂತು, "ಅಧಿಕಾರಿಗಳೆಲ್ಲ ಸೇರಿದ್ದಾರೆ ಕರ್ನಲ್" ಎಂದು ಮೆಲ್ಲಗೆ ಹೇಳಿದನು.

'ಇನ್ನೊಂದು ಕ್ಷಣದಲ್ಲಿ ಬರುತ್ತೇನೆ', ಎಂದು ಉತ್ತರಿಸಿದ ವಾಶಿಂಗ್‌ಟನ್ ಮೇಜಿನ ಮೇಲಿರುವ ಕಾಗದ ಪತ್ರಗಳನ್ನೆಲ್ಲ ಅವಲೋಕಿಸಿದನು.

ವಿಲಿಯಮ್ ಹೌ ಇಂಗ್ಲಂಡಿಗೆ ಹಿಂದಿರುಗಿ ಹೋಗಿದ್ದನು. ಈಗ ಹೆನ್ರಿಕ್ಲಿಂಟನನೇ ಇಂಗ್ಲಿಷ್ ಸೈನ್ಯದ ಮುಖ್ಯಾಧಿಕಾರಿ. ಇದೇ 6 ದಿನಗಳ ಹಿಂದೆ ಈತನು ಫಿಲಡೆಲ್ಫಿಯಾವನ್ನು ಬಿಟ್ಟು ನ್ಯೂಜರ್ಸಿಯತ್ತ ತೆರಳಿದ್ದನು. ಇದನ್ನು ಕೇಳಿದೊಡನೆ ವಾಶಿಂಗ್‌ಟನ್‌ನೂ ತನ್ನ ಸೇನೆಯನ್ನು ವೇಲ್ಲಿಫೋರ್ಜ್‌ನಿಂದ ಮುಂದರಿಸಿದನು. ಏನುಮಾಡಬೇಕೆಂಬುದರ ತೀರ್ಮಾನಕ್ಕೆ ಬರುವುದರ ಮುಂಚೆ ಪ್ರತಿಯೊಬ್ಬನನ್ನೂ ಈತನು ಪ್ರಶ್ನಿಸಿ ಬಹುಮತದಂತೆ ವೈರಿಯನ್ನು ಯುದ್ಧದಲ್ಲಿ ಎದುರಿಸುವುದೆಂದೇ ತೀರ್ಮಾನಿಸಿದ್ದನು.

ಎಲ್ಲವೂ ಸಿದ್ಧವಾಗಿತ್ತು. ಆಜ್ಞೆಗಳು, ಮುಂಬರಿವ ತಂತ್ರಗಳು ಮತ್ತು ವಿವಿಧ ಅಧಿಕಾರಿಗಳಿಗೆ ಹಂಚಿಕೊಡಲಾದ ಕೆಲಸಗಳ ವಿವರಗಳನ್ನೊಳಗೊಂಡ ಕರಡುಗಳಲ್ಲವೂ ಸಿದ್ಧವಾಗಿದ್ದುವು.

ಜೂನ್ 28 ರಂದು ಅತ್ಯಧಿಕ ಸೆಕೆ ದಾಹಗಳ ಸನ್ನಿವೇಶದಲ್ಲಿ ಈತನ ಸೇನೆಯೂ, ಕ್ಲಿಂಟನನ ಸೇನೆಯೂ ಎದುರಾದುವು. ಘೋರ ಯುದ್ಧ ನಡೆದು ಇತ್ತಂಡದ ಜನರೂ ಕಂಗಾಲಾದರೂ ದಿನಾಂತ್ಯದಲ್ಲಿ ಯಾವನೂ ತಾನು ವಿಜೇತೃ ಎನ್ನುವಂತಿರಲಿಲ್ಲ, ಆ ದಿನದ ಯುದ್ಧದ ಪರಿಸ್ಥಿತಿ. ಆದರೂ, ತನ್ನ ವಿಶೇಷ ತರಬೇತಿ ಇಲ್ಲದ ಸೈನಿಕರು ಒಂದು ದಿನ ಖಡಾಖಂಡಿತ ಯುದ್ಧವನ್ನು ಇಂಗ್ಲಿಷ ಸೈನಿಕರೊಡನೆ ಮಾಡಿದರಲ್ಲ! ಎಂಬ ಅಭಿಮಾನವು ವಾಶಿಂಗ್‌ಟನ್‌ನನ್ನು ಉತ್ತೇಜನಗೊಳಿಸಿದ್ದಿತು.

ಹೀಗೆಯೇ ಒಂದು ದಿನ ಯಾವನೋ ಆಂತನಿವೈನ್ ಎಂಬ ಒಬ್ಬನು ಈತನೊಡನೆ ಒಂದು ಪ್ರಶ್ನೆಯನ್ನು ಕೇಳಿದನು, "ಜನರಲರೇ ನಿಮ್ಮದೊಂದೇ ಆಸೆಯನ್ನು ಆರಸ ಲುಯಿಯು ತೀರಿಸುವನೆಂದಿದ್ದರೆ ನೀವು ಏನನ್ನು ಕೇಳಲಿಚ್ಛಿಸಿರುವಿರಿ?".

ಪಟಕ್ಕನೆ ಉತ್ತರಬಂದಿತು, "ನನ್ನ ಪ್ರಾರ್ಥನೆಯೋ ನಮಗೊಂದು ನಾವೆಯನ್ನೊದಗಿಸಲೆಂದು, ಅಷ್ಟೆ".

ನಾವೆಯನ್ನೊದಗಿಸುಪಷ್ಟು ಹಣವು ಕಾಂಗ್ರೆಸಿನ ಹತ್ತಿರವಿರಲಿಲ್ಲ ವೆನ್ನುವುದು ನಿಜ. ಆದರೂ ಕೆಲವು ಧೀರರು ಇವರಿಗೆ ಒತ್ತೆಕೊಟ್ಟ ಯುದ್ಧ ನಾವೆಗಳಲ್ಲಿ ತುಂಬಾ ಶ್ರಮಿಸಿದ್ದರು, ಅಮೇರಿಕಕ್ಕಾಗಿ ದುಡಿದಿದ್ದರು. ಇವರಲ್ಲೋರ್ವನೇ ಜೋನ್ ಪಾಲ್ ಜೋನ್ಸ್.

ಆದರೆ ಪಾಲ್ ಜೋನ್ನೊಬ್ಬನೇ ಸಾಲದಷ್ಟೆ. ಫ್ರಾನ್ಸ್ ಎಲ್ಲಾದರೂ ಇಂಗ್ಲಿಷ್ ನಾವೆಗಳನ್ನು ನ್ಯೂಯಾರ್ಕ್ ರೇವಿನಿಂದ ತಳ್ಳುವಷ್ಟು ಸಮರ್ಥ ನಾವೆಯನ್ನು ಒತ್ತೆಯಾಗಿಕೊಟ್ಟರೆ ಸಾಕೆನಿಸಿತ್ತು ಜಾರ್ಜನಿಗೆ.

1778 ಬೇಸಗೆಯಲ್ಲೊಂದು ದಿನ ವಾಶಿಂಗ್‌ಟನ್ ಅವಸರವಸರವಾಗಿ ಲಾಫೇಯನ್ನು ಕರೆದು, ಸಂತಸದಿಂದ ಹುಚ್ಚು ಹಿಡಿದವರಂತೆ ಉದ್ಗಾರತೆಗೆದನು, “ನೋಡಪ್ಪ, ಎಡ್ಮಿರಲ್ ಡಾ ಇಸ್ಟಾಯಿ Admiral D' Estaineಯು ಫ್ರೆಂಚ ನಾವೆಯೊಂದಿಗೆ ಇತ್ತ ಬರುತ್ತಿರುವನೆಂಬ ವಾರ್ತೆ ಬಂದಿದೆ”.

ಸಂತಸದಿಂದಲೂ ಅಭಿಮಾನದಿಂದಲೂ ಪುಲಕಿತನಾದ ಲಾಫೇಯು ಮುಂದಿನ ವಿಜಯಗಳ ಕನಸನ್ನು ತಾನೂ ಕಂಡನಲ್ಲದೆ ಇತರರಿಗೂ ವಿವರಿಸ ಹತ್ತಿದನು. ನ್ಯೂಪೋರ್ಟನ್ನು ಈ ಯುದ್ಧ ಹಡಗವು ಹಿಡಿಯಲು ಅಶಕ್ತವಾಗಿ ಹಾಗೆಯೇ ವೆಸ್ಟ್ ಇಂಡೀಸಿಗೆ ಹೊರಟು ಹೋಯಿತು.

ಇದರಿಂದಲಂತೂ ಲಾಫೇಯು ನಿರಾಸೆಯಿಂದ ಬೇನೆಗೀಡಾದನು. ಈತನ ಮನೋವ್ಯಾಧಿಯು ಅಧಿಕವಾಗಿ ಈತನು ತನ್ನ ದೇಶಕ್ಕೆ ಮರಳಲೇ ಬೇಕಾಯಿತು. ವಾಶಿಂಗ್‌ಟನ್‌ನಿಗೆ ಇದೊಂದು ಘೋರ ನಿರಾಸೆ ಮತ್ತು ತುಂಬಲಾರದ ವೈಯಕ್ತಿಕ ನಷ್ಟವೇ ಆಗಿತ್ತು.

1778ರಲ್ಲಿ ಮಿಸಿಸಿಪಿ ನದಿಯಲ್ಲಿನ ಕಸ್ಕಾಸ್ಕಿಯಾ ಎಂಬ ರೇವನ್ನು ಮಾತ್ರ ವಶಪಡಿಸಿಕೊಳ್ಳುವುದರಲ್ಲಿ ಅಮೇರಿಕನರು ಜಯಶೀಲರಾದರು.

1779ರಲ್ಲಿ ಕೂಡ ಸ್ಟೋನಿಪ್ಯೊಂಟ್, ಎಂಬ ಹಡ್ಸನ್ ನದಿಯ ಮೇಲಣ ಒಂದು ಕೋಟೆಯನ್ನು ವಶಪಡಿಸಿಕೊಳ್ಳಲು ಇವರು ಶಕ್ತರಾದರು. ಇದರ ನಂತರ ಒಂದುದಿನ ಲೀಯು ಪಾಲ್‌ಸ್‌ಹುಕ್, ನ್ಯೂಜರ್ಸಿ ಮೊದಲಾದೆಡೆ ತನ್ನ ಯೋಧರೊಡನೆ ಧಾವಿಸಿ ಕೊಳ್ಳೆಹೊಡೆದು ಸಾಮಾನ್ಯ 150 ಮಂದಿ ಕೈದಿಗಳನ್ನು ತಂದನು. ಹಾಗೆಯೇ

ಜೋನ್ ಸುಲಿವಾನನ ದಂಡ ಯಾತ್ರೆಯೂ ಸೆಸ್ಕ್ಯಾನಾ ನದೀ ಕಣಿವೆಯಲ್ಲಿ ಯಶಸ್ವಿಯಾಯಿತು. ಇದನ್ನು ಆ ತನಕ ಇಂಡಿಯನರೇ ವಶದಲ್ಲಿಟ್ಟುಕೊಂಡಿದ್ದರು.

ಸಪ್ತಂಬರದಲ್ಲಾದರೋ ಮತ್ತೂ ಮತಿಗೆಡಿಸುವ ಪ್ರಸಂಗಗಳು ನಡೆದುವು. ಕಾಮ್ಟೆ ಡಾ| ಇಸ್ಟಾಯಿಯು ವೆಸ್ಟ್ ಇಂಡೀಸ್ ದ್ವೀಪಗಳಲ್ಲಿ ಅನೇಕ ವಿಜಯಗಳನ್ನು ಪಡೆದರೂ ಸವಾನ್ನಾ ಪಟ್ಟಣದತ್ತ ಧಾಳಿಯಿಟ್ಟಾಗ ಅಲ್ಲಿ ಆತನೂ ಆತನೊಡನೆ ಸಹಕರಿಸಿದ ಎಲ್ಲಾ ಅಮೇರಿಕನರೂ ಸೋಲಿಸಲ್ಪಟ್ಟರು. ಅತ್ತ ಕ್ಲಿಂಟನನ ಸೈನ್ಯವು ಸ್ಟೇಟನ್ ದ್ವೀಪದಿಂದ ಚಾರ್ಲ್ಸ್‌ಟನ್ನಿನ ವಿರುದ್ಧ ಯುದ್ಧ ಹೂಡಲು ಹೊರಟಿತು. ಅಂತೂ ದಕ್ಷಿಣದಲ್ಲೆಲ್ಲಾ ಸೋಲನ್ನೇ ಅಮೇರಿಕನರು ಅನುಭವಿಸಿದರು.

ಆದರೆ ಸಪ್ತಂಬರ **1779**ರಲ್ಲಿ ಜೋನ್ ಪಾಲ್ ಜೋನ್ಸ್ ಫ್ರಾನ್ಸಿನಲ್ಲಿದ್ದು ಅಲ್ಲಿಂದ ಸಹಾಯವನ್ನು ಯಾಚಿಸಿ ಒಂದು ಹಳೆಯ ಹಡಗನ್ನು ಪಡೆದನು. ಇದನ್ನು ಆತನು ಬೊನ್ಹೋಮ್ ರಿಚಾರ್ಡ್ ಎಂದು ನಾಮಕರಣ ಮಾಡಿ, ಇಂಗ್ಲಿಷ್ ಯುದ್ಧ ನಾವೆಯಾದ ಪರ್ಷಿಯಾದೊಡನೆ ಹೋರಾಡಿ ಅದ್ಭುತ ವಿಜಯವನ್ನು ಪಡೆದನು. ಇದರಿಂದಾಗಿ ಫ್ರಾನ್ಸ್‌ನಲ್ಲಿ ಉತ್ಸಾಹವೂ ಇತರ ಐರೋಪ್ಯ ಜನಾಂಗಗಳಲ್ಲಿ ಆಶ್ಚರ್ಯವೂ ಉದಿಸುವಂತಾಯಿತು.

ಇಷ್ಟರಲ್ಲಿ ಚಳಿಯನ್ನು ಕಾಯಿಸುತ್ತ ಅಗ್ಗಿಷ್ಟಿಕೆಯ ಮುಂದೆ ಕುಳಿತ ವಾಶಿಂಗ್‌ಟನ್ ಈ ಚಳಿಗಾಲವನ್ನು ಹೇಗೆ ಕಳೆಯತಕ್ಕುದೆಂದು ಯೋಚಿಸುತ್ತಿದ್ದನು. ಆಹಾರಕ್ಕಾಗಿ ಅವನ ಯೋಧ್ಧರು ಹತ್ತಿರದ ಹಳ್ಳಿಗಳ ಮೇಲೆ ಹಲ್ಲೆ ನಡೆಸತಕ್ಕ ಪ್ರಸಂಗವೇ ಬಂದಂತಾಯಿತು. ಆಹಾರವನ್ನು ಕೊಳ್ಳುವಷ್ಟು ಹಣವನ್ನು ಕಾಂಗ್ರೆಸ್ ಇವರಿಗೆ ಕೊಟ್ಟಿರಲಿಲ್ಲ.

ಇತ್ತ ಬೆನೆಡಿಕ್ಟ್ ಆರ್ನೋಲ್ಡ್‌ನ ವಿಚಾರಗಳೂ ಈತನಿಗೆ ಬೇಸರವನ್ನು ಹುಟ್ಟಿಸಿದ್ದವು. ಆರ್ನೋಲ್ಡನ ವೈಭವಯುತ ಜೀವನವು ಕಾಂಗ್ರೆಸ್ಸಿಗರನ್ನೂ ಫಿಲಡೆಲ್ಫಿಯಾದವರನ್ನೂ ಸಂದೇಹ ಗ್ರಸ್ತರನ್ನಾಗಿ

ಮಾಡಿತ್ತು. ಆತನನ್ನು ತಪ್ಪಿತಸ್ಥನೆಂದು ಸಾರಿ ಈತನನ್ನು ಮುಖ್ಯಾಧಿಕಾರಿಯು ಶಿಕ್ಷಿಸತಕ್ಕುದೆಂದೂ ವಿಧಿಸಲಾಯಿತು.

ಇಷ್ಟರಲ್ಲೊಂದು ದಿನ ಮೂರು ಜನ ಸವಾರರು ಈತನ ಡೇರೆಗೆ ಬಂದಿಳಿದರು. ಇವರಲ್ಲೊಬ್ಬನು ಜಿಗಿಯುತ್ತ ಮೇಲಕ್ಕೆ ಹೋಗಿ ವಾಶಿಂಗ್‌ಟನ್‌ನನ್ನು ಸಂಧಿಸಿದನು. ಅವನೇ ಹಿಂದಿನ ಲಾಫೇಯಾಗಿದ್ದನು. ಇಬ್ಬರು ಗೆಳೆಯರೂ ಕೆಲವುಕಾಲ ಮೌನವಾಗಿದ್ದರು, ಮಾತೇ ಹೊರಡಲಿಲ್ಲ. "ನನಗೊಬ್ಬ ಮಗನು ಜನಿಸಿದ್ದಾನೆ, ಆತನ ಹೆಸರೇನು ಹೇಳಬಲ್ಲಿರಾ? ಅವನ ಹೆಸರು ಜೊರ್ಜ್ ವಾಶಿಂಗ್‌ಟನ್ ಲಾಫೇ" ಎಂದು ತನ್ನ ಮಗನ ಜನನದ ಶುಭವಾರ್ತೆಯನ್ನು ತಿಳುಹಿದನಂತರ ಲಾಫೇಯು ಫ್ರಾನ್ಸಿನಿಂದ ಹಲವು ಸುದ್ದಿಗಳನ್ನು ತಿಳುಹಿದನು. ಎಡ್ಮಿರಲ ಡಾ ಟಾರ್ನೇಯು ಕಾಮ್ಟೆ ಡಾ ರೂಚೋವಿನೊಡನೆ ದೊಡ್ಡ ಸೈನ್ಯವನ್ನು ಹಿಡಿದುಕೊಂಡು ಹೊರಟಿದ್ದನು. ಈತನು ಸದ್ಯವೇ ಅಮೇರಿಕವನ್ನು ಸೇರಲಿರುವನು ಎಂಬುದೇ ಇದರ ಸಾರಾಂಶ.

ಇತ್ತ ಚಾರ್ಲ್ಸ್‌ಟನ್ ಕೂಡ ಕೈಬಿಟ್ಟು ಹೋಗಿತ್ತು. ಇದರನಂತರ ಲಾರ್ಡ್ ಕಾರ್ನ್‌ವಾಲೀಸೊಬ್ಬನೇ ಕೆರೋಲಿನಾಸನ್ನು ಸದೆಬಡಿಯಲು ಸಾಕೆಂದು ಭಾವಿಸಿ ಹೆನ್ರಿ ಕ್ಲಿಂಟನನು ನ್ಯೂಯಾರ್ಕಿಗೆ ಮರಳಿದನು.

ಕಾಮ್ಟೆ ಡಾ ರೂಚೋವನ್ನು ಸಪ್ತಂಬರದಲ್ಲಿ ಹಾರ್ಟ್‌ಫೋರ್ಡ್‌ನಲ್ಲಿ ವಾಶಿಂಗ್‌ಟನ್ ಭೇಟಿಯಾದನು. ವಾಶಿಂಗ್‌ಟನ್ ನ್ಯೂಯಾರ್ಕನ್ನು ಪಡೆಯಲೇಬೇಕೆಂದು ಇಚ್ಛಿಸಿದ್ದನೆಂಬುದನ್ನು ಈ ಭೇಟಿಯಿಂದ ಫ್ರೆಂಚ ಸರದಾರನು ತಿಳಿದಿದ್ದನು. ಇದಕ್ಕೆ ಖಂಡಿತವಾಗಿಯೂ ಮತ್ತೊಂದು ನಾವೆಯು ಅಗತ್ಯವಿತ್ತು. ಇಂಥ ನಾವೆಯು ಇಲ್ಲವಲ್ಲಾ ಎಂಬ ಕಳವಳವು ಲಾಫೇಗೂ ಉಂಟಾಯಿತು.

ತನ್ನ ಡೇರೆಗೆ ಹಿಂದಿರುಗುವಾಗ ವಾಶಿಂಗ್‌ಟನ್ ಪಶ್ಚಿಮ ತುದಿಯಲ್ಲಿದ್ದ (West Point) ಆರ್ನೋಲ್ಡನ್ನು ಭೇಟಿಯಾದನು. ಅಲ್ಲಿ ಸೇವಕನು ಒಳಗೆ ಕರದುಕೊಂಡು ಹೋದರೆ ಅಲ್ಲಿ ಹೇಮಿಲ್ಟನನ್ನು ಕಂಡು ಚಕಿತನಾದನು.

'ಇದೇನಾಶ್ಚರ್ಯ! ಭಗವಂತನ ಹೆಸರಿನಲ್ಲೇನು ನಡೆದಿದೆ ಇಲ್ಲಿ?' ಎಂದು

ಜಾರ್ಜ್ ಉದ್ಗಾರ ತೆಗೆದರೆ, ಜ್ವರದಿಂದಲೆಂಬಂತೆ ಹೇಮಿಲ್ಟನ್ ನಡುಗುತ್ತ, "ಆರ್ನಾಲ್ಡ್ ವಿಶ್ವಾಸದ್ರೋಹಿ, ಆತನು ಇದನ್ನೆಲ್ಲಾ ವೈರಿಗೆ ಮಾರಿ ಬ್ರಿಟಿಶ್ ಹಡಗದಲ್ಲಿ ಓಡಿಹೋಗಿದ್ದಾನೆ" ಎಂದನು.

ಅಲ್ಲೇ ಕ್ಷಣಕಾಲ ಕಣ್ಣುಮುಚ್ಚಿ ವಾಶಿಂಗ್‌ಟನ್ ಆಲೋಚಿಸಿ ಅಲ್ಲಿನಡೆದ ನಿಜಸ್ಥಿತಿಯನ್ನು ಅರಿತುಕೊಳ್ಳಲು ಯತ್ನಿಸಿದನು. ಆರ್ನಾಲ್ಡ್‌ನ ಸಾಧನೆಯನ್ನು ಕಾಂಗ್ರೆಸ್ ಅಭಿನಂದಿಸಿದ್ದಿಲ್ಲ, ಆತನೂ ಬಹಳ ಖರ್ಚುಗಾರ ಮತ್ತು ಕೇವಲ ಸ್ವಾರ್ಥಿ, ಸಾಲದ ಹೊರೆಯೂ ಹೆಚ್ಚುತ್ತಲಿತ್ತು. ಕೊನೆಗೆ ಈತನಿಗೆ ಅವಮಾನವೂ ಆಯಿತೆಂದರೆ ಇಂಥವನು ಲಂಚಕ್ಕೆ ಕೈಗೊಟ್ಟು ಓಡಿಹೋದುದರಲ್ಲಿ ಆಶ್ಚರ್ಯವಿದೆಯೆ? ಆದರೆ, ಈ ಬಗ್ಗೆ ಹೃದಯದಲ್ಲಿ ನಡುಕ ಹುಟ್ಟುತ್ತಲಿದ್ದರೂ ಹಡ್ಸನ್ ನದಿಯನ್ನು ವೈರಿಯಿಂದ ಕಾಪಾಡಲು ಅವಶ್ಯವಾಗಿಯೂ ಈ ವೆಸ್ಟ ಪ್ಯೊಂಟ್‌ನ್ನು ರಕ್ಷಿಸತಕ್ಕುದೆಂಬುದನ್ನು ನಿರ್ಧರಿಸಿದನು.

1781ರಲ್ಲಿ ಯುದ್ಧ ಕ್ಷೇತ್ರಗಳು ದಕ್ಷಿಣದತ್ತ ವ್ಯಾಪಿಸಹತ್ತಿದುವು. ಅಲ್ಲಿ ನೆಥೆನೀಲ್ ಗ್ರೀನ್‌ನು ಹಿಂದಿನ ಸಹವರ್ತಿ ಮತ್ತು ವಿಶ್ವಾಸ ದ್ರೋಹಿಯಾದ ಜನರಲ್ ಆರ್ನೋಲ್ಡ್‌ನನ್ನೇ ಇದಿರಿಸತಕ್ಕುದಿತ್ತು. ಈ ವಿಶ್ವಾಸಘಾತಕಿಯು ಸಿಕ್ಕಾಬಟ್ಟೆ ಹಳೆಯ ವಸಾಹತುಗಳನ್ನು ಸೂರೆ ಗೈಯುತ್ತಲಿದ್ದನು. ಇಷ್ಟರಲ್ಲಿ ಒಂದು ಬಿರುಗಾಳಿಯು ಬ್ರಿಟಿಷ್ ನಾವೆ ಯನ್ನು ಚೆಲ್ಲಾಪಿಲ್ಲಿಯಾಗಿ ಚೆದರಿ ಹಾಕಿತ್ತು. ಇದನ್ನು ಕೇಳಿದೊಡನೆ ಲಾಫೇಯನ್ನು ವರ್ಜೀನಿಯಕ್ಕೆ ಕಳುವುದೆಂದು ನಿಶ್ಚಯಿಸಿ ಜಾರ್ಜನು ಅಂತೆಯೇ ಆಜ್ಞಾಪಿಸಿದನು. ಆತನು ಅಲ್ಲಿ ಹೋಗಿ ಫ್ರೆಂಚ ನಾವೆಯಿಂದ ತಕ್ಕ ಸಹಾಯವನ್ನು ಪಡೆಯಬೇಕಿತ್ತು

ಲಾಫೇಯು ಅತ್ಯಂತ ಉತ್ಸಾಹದಿಂದ 1200 ಮಂದಿಯೊಡನೆ ಮುಂದರಿಯುತ್ತಾ ಕಾರ್ನ್‌ವಾಲೀಸನ ಹತ್ತಿರ ಬಂದನು.

ನೇರಾದ ಯುದ್ಧಕ್ಕೆ ತನ್ನ ಸೈನ್ಯ ಸಾಲದೆಂದು ಎಣಿಸಿದ ಈ ಸೇನಾ ನಿಯು ಬೆಟ್ಟ,ಕಾಡುಗಳಲ್ಲಿ ಕಾರ್ನ್‌ವಾಲೀಸನೊಡನೆ ಕಣ್ಣು ಮುಚ್ಚಾಲೆ ಯಾಡುತ್ತ ಆಂಥೊನಿ ವೈನ್ ತನ್ನೊಡನೆ ಸೇರಿಕೊಳ್ಳುವ ಸಂದರ್ಭ ವನ್ನೇ ಇದಿರು ನೋಡುತ್ತಿದ್ದನು.

ಇತ್ತ ನ್ಯೂಯಾರ್ಕನ್ನು ಹಿಡಿಯಲು ವಾಶಿಂಗ್‌ಟನ್ ಯತ್ನಿಸುತ್ತಿದ್ದನು. ಎಡ್ಮಿರಲ್ ಡಾ ಬಾರ್‍ರಾಸ್ ಇಷ್ಟರಲ್ಲಿ ಅಮೇರಿಕದಲ್ಲಿದ್ದ ಫ್ರೆಂಚ ನಾವೆಯ ಮುಖಂಡನಾಗಿ ಬಂದಿಳಿದನು. ಮತ್ತೊಂದು ನಾವೆಯು ಅಷ್ಟರಲ್ಲೇ ವೆಸ್ಟ್ ಇಂಡೀಸ್ ದ್ವೀಪಗಳಿಂದ ಉತ್ತರಾಭಿಮುಖವಾಗಿ ಕಾಮ್ಟೇ ಡಾ ಗ್ರಾಸ್‌ನ ನೇತೃತ್ವದಲ್ಲಿ ಹೊರಟಿತ್ತು. ಇವೆರಡು ನಾವೆಗಳನ್ನು ಸೇರಿಸಿ ಫ್ರೆಂಚರು ಹೋರಾಡಲು ನಿಶ್ಚಯಿಸಿದ್ದರು. ಇವರ ಸಹಾಯವನ್ನು ನ್ಯೂಯಾರ್ಕಿನ ವಿಮೋಚನೆಗೆ ಉಪಯೋಗಿಸಲೆ? ಇಲ್ಲಿ ವರ್ಜೀನಿಯಾವನ್ನು ಮುಕ್ತಗೊಳಿಸಲು ಉಪಯೋಗಿಸಲೆ? ಎಂದು ವಾಶಿಂಗ್‌ಟನ್ ಯೋಚಿಸುತ್ತಲಿದ್ದನು.

ಇಷ್ಟರಲ್ಲಿ ಕಾರ್ನವಾಲೀಸ್ ಲಾಫೇಯಿಂದ ಕಷ್ಟಕ್ಕೀಡಾಗಿ ಪೂರ್ವಕ್ಕೆ ಸರಿದಿದ್ದನು. ಇವನ ಸಹಾಯಕ್ಕೆ ಕ್ಲಿಂಟನನು ಒಂದು ಪಂಗಡವನ್ನು ಕಳುಹಿಸಿದ್ದನು. ಇದನ್ನು ಹೇಗಾದರೂ ನಿಲ್ಲಿಸಬೇಕೆಂದು ವಾಶಿಂಗ್‌ಟನ್ ತೀರ್ಮಾನಿಸಿದ್ದನು. ಈಚೋ ಆದರೋ ತನ್ನ ಸೇನೆಯನ್ನು ದಕ್ಷಿಣಕ್ಕೆ ಹೊರಡಿಸಿದ್ದನು. ಅದೇ ವೇಳೆ ನ್ಯೂಯಾರ್ಕಿನ ಮೇಲಿನ ಧಾಳಿಯು ಕೆಲಕಾಲದ ನಂತರ ನಡೆಯತಕ್ಕದೆಂದು ತೋರಿಸಲು ವಾಶಿಂಗ್‌ಟನ್ ತಾನಿಳಿದಲ್ಲೇ ಬಹಳ ಕಾಲ ಉಳಿಯುವ ಏರ್ಪಾಡುಗಳನ್ನು ಮಾಡಲನುವಾದನು, ಮತ್ತು ಮೋಸದ ವಾರ್ತೆಗಳನ್ನು ಹರಡುತ್ತಲೇ ಬಂದನು.

ಇತ್ತ ಒಳಗಿಂದೊಳಗೇ ಇವರು ಬಹಳ ದ್ರುತಗತಿಯಿಂದ ವಿಲಿಯಮ್ಸ್ ಬರ್ಗಿಗೆ ಬಂದರು. ಇವರನ್ನು ನೋಡಿದೊಡನೆ ಎಲ್ಲರಲ್ಲೂ ಆಶ್ಚರ್ಯ ಉತ್ಪನ್ನವಾಯಿತು "ಸ್ವಾಗತ, ಸುಪ್ರಭಾತ"ಗಳ ಸುರಿಮಳೆಯೂ ಆಯಿತು ಅದೇ ಸಮಯ, ಫ್ರೆಂಚನಾವೆಯೂ ಚೇಸ್ಪೀಕ್(Cheaspeke) ಗೆ ಬಂದು ತಂಗಿತ್ತು ಹೀಗೆ ಕೋರ್ನ್‌ವಾಲೀಸ್ ತನಗರಿಯದಂತೆಯೇ ಸುತ್ತುವರಿಯಲ್ಪಟ್ಟನು. ಇದನ್ನರಿತ ಮೇಲಂತೂ ಎರಡೂ ಪಕ್ಷಗಳಲ್ಲಿ ತ್ವೇಷ ಮತ್ತು ಉದ್ವೇಗಗಳು ಹೆಚ್ಚಿದುವು, ಯುದ್ಧಾರಂಭವಾಗಿ ಒಂದು ಪಕ್ಷವು ಮತ್ತೊಂದನ್ನು ಸುತ್ತುವರಿದು ಹಣ್ಣು ಮಾಡಲು ಹವಣಿಸುತ್ತಿತ್ತು. ಕೊನೆಗೆ ಅಕ್ಟೋಬರ್ 11ರಂದು ಕೊನೆಯ ರಕ್ಷಾಪ್ರಾಕಾರ

ವನ್ನು ಭೇದಿಸಲಾಯಿತು. ಲಾಫೇಯು ಒಂದು ದಿಕ್ಕಿನಿಂದಲೂ, ಹೇಮಿಲ್ಟನ್ ಮತ್ತೊಂದು ದಿಕ್ಕಿನಿಂದಲೂ ಮುಂದುವರಿದು ವಿಜಯವನ್ನು ಪೂರ್ತಿಯಾಗಿ ಸಾಧಿಸಿದರು. ಈ ವಿಜಯದಿಂದಲಂತೂ ಅಮೇರಿಕನರ ಪ್ರತಿಷ್ಠೆಯು ಹೆಚ್ಚಿತು.

ಸರಿ, ಇದರನಂತರ ಹಲವು ಶಾಂತಿಸೂಚಕ ದರ್ಶನ, ಸಂದರ್ಶನಗಳು ಅನಿವಾರ್ಯವಾಗಿ ನಡೆದುವು. ಲಾಫೇಯ ಸಹಾಯವನ್ನು ಪಡದೇ ವಾಶಿಂಗ್‌ಟನ್ ಶಾಂತಿಯ, ಒಪ್ಪಂದದ ಶರ್ತಗಳನ್ನು ಬರೆಸಿ ಕಳುಹಿದನು. ಅಕ್ಟೋಬರ್ 19ರಂದು ಎರಡು ಸೈನ್ಯಗಳೂ ಸಾಲಾಗಿ ನಿಂತುವು. ಲಾರ್ಡ್ ಕಾರ್ನ್‌ವಾಲೀಸ್ ತನ್ನ ಖಡ್ಗವನ್ನು ಶರಣುಬಂದುದರ ಸೂಚಕವಾಗಿ ಕಳುಹಲು ಆದನ್ನು ಬೆಂಜಮಿನ್ ಲಿನ್ಕನನು ಸ್ವೀಕರಿಸಿದನು. ಭೇರಿಗಳು ನಿನದಿಸಿದುವು. ಅಸ್ತ್ರಗಳನ್ನು ಕೆಳಗಿಡಲಾಯಿತು. ಶರದೃತುವಿನ ಗಾಳಿಗೆ ಅಮೇರಿಕದ ಪತಾಕೆಗಳು ಹಾರಲು ಹತ್ತಿದುವು.

ಹೀಗೆ ಒಪ್ಪಂದವಾಗುವವೇಳೆ, ಜಾರ್ಜ್ ತನ್ನ ಅಶ್ವದಮೇಲೆ ಪ್ರತಿಮೆಯಂತೆ ಕದಲದೆ ಕುಳಿತಿದ್ದನು 6 ವರ್ಷಗಳ ಹೋರಾಟ, ನಿರಾಶೆಗಳನಂತರ ಆಕಸ್ಮಿಕವಾಗಿ ಸಿಕ್ಕಿದ ಈ ವಿಜಯವನ್ನು ಪೂರ್ತಿ ಗ್ರಹಿಸಿಕೊಳ್ಳುವಷ್ಟು ಚುರುಕು ಆವನಲ್ಲಿರಲಿಲ್ಲವೆಂದೇ ಭಾಸವಾಗುತ್ತಿತ್ತು.

ಇಂಗ್ಲಿಷರ ವಿರೋಧವು ಬಹುಮಟ್ಟಿಗೆ ಕಡಿಮೆಯಾದಂತಾಯಿತು; ಕಾರಣ, ಇದರಿಂದ ಟೋರಿಗಳ ಸಹಾಯವು ಸಿಗದಂತಾಗುವುದು ನಿಶ್ಚಯವಾಗಿತ್ತು. ಇತ್ತ ಕಾರ್ನ್‌ವಾಲೀಸನೂ ಕೆಲವು ರೇವುಗಳ ವಿನಾ ಇನ್ನಾವುದನ್ನೂ ಜಯಿಸಿದ್ದಿಲ್ಲ. ಆದರೆ ಕೆಳಗೆ ದಕ್ಷಿಣದಲ್ಲಿ ಮತ್ತೂ ಯುದ್ಧವು ನಡೆಯುತ್ತಲಿತ್ತು. ನೆಥನಿಲ್ ಗ್ರೀನ್‌ನ ಕಾರ್ಯವು ಅರ್ಧ ಮುಗಿದಿತ್ತಷ್ಟೆ. ಕ್ಲಿಂಟನನ ಚಲನವಲನಗಳನ್ನು ಪರೀಕ್ಷಿಸುವುದೂ, ಹಡ್ಸನ್ ನದಿಯನ್ನು ರಕ್ಷಿಸುವುದೂ ಅವಶ್ಯ ಕಾರ್ಯಕ್ರಮಗಳಾಗಿದ್ದುವು. ಇದರೊಡನೆ ಈ ಬಾರಿ ಚಳಿಗಾಲದ ಯೋಜನೆಗಳನ್ನೂ ವಾಶಿಂಗ್‌ಟನ್ ಕೈಗೊಂಡನು. ಪುನಃ ಅಮೇರಿಕಕ್ಕೆ ಸಹಾಯವೊದಗಿಸಲು ಲಾಫೇಯು ಫ್ರಾನ್ಸಿಗೆ ತೆರಳಿದನು.

ಆಗಲೇ ಮೂತರ್ಾಳಿಂದ ಬಂದ ವಾರ್ತೆಯೊಂದು ಜಾರ್ಜ್‌ನನ್ನು

ದುಃಖಿತನನ್ನಾಗಿಮಾಡಿತು. ಜೇಕ್ ಕಸ್ಟಿಸನು ಸತ್ತುಹೋಗಿದ್ದನು. ಮಾರ್ತಾಳನ್ನು ಸಂತಯಿಸುತ್ತ ಜೇಕ್ ಮತ್ತು ಇಲೀನರಳ ಮಕ್ಕಳನ್ನು ತನ್ನ ಮಕ್ಕಳೆಂದೇ ನೋಡಿಕೊಳ್ಳುವ ಭರವಸೆಯನ್ನು ಜಾರ್ಜ್ ಇತ್ತನು.

ಫಿಲಡೆಲ್ಫಿಯಾದಲ್ಲಿನ ಪ್ರತಿನಿಧಿಗಳ ಸಭೆಯು ಈತನನ್ನು ತುಂಬಾ ಶ್ಲಾಘಿಸಿತು. ಆದರೆ ವಾಶಿಂಗ್‌ಟನ್‌ನು ಮತ್ತೂ ಜಾಗರೂಕನಿದ್ದನು. ನ್ಯೂಯಾರ್ಕಿನ ಮೇಲೆ ಪುನಃ ದಾಳಿಮಾಡಬೇಕಾಗಿ ಬರುವುದೆಂದು ಈತನ ಅಭಿಪ್ರಾಯವಿತ್ತು. ಇದೇ ಅಲ್ಲದೆ, ಕಾಂಗ್ರೆಸ್ ಸೈನ್ಯಗಳಿಗೆ ತಕ್ಕಷ್ಟು ಪ್ರಮಾಣದಲ್ಲಿ ಹಣವನ್ನೂ ಒದಗಿಸುತ್ತಿದ್ದಿಲ್ಲ. ಇದರಿಂದಾಗಿ ದಂಗೆಯೇಳುವ ಚಿಹ್ನೆಗಳೂ ಕಂಡುಬರುತ್ತಿದ್ದುವು. ಅಲ್ಲದೆ ಇದನ್ನು ನಿವಾರಿಸಲು ಸೇನಾವಿಭಾಗವೇ ರಕ್ಷಣೆ ಮತ್ತು ರಾಜ್ಯ ಶಾಸನಗಳ ಅಧಿಕಾರವನ್ನು ನಿರ್ವಹಿಸಿದರೆ ಒಳ್ಳಿತಲ್ಲವೆ? ಎಂಬ ಪ್ರಶ್ನೆಯೂ ಉದ್ಭವಿಸಿತ್ತು. ಅಮೇರಿಕವನ್ನು ಅಮೇರಿಕದವನೇ ಒಬ್ಬ ರಾಜನಂತೆ ಆಳತಕ್ಕುದೆಂದು ವಾದಿಸಿದವರೂ ಸೈನ್ಯದಲ್ಲಿದ್ದರು. 'ಇದೆಲ್ಲಾ ಹುಚ್ಚಾಟ' ಎಂದು ವಾಶಿಂಗ್‌ಟನ್ ಇಂಥ ಎಲ್ಲ ಮಾತುಗಳನ್ನೂ ವಿರೋಧಿಸಿದನು. ತಾನೆಂದಿಗೂ ಸೈನಿಕ ರಾಜ್ಯವನ್ನು ಒಲ್ಲೆನೆಂದೂ, ಜನರ ಮೇಲೆ ಅಂಥದನ್ನು ಹೊರಿಸಲಾರೆನೆಂದೂ ಈತನು ಸ್ಪಷ್ಟವಾಗಿ ನುಡಿದನು.

ಜುಲೈ 1782ರ ಸುಮಾರಿಗೆ ಅಂಥೋನಿ ವೈನ್‌ನು ದಕ್ಷಿಣದಲ್ಲಿ ಸವಾನ್ನಾವನ್ನು ಗೆದ್ದು ಗ್ರೀನನ್ನು ಸೇರಿಕೊಂಡು ಅಲ್ಲಿಂದ, ಅಂದರೆ ಕೆರೊಲೀನಾಸ್‌ನಿಂದಲೂ ಬ್ರಿಟಿಷರನ್ನು ಹೊಡೆದೋಡಿಸಿದ್ದನು. ಆದರೆ ಚಾರ್ಲ್ಸ್‌ಟನ್ ಮಾತ್ರ ಮುಂದೆ 1 ವರ್ಷದ ತನಕವೂ ಶರಣು ಬರಲಿಲ್ಲ. ಶರಣು ಬಂದ ನಂತರ, ಶಾಂತಿ ಸ್ಥಾಪನೆಯ ಕಾರ್ಯಕ್ರಮದಲ್ಲಿ ಹಲವರು ಭಾಗವಹಿಸಿದರು. ಐರೋಪ್ಯ ರಾಷ್ಟ್ರಗಳ ಪ್ರತಿನಿಧಿಗಳೊಡನೆ ಅಮೇರಿಕದ ಏಡಮ್ಸ್, ಜೋನ್‌ಡೇ, ಹೆನ್ರಿ ಲೋರೆನ್ಸ್ ಮೊದಲಾದವರು ಭಾಗವಹಿಸಿದ್ದರು. ಲಾಫೇಯು ತನ್ನ ದೇಶದಲ್ಲೇ ಇದ್ದು ಇವರ ಪರವಾಗಿ ವಾದಿಸಿ ತನ್ನ ದೇಶ ಮತ್ತು ಸ್ಪೈನ್‌ಗಳಿಂದ ಐದು ಮಿಲಿಯ ಪವನುಗಳ ಸಾಲವನ್ನೊದಗಿಸಿದನು.

ಇಂಗ್ಲೆಂಡು ಅಮೇರಿಕದ ಸ್ವಾತಂತ್ರ್ಯವನ್ನು ಒಪ್ಪಿತು. 20-4-1783ರಲ್ಲಿ ಯುದ್ಧಗಳು ಕೊನೆಗೊಂಡುವು. ಇದರ ನಂತರ ವಾಶಿಂಗ್‌ಟನ್‌ನು ಅಮೇರಿಕದ ಎಲ್ಲಾ ರಾಜ್ಯಗಳ ಗವರ್ನರರಿಗೂ ಪತ್ರ ಬರೆದು ರಾಜ್ಯ ಸ್ಥಾಪನೆಗೆ, ರಾಜ್ಯದ ನೀತಿ ಶಾಸನಗಳನ್ನು ರೂಪಿಸುವುದ ರಲ್ಲಿ ಇವರೆಲ್ಲರ ಸಹಕಾರವನ್ನು ಬಯಸಿದನು. ಜೆಫ್ಫರ್‌ಸನ್, ಮೇಡಿ ಸನ್, ಅಲೆಕ್ಸಾಂಡರ್ ಹೆಮಿಲ್ಟನ್ ಮತ್ತು ಮೋರಿಸ್ ಮೊದಲಿಗರು ಇಂಥ ರಾಜನೀತಿಜ್ಞರಲ್ಲಿ ಸೇರಿದ್ದರು.

ಈ ಪತ್ರದಲ್ಲಿ ನಮೂದಿಸಲ್ಪಟ್ಟ ಅಂಶಗಳಲ್ಲಿ ನಾಲ್ಕು ಮುಖ್ಯ ವಾದುವು. 1 ಎಲ್ಲವನ್ನು ಒಂದಾಗಿಸುವ ಕೇಂದ್ರ ಸರಕಾರದ ಆಶ್ರಯದಲ್ಲಿ ಈ ವಿವಿಧ ರಾಜ್ಯಗಳು ಒಂದಾಗಬೇಕು, ಒಕ್ಕಟ್ಟನಲ್ಲಿರಬೇಕು. 2 ಸಾರ್ವ ತ್ರಿಕ ವ್ಯವಹಾರಗಳಲ್ಲಿ ನ್ಯಾಯವಾದ ವರ್ತನೆಯನ್ನೇ ಅಂಗೀಕರಿಸ ತಕ್ಕುದು. 3 ದೇಶದ ರಕ್ಷಣೆಗೆ ಒಂದು ದೊಡ್ಡ ಸುಸಜ್ಜಿತ ಸೈನ್ಯದ ಸ್ಥಾಪನೆಯು ಅತ್ಯವಶ್ಯ. ಮತ್ತು 4 ಸಾಮುದಾಯಿಕ ಸಹನೆಯ ನೀತಿಯನ್ನು ಅಂಗೀಕರಿಸಿ ಇದರ ಇದಿರಿಗೆ ಖಂಡಿತವಾಗಿಯೂ ವೈಯ ಕ್ತಿಕ ಮತ್ತು ಸ್ಥಳೀಯ ವಿಚಾರಗಳಿಗೆ ಪ್ರಾಮುಖ್ಯತೆಯನ್ನೀಯತಕ್ಕು ದಲ್ಲ

ಅದೇ ವರ್ಷದ ಸಪ್ತಂಬರ 3ರಲ್ಲಿ, ಪೇರಿಸ್ ನಗರದಲ್ಲಿ ಸಂಧಿಯ ಪತ್ರಕ್ಕೆ ಸಹಿ ಮಾಡಲಾಯಿತು. ವಾಶಿಂಗ್‌ಟನ್‌ನು ಜಯವನ್ನು ಸೂಚಿಸಲೋ ಎಂಬಂತೆ ನ್ಯೂಯಾರ್ಕ್ ಪಟ್ಟಣಕ್ಕೆ ಅಶ್ವಾರೂಢನಾಗಿ ತನ್ನ ಹಸ್ತಕರೊಡನೆ ಪ್ರವೇಶಿಸಿದನು. ಆ ವೇಳೆ ನಗರವೆಲ್ಲವೂ ಅಲಂಕೃ ತವಾಗಿತ್ತು. ತುಪಾಕಿಗಳಿಂದ ಗುಂಡುಗಳನ್ನು ಹಾರಿಸುತ್ತಲೂ ರಾತ್ರಿ ಯೆಲ್ಲಾ ಆಕಾಶ ಬಾಣಗಳನ್ನು ಬಿಡುತ್ತಲೂ ಆ ದಿನವನ್ನು ಅತಿ ವಿಜೃಂಭಣೆಯಿಂದ ಜನರು ಎಲ್ಲೆಡೆಗಳಲ್ಲೂ ಕಳೆದರು.

ತನ್ನ ಕಾರ್ಯವನ್ನು ಮುಗಿಸಬೇಕಾದರೆ ಕಾಂಗ್ರೆಸಿಗೇನೇ ತಾನೊ ಪ್ಪಿಸಬೇಕಲ್ಲವೆ? ಆದುದರಿಂದ ಅನೇಕ ನಗರಗಳ ಮೂಲಕ ಹಾದು ಹೋಗುತ್ತ ಜಾರ್ಜ್ ಅನಾಪೋಲಿಸ್ ನಗರಕ್ಕೆ ಬಂದನು. ಅಲ್ಲಿ ಕಾಂಗ್ರೆಸ್ ಕೂಡಿತ್ತು. ಅಂತೂ ಭಾರವಾದ ಹೊರೆಯನ್ನಿಳಿಸುವವನಂತೆ

ಈತನು ತನ್ನ ಸೈನ್ಯ ಸರ್ವಾಧಿಕಾರಿ—ಪ್ರಮುಖ ಸೇನಾನಿಯು—ಹುದ್ದೆ ಯಿಂದ ಬೀಳ್ಕೊಂಡನು. ಬೀಳ್ಕೊಡುವ ವೇಳೆ ಅತ್ಯಂತ ವಿನಯದಿಂದ, "ಇಷ್ಟುಕಾಲ ತಮ್ಮ ಆದೇಶ ಪ್ರಕಾರ ವರ್ತಿಸಿದ ನಾನಿಂದು ನನ್ನ ಭಾರ ವನ್ನಿಳುಹುತ್ತಿದ್ದೇನೆ. ನಿಮಗೆಲ್ಲ ನನ್ನ ಹಾರ್ದಿಕ ಮತ್ತು ಪ್ರೇಮಲ ವಿದಾ ಯವಿದು" ಎನ್ನುತ್ತ ಆ ಸಂದರ್ಭಕ್ಕೆ ತಕ್ಕುದಾದ ಘನಿಷ್ಠಿಕೆಯ ಮಾತು ಗಳನ್ನು ಆಡಿದನು.

ಮರುದಿನವೇ ಈತನೂ ಈತನ ಉಪಾಧಿಕಾರಿಗಳೂ ಮೌಂಟ್ ವೆರ್ನ್ನಾನಿಗೆ ಹೋದರು. ಈತನನ್ನು ಬೀಳ್ಕೊಡಲು, ಈತನಿಗೆ ಗೌರವ ಸೂಚಕಾರ್ಥವಾಗಿ ಬಂದವರೆಲ್ಲರೂ ತನ್ನ ಮಗನ ಮಕ್ಕಳ ಮೇಲೆ ಈತನು ತೋರುವ ಪ್ರೀತ್ಯಾದರಗಳನ್ನು ನೋಡಿ ಚಕಿತರಾದರು. ಮರುದಿನ ಬೆಳಗ್ಗೆ ಇವರನ್ನು ಭೇಟಿಯಾದ ವಾಶಿಂಗ್‌ಟನ್‌ನೇ ಬೇರೆ. ತನ್ನ ಸಮವಸ್ತ್ರಗಳನ್ನೆಲ್ಲ ತ್ಯಜಿಸಿ ವಾಶಿಂಗ್‌ಟನ್ ಅಂದು ಸಾದಾ ಉಡುಪುಗಳನ್ನು ಧರಿಸಿದ ನಾಗರಿಕನಾಗಿದ್ದನು. ಇದನ್ನು ನೋಡಿ ಅಚ್ಚರಿಗೊಂಡ ಇವರನ್ನೆಲ್ಲಾ ನೋಡಿ ನಗುತ್ತ, 'ಸರಿ, ಇಂದಿನಿಂದ ಇದೇ ವೇಷ. ಇನ್ನುಮುಂದೆ ಹೀಗೆಯೇ ಸಾದಾ ನಾಗರಿಕನಾಗುವಂತೆಯೇ ಪರಮಾತ್ಮನು ಕರುಣಿಸಲಿ', ಎಂದು ತನ್ನ ಹೃದಯದ ಇಂಗಿತವನ್ನು ವ್ಯಕ್ತಗೊಳಿಸಿದನು.

ಅಧ್ಯಾಯ ೧೪

1784ರಲ್ಲಿ ವಾಶಿಂಗ್‌ಟನ್‌ನ ಚಟುವಟಿಕೆಗಳು ಹಿಂದಿಗಿಂತ ಎಷ್ಟೋಪಾಲು ದ್ರುತತರವಾಗಿ ಸಾಗಿದುವು. ಯುದ್ಧಾನಂತರದಲ್ಲಿ ಹಿಂದಿನಂತೆ ತನ್ನಷ್ಟಕ್ಕೇ ತಾನು ಇರುವುದು ಸಾಧ್ಯವಿಲ್ಲ. ನಿತ್ಯವೂ ಅನೇಕ ಅತಿಥಿಗಳೂ, ಪರಿಚಿತ ಮತ್ತು ಅಪರಿಚಿತರಿಂದ ಪತ್ರಗಳೂ ಬರುತ್ತಿದ್ದುವು. ಇವರ ಉಪಚಾರ ಮತ್ತು ಪತ್ರಗಳತ್ತ ಗಮನ ವನ್ನೀಯಲೇಬೇಕಿತ್ತು. ಈ ಮಧ್ಯೆ ಬೇಸಗೆಯಲ್ಲಿ ಲಾಫೇಯು ಈತನ ಮೌಂಟ್‌ವೆರ್ನ್ನಾನನ್ನು ಸಂದರ್ಶಿಸಲು ಬಂದನು. ಉಳಿದೆಲ್ಲ ಸ್ವಾಗತ

ಮತ್ತು ವಿಜೃಂಭಣೆಯ ಕಾರ್ಯಕ್ರಮಗಳನ್ನು ಒತ್ತಟ್ಟಿಗಿಟ್ಟು ಈತನು ಹದಿನೈದು ದಿನಗಳತನಕ ವಾಶಿಂಗ್‌ಟನ್‌ನೊಡನೆ ಉಳಿದನು. ಇವನೂ ಹೋದನಂತರ ವಾಶಿಂಗ್‌ಟನ್ ತನ್ನ ಪಶ್ಚಿಮದ ಹೊಲಭೂಮಿಗಳತ್ತ ಹೋದನು.

ಓಹಿಯೋ ನದಿಯ ಉತ್ತರ ಮತ್ತು ಪಶ್ಚಿಮ ಭಾಗಗಳಲ್ಲಿ ಹಿಂದೆ ವರ್ಜೀನಿಯಾವೇ ಎಲ್ಲಾ ಅಧಿಕಾರವನ್ನು ವಹಿಸಿದ್ದರೂ, ಈಗ ನ್ಯೂಯಾರ್ಕ್ ಮೆಸೆಚ್ಯುಸೆಟ್ಸ್ ಮತ್ತು ಕೊನೆಕ್ಟಿಕಟ್‌ಗಳು ತಂತಮ್ಮಲ್ಲಿ ಇವನ್ನು ಪುನಃ ಹಂಚಿಕೊಳ್ಳತಕ್ಕುದೆಂದು ಇಚ್ಛೆಯನ್ನು ವ್ಯಕ್ತಪಡಿಸಿದುವು. ಯುದ್ಧವು ನಡೆಯುತ್ತಿರುವಾಗಲೇ ಮೇರಿಲೇಂಡ್ ಪ್ರಾಂತವು ವಾಯವ್ಯದ ಭಾಗಗಳನ್ನೆಲ್ಲ ಒಂದುಗೂಡಿಸಿ ಪ್ರತ್ಯೇಕ ಪ್ರಾಂತವನ್ನಾಗಿ ಮಾಡತಕ್ಕುದೆಂದು ಪ್ರಾರ್ಥಿಸಿತ್ತು. ಕೊನೆಗೆ ಇದನ್ನು ವರ್ಜೀನಿಯಾ ಮತ್ತಿತರ ಪ್ರಾಂತಗಳು ಒಪ್ಪಿದುವು. ಪ್ರತಿ ಪ್ರಾಂತಕ್ಕೂ ತಕ್ಕಷ್ಟು ಸ್ವಾಯತ್ತ ಹಕ್ಕುಗಳನ್ನೂ ಕೊಡಲಾಯಿತು. ಆದರೆ ಎಲ್ಲವೂ ಕೇಂದ್ರ ಸರಕಾರದ ಅಧೀನತೆಯಲ್ಲೇ ಇರತಕ್ಕುದೆಂದೂ ನಿಶ್ಚಯಿಸಲ್ಪಟ್ಟಿತು. ಆದರೂ ಈ ಪಶ್ಚಿಮದ ಪ್ರಾಂತಗಳೊಡನೆ ಇತರ ಭಾಗಗಳು ಸಂಪರ್ಕವನ್ನಿಟ್ಟುಕೊಂಡರೆ ಮಾತ್ರ ಆ ಭಾಗದ ಹಿತವು ಸಾಧ್ಯವಾಗಬಲ್ಲುದೆಂದು ಜಾರ್ಜ್ ವಾಶಿಂಗ್‌ಟನ್ ಅಭಿಪ್ರಾಯಪಟ್ಟನು. ಆದುದರಿಂದ ಈತನ ಹಂಚಿಕೆಗಳನ್ನೆಲ್ಲ ಪ್ರತಿನಿಧಿಗಳ ಸಭೆಗೆ ವಿವರಿಸತಕ್ಕುದೆಂದು ವರ್ಜೀನಿಯಾದ ಗವರ್ನರನು ಆಶಿಸಿದನು.

ಇತ್ತ ಪುನಃ ರಿಚ್‌ಮಂಡಿನಲ್ಲಿ ವಾಶಿಂಗ್‌ಟನ್ ಲಾಫೇಯನ್ನು ಸಂಧಿಸಿದನು. ಈತನ ಸಾರ್ವತ್ರಿಕ ಮತ್ತು ದೇಶಸೇವೆಗಾಗಿ ಆ ಪಟ್ಟಣವು ಆತನನ್ನು ಗೌರವಿಸಿತು. ಅಲ್ಲಿಂದ ಪುನಃ ಮೌಂಟ್‌ವೆರ್ನಾನಿಗೆ ಈತ ತೆರಳಿದನು.

ಒಂದು ದಿನ ಲಾಫೇಯನ್ನು ಕರದುಕೊಂಡು ವಿಹಾರಕ್ಕಾಗಿ ನದೀತೀರದಲ್ಲಿ ನಡೆಯುತ್ತಲಿರುವವೇಳೆ ವಾಶಿಂಗ್‌ಟನ್ ತನ್ನ ಸ್ನೇಹಿತನೊಡನೆ, 'ಈಗ ನಮ್ಮ ದೇಶವೆಲ್ಲವೂ ವಿಭಾಗವಾಗಿದೆ, ವಿವಿಧ ಪ್ರಾಂತಗಳ ನಡುವೆ ದ್ವೇಷ, ಅಸೂಯೆ ಮತ್ತು ಹಕ್ಕು ಬಾಧ್ಯತೆಗಳ ಪ್ರಶ್ನೆಗಳು

ಹೊಸತಾಗಿ ಉದ್ಭೂತವಾಗಿವೆ. ಆದುದರಿಂದ ನಮ್ಮಲ್ಲೇ ಒಡಕುಂಟಾಗುವುದು ಎಂದು ಇಂಗ್ಲಂಡ್ ನುಡಿದ ಭವಿಷ್ಯವು ಎಲ್ಲಿ ಸತ್ಯವಾಗುವುದೋ ಎಂಬ ಹೆದರಿಕೆ ಇದೆ," ಎಂದನು.

"ಇಲ್ಲ ಹಾಗೆ ಖಂಡಿತವಾಗಿಯೂ ಆಗುವಂತಿಲ್ಲ. ನಿಮ್ಮಲ್ಲಿ ಈಗ ಅನೇಕ ಅಸಾಮಾನ್ಯ ರಾಜಕಾರಣಿಗಳಿದ್ದಾರೆ" ಎಂದು ಲಾಫೇಯು ಉತ್ತರಿಸಿದನು.

ಅಭ್ಯಾಸದಿಂದಲೆಂಬಂತೆ ಗುನ್ಸ್‌ಟನ್ ಹಾಲನ್ನು ನೋಡುತ್ತ, "ಅದೇನೋ ಸರಿ,ಜಾರ್ಜ್ ಮೇಸನ್‌ನಂತಹ ಹಲವರೇನೋ ಇರುವರು. ವರ್ಜೀನಿಯಾ ಹಕ್ಕುಗಳ ಮಸೂದೆಯು ಉತ್ತಮ ಸರಕಾರಕ್ಕೆ ಭದ್ರವಾದ ಅಡಿಪಾಯವಾಗಿದೆ. ಆದರೆ ಇವನಿಗೆ ಎಲ್ಲ ಪ್ರಾಂತಗಳನ್ನೂ ಒಟ್ಟುಗೂಡಿಸುವಷ್ಟು ಸಹನೆ, ತಾಳ್ಮೆಗಳಿಲ್ಲ; ಕಾರಣ, ಈ ಕಾರ್ಯಕ್ಕೆ ಅವಶ್ಯವಿರುವ ಪರಸ್ಪರ ನಂಬಿಕೆ ಅವಲಂಬನೆಗಳು ನಮ್ಮ ಜನರಲ್ಲಿಲ್ಲ" ಎಂದು ಪುನಃ ಜಾರ್ಜ್ ಅಭಿಪ್ರಾಯಪಟ್ಟನು.

ಲಾಫೇಯು ಮನೆಗೆ—ಸ್ವದೇಶಕ್ಕೆ—ಹೊರಡಲು ನ್ಯೂಯಾರ್ಕಿಗೆ ಹೊರಡಲನುವಾದಾಗ ವಾಶಿಂಗ್‌ಟನ್‌ನನ್ನು ತಬ್ಬಿ ಬೀಳ್ಕೊಂಡನು. ಗದ್ಗದಿತ ಕಂಠದಿಂದ, ಕಣ್ಣೀರು ಸುರಿಸುತ್ತ, "ಜನರಲ್ ನಮಸ್ಕಾರವೆಂದಷ್ಟೇ ಹೇಳುತ್ತೇನೆ ನಿನ್ನಿಂದ ವಿದಾಯವನ್ನು ಪಡೆಯಲು ಮನಸ್ಸು ಬಯಸ್ಸುತ್ತಿಲ್ಲ. ಪುನಃ ಸಂಧಿಸುವ ತನಕ ಮಾತ್ರ ನನಗೆ ವಿದಾಯವಿರಲಿ", ಎಂದೆನ್ನುತ್ತ ಜಾರ್ಜ್‌ನನ್ನು ಅಗಲಿದನು.

ಧೈರ್ಯವನ್ನು ತಂದುಕೊಂಡು ವಾಶಿಂಗ್‌ಟನ್ ತನ್ನ ಪರಮ ಸ್ನೇಹಿತನ್ನು ಬೀಳ್ಕೊಂಡನು. ಅದೇನೋ ಖಂಡಿತವಾಗಿಯೂ ವಿದಾಯವೇ ಆಗಿತ್ತು.

ಮತ್ತೆರಡು ವರ್ಷಗಳಲ್ಲಿ ದೇಶದ ಪರಿಸ್ಥಿತಿಯು ಕೆಡುತ್ತ ಬಂದಿತ್ತು. ಅತೃಪ್ತಿ, ಅವ್ಯವಸ್ಥೆಗಳು ಎಲ್ಲೆಲ್ಲೂ ತಲೆದೋರಿದ್ದುವು ಕಾಂಗ್ರೆಸ್ಸಿಗೆ ಹೆಚ್ಚಿನ ಅಧಿಕಾರವನ್ನೀಯದೆ ಪ್ರತಿ ಪ್ರಾಂತವೂ ತನ್ನಂತೆಯೇ ಹಣದ ಪ್ರಸಾರವನ್ನು ನೋಟುಗಳ ಮೂಲಕ ನಿರ್ವಹಿಸಲಾರಂಭಿಸಿದ ಕಾರಣ ವ್ಯಾಪಾರವೂ ಹೀನ ಸ್ಥಿತಿಗೆ ಬರಲಾರಂಭಿಸಿತು. ಕೊನೆಗೆ ಇಂಥ ಪರಿ

ಸ್ಥಿತಿಯಲ್ಲಿ ಹೆಚ್ಚು ತೆರಿಗೆಯನ್ನು ವಸೂಲು ಮಾಡಲೆಳಸಿದ ಮಸೆಚ್ಚುಸೆಟ್ಸ್ ಪ್ರಾಂತದಲ್ಲಿ ಬಂಡಾಯವೆದ್ದು ಜನರು ಇದನ್ನು ಪ್ರತಿಭಟಿಸಿದರು.

ಒಂದು ದಿನ ರಾತ್ರಿ ಈತನು ತನ್ನ ಕೊಠಡಿಯಲ್ಲಿ ಕಾಗದಗಳನ್ನು ಬರೆಯುತ್ತಿರುವಷ್ಟರಲ್ಲಿ ಈತನ ಹೆಂಡತಿಯು ಬಂದು, "ಏನಿದು ಅನರ್ಥ, ಹಗಲೆಲ್ಲಾ ಹೊಲಗಳಲ್ಲಿ ದುಡಿದು, ರಾತ್ರಿ ಎಲ್ಲಾ ಈ ಪತ್ರಗಳತ್ತ ಗಮನವನ್ನೀಯುತ್ತ ಎಳ್ಳಷ್ಟೂ ವಿಶ್ರಾಂತಿಯನ್ನು ಪಡೆಯದೆ ಇದೇನು ಮಾಡುತ್ತಿರುವೆ ಜಾರ್ಜ್"? ಎಂದು ಕೇಳಿದಳು.

"ಅದೇ ನ್ಯೂಹೇಂಪ್‌ಶಾಯರ್‌ನ ಟೋಬಿಯಸ್ ಲಿಯರ್ ಎಂಬಾತನನ್ನು ಈ ಕೆಲಸದ ಬಗ್ಗೆ ನೇಮಿಸೋಣ ಎಂದಾಲೋಚಿಸುತ್ತಿದ್ದೇನೆ ಈ ಕೆಲಸದೊಡನೆ, ಆತನು ಸೆಲ್ಲಿ ಮತ್ತು ಜಾರ್ಜ್‌ರಿಗೆ ಪಾಠವನ್ನೂ ಹೇಳಬಾರದೇಕೆ?" ಎಂದುತ್ತರವು ಬಂದಿತು.

ಮಾರ್ತಾಳು ಈ ಅಭಿಪ್ರಾಯಕ್ಕೆ ಸಮ್ಮತಿಯನ್ನಿತ್ತಳು. ಅಂತೂ ವಾಶಿಂಗ್‌ಟನ್‌ನ ಭಾರವು ಒಂದಷ್ಟಾದರೂ ತಗ್ಗಿತು. ಈತನ ಪತ್ರ ವ್ಯವಹಾರದ ಹೊರೆಯೆಲ್ಲವೂ ಈ ಹೊಸಬನ ಪಾಲಿಗೆ ಬಿದ್ದಿತು.

ಆದರೂ ಜನತೆಯಿಂದ ಈತನಿಗೆ ಗೌರವವು ಒಂದಲ್ಲ ಒಂದು ವಿಧಾನದಿಂದ ಸಲ್ಲುತ್ತಲೇ ಇತ್ತು. ಅನೇಕರು ಈತನು ಹಿಂದೆ ಮಾಡಿರುವ ಉಪಕಾರಗಳಿಗೆ, ದೇಶ ಸೇವೆಗೆ ಪ್ರತಿಯಾಗಿ ಅನೇಕ ಉಡುಗೊರೆಗಳನ್ನು ಕಳುಹುತ್ತಿದ್ದರು. ನ್ಯೂಯೋರ್ಕ್‌ನ ಗವರ್ನರ್ ಲಿಂಬೆ ಮರಗಳನ್ನೂ, ಮೋರಿಸನು ಚೀನೀ ಬಾತು ಕೋಳಿಗಳನ್ನೂ, ಹಂದಿಗಳನ್ನೂ, ದೂರದ ಫ್ರಾನ್ಸಿನಿಂದ ಲಾಫೇಯು ಕೋಳಿ, ಹೆಬ್ಬಾತು ಮತ್ತು ಬೇಟೆ ನಾಯಿಗಳನ್ನು ಕಳುಹಿದ್ದರು. ಅಂತೂ ಈತನ ಹೆಸರಿಗೆ ಅಂಟಿದ ಕೀರ್ತಿಯು ಜಗದ ಉದ್ದಗಲಕ್ಕೂ ಹಬ್ಬಿತು

ಸಾಧಾರಣ 1786ರಿಂದ ವಿವಿಧ ಪ್ರಾಂತಗಳ ನಡುವೆ ಹೆಚ್ಚಿನ ಸಹಕಾರವು ಕಂಡು ಬಂತು. ವರ್ಜೀನಿಯಾ ಮತ್ತು ಮೇರಿಲೇಂಡ್ ಪ್ರಾಂತಗಳು ತಮ್ಮ ಸುಂಕದ ನಿರ್ಣಯದಲ್ಲಿ ಒಮ್ಮತಕ್ಕೆ ಬಂದುದೇ ಈ ಪರಸ್ಪರ ಸಹಕಾರದ ನಾಂದಿಯಾಗಿತ್ತು. ಇದೇ ಅಭಿಪ್ರಾಯವನ್ನು ಮೆಲ್ಲನೆ ಇತರ ಪ್ರಾಂತಗಳವರೂ ಸ್ವೀಕರಿಸಿ ಪರಸ್ಪರ ಸಹಕರಿಸಲನು

ವಾದರು. ಹದಿಮೂರು ಪ್ರಾಂತಗಳವರೂ ಮೇ, 1787ರಲ್ಲಿ ಫಿಲಡೆಲ್ಫಿಯಾದಲ್ಲಿ ಈ ವ್ಯಾಪಾರ ಮತ್ತು ಸುಂಕ ನಿರ್ಣಯಗಳ ಬಗ್ಗೆ ಸಭೆ ಸೇರಿದರು. ವ್ಯಾಪಾರ ವಹಿವಾಟುಗಳಿಗೆ ಸಂಬಂಧಿಸಿದ ಪ್ರಶ್ನೆಗಳೊಡನೆ ಇತರ ರಾಜಕೀಯ ಪ್ರಶ್ನೆಗಳೂ ಆ ಸಭೆಯಲ್ಲಿ ಚರ್ಚೆಗೆ ಬಂದುವು.

ವರ್ಜೀನಿಯಾದ 7 ಪ್ರತಿನಿಧಿಗಳಲ್ಲಿ ವಾಶಿಂಗ್‌ಟನ್ ಒಬ್ಬನಾಗಿದ್ದನು. ಆದರೆ ಇದು ಆತನಿಗೆ ಅಷ್ಟು ರುಚಿಸುತ್ತಿದ್ದಿಲ್ಲ. ಸಾಮೂಹಿಕ ಮತ್ತು ಸಾರ್ವತ್ರಿಕ ಕಾರ್ಯಗಳಿಗೆ ತನಗೆ ಬಿಡುವಿಲ್ಲವೆಂಬುದೇ ಕಾರಣವಾಗಿತ್ತು. ಇದೇ ಅಲ್ಲದೆ ಈತನ ಗಾರ್ಹ ಜೀವನವೂ ತುಂಬಾ ತೊಂದರೆಗಳಿಂದ ಕೂಡಿತ್ತು. ಈತನ ತಮ್ಮ ಸ್ಯಾಮುವೇಲನು ಎಲ್ಲವನ್ನೂ ಕಳೆದು ದಿವಾಳಿಯಾಗಿ ಸತ್ತಿದ್ದನು. ಆತನ ಮಕ್ಕಳ ಭಾರವನ್ನೂ ಈತನು ಹೊರಬೇಕಾಯಿತು. ಇಷ್ಟರಲ್ಲಿ 1787ರಲ್ಲಿ ಈತನ ಪ್ರೀತಿಯ ತಮ್ಮ ಜಾಕಿಯು ಸತ್ತು ಹೋದನು, ಇನ್ನು ಈತನ ತಾಯಿಯು ಯಾವಾಗಲೂ ಈತನು ಯುದ್ಧಕ್ಕೆ ಹೋಗುವುದನ್ನು ವಿರೋಧಿಸಿ ಆಗಿಂದಾಗ್ಗೆ ಈತನಿಗೆ ಅಲ್ಲಸಲ್ಲದ ಉಪದ್ರವಗಳನ್ನು ಕೊಡುತ್ತಿದ್ದರೂ, ಅವಳ ಕಷ್ಟಕಾಲದಲ್ಲಿ ಅವಳ ಆರೈಕೆಯನ್ನು ಈತನೇ ಮಾಡಬೇಕಿತ್ತಲ್ಲವೆ? ಎಲ್ಲದಕ್ಕಿಂತಲೂ ಮಿಗಿಲಾಗಿ ಇವಳು ವರ್ಜೀನಿಯಾದ ಸರಕಾರದಿಂದ ತನಗೆ ನಿರ್ಗತಿಕರ ಬಗ್ಗೆ ಮೀಸಲಾದ ಮಾಸಾಶನವನ್ನು ಕೊಡಬೇಕೆಂದು ಕೇಳಿದುದನ್ನು ಇವನು ನಿರಾಕರಿಸುವಂತೆ ಮಾಡಿ ಅವಳ ಸ್ಥಿತಿಗತಿಗಳತ್ತ ಹೆಚ್ಚಿನ ಗಮನವನ್ನೀಯಬೇಕಾಯಿತು.

ಮೇ 25ರಂದು ಘಟನಾ ಸಮಿತಿಯ ಸಭೆ ಕೂಡಿತು. ಈ ಸಭೆಯಲ್ಲಿ ರಾಬರ್ಟ್ ಮಾರಿಸನನು ವಾಶಿಂಗ್‌ಟನ್‌ನನ್ನು ಅಧ್ಯಕ್ಷನಾಗುವಂತೆ ಕೇಳಿಕೊಂಡನು. ಇದನ್ನು ಜೋನ್ ರಟ್ಲಿಜ್ ಅನುಮೋದಿಸಲು ಅವಿರೋಧವಾಗಿ ಈತನು ಅಧ್ಯಕ್ಷನಾದನು.

ಆತನಕ ಈತನ ಕಾಗದಪತ್ರಗಳಿಂದ ಎಲ್ಲರೂ ಈತನ ಅಭಿಪ್ರಾಯಗಳನ್ನರಿತಿದ್ದರು. ಸ್ಥಿರವಾದ ಮತ್ತು ಭದ್ರವಾದ ಮತ್ತು ಹೆಚ್ಚಿನ

ಅಧಿಕಾರಗಳನ್ನೂ ಪಡೆದ ಕೇಂದ್ರ ಸರಕಾರದ ಸ್ಥಾಪನೆಯು ಅತ್ಯವಶ್ಯ ವೆಂದು ಈತನು ಪ್ರತಿಪಾದಿಸಿದುದನ್ನು ಎಲ್ಲರೂ ಒಪ್ಪಿದರು.

ಒಂದೇ ರಾಷ್ಟ್ರವನ್ನು ಕಟ್ಟಬೇಕೆಂದು ಹವಣಿಸಿದವರೆಲ್ಲರೂ ಪ್ರಾಂತೀಯ ಮನೋಭಾವನೆಯನ್ನು ಖಂಡತುಂಡವಾಗಿ ಎದುರಿಸಿ ತೊಲಗಿಸಲೇಬೇಕಿತ್ತು. ಈ ಬಗ್ಗೆ ಒಂದು ಕೇಂದ್ರ ಸಭೆಯನ್ನಾದರೂ ಮತದಾರರ ಮತದಾನದಿಂದಲೇ ರಚಿಸುವುದು ಅವಶ್ಯವಿತ್ತು. ಇನ್ನು ಪ್ರತಿ ಪ್ರಾಂತದ ಜನಸಂಖ್ಯೆಗನುಗುಣವಾಗಿಯೇ ಪ್ರತಿನಿಧಿಗಳನ್ನು ಆರಿಸ ತಕ್ಕುದೆಂಬುದನ್ನು ಮೊದಲು ಕಮ್ಮಿ ಜನರುಳ್ಳ ಪ್ರಾಂತದವರು ವಿರೋಧಿಸಿದರೂ ಅನಂತರ ಇವರನ್ನೂ ಒಪ್ಪಿಸಲಾಯಿತು. ಅಂತೂ ಒಂದು ಸಿನೇಟನ್ನೂ ಮತ್ತೊಂದು ಪ್ರತಿನಿಧಿಗಳ ಸಭೆಯನ್ನೂ ರಚಿಸಿಕೊಳ್ಳುವ ನಿರ್ಣಯವಾಯಿತು.

ಹೀಗೆ ಮೊದಮೊದಲು ವಿರೋಧಿಸಿದವರೂ ಅನೇಕರು ಈ ಉತ್ತಮ ಆದರ್ಶಗಳನ್ನು ಸ್ವೀಕರಿಸುತ್ತಿದ್ದಂತೆ ವಾಶಿಂಗ್‌ಟನ್‌ನಿಗೆ ತಮ್ಮ ಜನರಲ್ಲಿ ಅಭಿಮಾನವೂ ಆದರಬುದ್ಧಿಯೂ ಹೆಚ್ಚಿದುವು.

ಡಾ| ಫ್ರೇಂಕ್ಲಿನರ ಕೊನೆಯ ಮಾತುಗಳು ಎಲ್ಲರ ಒಪ್ಪಿಗೆಯನ್ನೂ ತಂದುವು. ಇವರೇ ತನ್ನ ವಿರೋಧವನ್ನು ಘಟನೆಯ ಕೆಲವು ವಿಚಾರ ಗಳಿಗೆ ಹೇಳಿದ್ದರೂ ತತ್ವತಃ ಇಂಥ ಘಟನೆಯ ಸ್ವೀಕಾರವು ಅತ್ಯವಶ್ಯ ವೆಂದೇ ಸಾರಿದರು.

ಅನಂತರ ಅವಿರೋಧವಾಗಿ ಈ ಸಭೆಯು ಮುಂದಿಟ್ಟ ಘಟನೆ ಯನ್ನು ಸ್ವೀಕರಿಸಲಾಯಿತು.

ಮರುವರ್ಷ ಪ್ರಾಂತೀಯ ಸಭೆಗಳು ಸೇರಿ ಈ ಘಟನೆಯ ವಿಷಯದಲ್ಲಿ ತಮ್ಮ ಅಭಿಮತವನ್ನು ಹೇಳುವ ಪ್ರಸಂಗಬಂದಾಗ ಈತನಿಗೆ ಒಂದು ಶಂಕೆಯು ಉದಿಸದೆ ಇರಲಿಲ್ಲ. ಪ್ರತಿದಿನವೂ ಪತ್ರಿಕೆಗಳೂ ಸಭೆಗಳೂ ತನ್ನ ಹೆಸರನ್ನು ಒಂದಲ್ಲ ಒಂದು ರೀತಿಯಲ್ಲಿ ಎತ್ತಿ ಈ ಘಟನೆಯೊಡನೆ, ಅದರ ನಿರ್ಮಾಪಕನೆಂದು ಸಾರಿದ ಕಾರಣ ಎಲ್ಲಿ ಪುನಃ ತಾನು ಸಾಮುದಾಯಿಕ ಮತ್ತು ಸಾರ್ವತ್ರಿಕ ಜೀವನಕ್ಕೆ ಬಲಿಬೀಳ ಬೇಕಾಗುತ್ತದೋ ಎಂಬ ಪ್ರಬಲವಾದ ಶಂಕೆಯು ಈತನಲ್ಲಿ ಮನೆ

ಮಾಡಿತು. ಇವನೆಣಿಸಿದಂತೆಯೇ ಈತನೇ ಅಮೇರಿಕದ ಮೊದಲ ಅಧ್ಯಕ್ಷನಾಗಬೇಕೆಂದು ಎಲ್ಲೆಡೆಗಳಿಂದಲೂ ಸಹಸ್ರಾರು ಕಾಗದಗಳು ಬರಹತ್ತಿದುವು,

ಈ ಕಾಗದಗಳ ದೆಸೆಯಿಂದ ಆತನಿಗೆ ಖೇದವಾಗುತ್ತಿದ್ದುದನ್ನು ಕಂಡು, ಮಾರ್ಥಾಳು ಸ್ನೇಹದಿಂದ ಗದರಿಸಿದಳು, "ಇದೇನು, ಅಮೇರಿಕವನ್ನು ಅದರ ಈಗಿನ ಸ್ಥಿತಿಗೆ ತಂದಿಟ್ಟ ನೀನು ಈಗ ನಿನ್ನ ಜವಾಬ್ದಾರಿಯನ್ನು ಅಲಕ್ಷಿಸುವುದು ನಾಚಿಕೆಗೇಡಲ್ಲವೆ? ಈ ಘಟನೆಗೆ ಕಾರಣೀಭೂತನಾದ ನೀನು ಪ್ರೆಸಿಡೆಂಟನಾಗುವುದು ಅನಿವಾರ್ಯವೇ ಆಗಿದೆ" ಎಂದು ಕಂಠೋಕ್ತವಾಗಿ ನುಡಿದಳು.

ಇದನ್ನು ವಿರೋಧಿಸುವುದು ಆತನ ತತ್ವಕ್ಕೆ ಕಷ್ಟವಾಗಿತ್ತು ಆದರೂ ತನ್ನ ಭೂಮಿ, ಹೊಲಗಳಿಂದ ದೂರವಾಗಬೇಕಲ್ಲ, ಎಂಬ ಸಮಸ್ಯೆಯು ಈತನಲ್ಲಿ ದುಃಖವನ್ನು ತುಂಬುತ್ತಿತ್ತು.

ಆದರೆ ಅದೃಷ್ಟದ ಆಟವೇ ಬೇರೆ. ನ್ಯೂಯೋರ್ಕ್ ಜರ್ನಲ್‌ನ ಎಂಟನೇ ಎಪ್ರಿಲ್‌ನ ಪತ್ರಿಕೆಯು ಈ ಕೆಳಗಿನ ಪ್ರಕಟಣೆಯನ್ನು ಮುದ್ರಿಸಿತ್ತು: "ದಕ್ಷಿಣ ಕೆರೋಲಿನಾ ಮತ್ತು ವರ್ಜೀನಿಯಾದ ಮತದಾರರ ಅಭಿಪ್ರಾಯದಮೇರೆಗೆ ವಿಖ್ಯಾತನಾದ ಸೈನಿಕ, ನಾಗರಿಕ ಜಾರ್ಜ್ ವಾಶಿಂಗ್‌ಟನ್ ಮೊದಲನೆಯ ಅಧ್ಯಕ್ಷನಾಗಿ ಆರಿಸಿ ಬಂದಿರುತ್ತಾನೆ" ಜೋನ್ ಏಡಮ್ಸ್ ಉಪಾಧ್ಯಕ್ಷನಾಗಿ ಆರಿಸಲ್ಪಟ್ಟನು.

ತನ್ನ ಆಯ್ಕೆಯ ವಾರ್ತೆ ಬಂದೊಡನೆ ವಾಶಿಂಗ್‌ಟನ್ ಸನ್ನದ್ಧನಾದನು. ತಾಯಿಯನ್ನು ಸಂದರ್ಶಿಸಿ ಅವಳಿಂದಲೂ ಬೀಳ್ಕೊಂಡು ಅವಳಿಂದಲೂ ಆಶಿರ್ವಾದವನ್ನು ಪಡೆದ ಈತನನ್ನು ಹೊರಡುವಷ್ಟರಲ್ಲೀ ಮಾರ್ಥಾಳು ಸ್ನೇಹದಿಂದ ಪ್ರಶ್ನಿಸಿದಳು: "ಈಗಲೇನೂ ಶಂಕೆಯಿಲ್ಲವಷ್ಟೆ?"

ನಗುತ್ತಿದ್ದರೂ, ಸ್ವಲ್ಪ ಗಂಭೀರನಾಗಿಯೇ ಇದ್ದ ವಾಶಿಂಗ್‌ಟನ್‌ನಿಂದ ಉತ್ತರವು ಬಂದಿತು, "ಹೌದು ಪೇಟ್ಸ ಸರಕಾರದ ಭವನಕ್ಕೆ ತಪ್ಪಿತಸ್ಥನು ತನ್ನ ಶಿಕ್ಷಾಸ್ಥಾನಕ್ಕೆ ಹೋಗುವಂತೆ ಹೋಗುತ್ತಿದ್ದೇನೆ. ಇಲ್ಲಿಗೆ ನನ್ನ ಮನೆಯ ಜೀವನವು ಇಲ್ಲವಾಗುತ್ತದೆ. ಈ ಅಜ್ಞಾತ

ವಾಸದಲ್ಲಿ ನೀನೂ ಮಕ್ಕಳೂ ಸದ್ಯ ಬಂದುಕೂಡುವಿರಲ್ಲ ಎಂದು ಸ್ವಲ್ಪ ಸಮಾಧಾನವಾಗಿದೆ ”

ಬಂಡಿಯನ್ನೇರಿದೊಡನೆ ಊರಿಗೆ ಊರೇ ಆತನಿಗೆ ವಿದಾಯವನ್ನು ಬಯಸಿತು, ನೀಗ್ರೋಜನರೂ ತುಂಬಿದ ಅಭಿಮಾನದಿಂದ ಈತನನ್ನು ನೋಡುತ್ತ ಬೀಳ್ಕೊಂಡರು. ಎಲ್ಲದಕ್ಕಿಂತಲೂ ಅವರ ನೋಟ ಮತ್ತು ತುಂಬುಹೃದಯದ ಅಭಿಮಾನಗಳೇ ತನ್ನ ಶ್ರಮಕ್ಕೆ ಹೆಚ್ಚಿನ ಪ್ರತಿಫಲ ವೆಂದು ಜಾರ್ಜ್ ವಾಶಿಂಗ್‌ಟನ್ ಭಾವಿಸದೆ ಇರಲಿಲ್ಲ.

ಅಧ್ಯಾಯ ೧೫

ವಾಶಿಂಗ್‌ಟನ್ ಅಧಿಕಾರ ಸ್ವೀಕರಿಸಿದ ದಿನದ ನೆನಹು ಆತನ ಕಾರ್ಯದರ್ಶಿಯ ಸ್ಮೃತಿಯಲ್ಲಿ ಬಹಳ ಕಾಲ ಉಳಿದಿತ್ತು. ಅವರು ನ್ಯೂಯೋರ್ಕನ್ನು ಪ್ರವೇಶಿಸಿದ ದಿನವೇ ಅವರೆಲ್ಲರಿಗೂ ವೈಭವದ ಸ್ವಾಗತವು ದೊರಕಿತ್ತು. ಬಳಿಕ, ಎಪ್ರಿಲ್ 30ರಂದು ಈತನು ಅಧಿಕಾರವನ್ನು ಸ್ವೀಕರಿಸಿದ ದಿನವನ್ನು ಪಟ್ಟಣವೆಲ್ಲವೂ ಅತ್ಯಂತ ಸಂಭ್ರಮದಿಂದ ಆಚರಿಸಿತು.

ಚೆರ್ರಿ ಸ್ಟ್ರೀಟ್‌ನಲ್ಲಿ ಮಧ್ಯಾಹ್ನದ ವೇಳೆ ಸೈನಿಕರು ಶಿಸ್ತಿನಿಂದ ಸಾಲಾಗಿ ನಿಂತರು. ಭೇರಿಗಳು, ವಾದ್ಯಗಳು ಮೊಳಗಿದುವು. ಇದಿರಿನಲ್ಲಿ ಸೈನಿಕರೂ, ಕಾಂಗ್ರೆಸಿನ ವಿವಿಧ ಭಾಗಗಳವರೂ ಮುನ್ನಡೆಯುತ್ತಿದ್ದು ಇವರ ಹಿಂದೆ ಅಧ್ಯಕ್ಷನನ್ನು ಕೂರಿಸಿದ ಬಂಡಿಯು ಎಳೆಯಲ್ಪಡುತ್ತಿತ್ತು. ಈತನ ಹಿಂದೆ ಆತನದೇ ಆದ ಬಂಡಿಯಲ್ಲಿ ಹಂಫ್ರೇ ಮತ್ತು ಲಿಯರರು ಕುಳಿತಿದ್ದರು. ಕೊನೆಯಲ್ಲಿ ಹೊರ ರಾಷ್ಟ್ರಗಳ ಪ್ರತಿನಿಧಿಗಳೂ ಪ್ರಮುಖ ನಾಗರಿಕರೂ ಹಿಂಬಾಲಿಸುತ್ತಲಿದ್ದರು ರಸ್ತೆಯ ಇಕ್ಕಡೆಗಳಲ್ಲೂ ಜನರೆಬ್ಬಿಸಿದ ಜಯ ಘೋಷವೂ ಕುದುರೆಗಳ ಖುರಪಟ ಧ್ವನಿಯೂ ಈ ವೈಭವದ ಗದ್ದಲವನ್ನು ಮತ್ತೂ ಹೆಚ್ಚಿಸಿದ್ದುವು.

ತಮ್ಮ ಬಂಡಿಗಳಿಂದ ಇಳಿದು ಎಲ್ಲರೂ ಎರಡು ಸಾಲುಗಳಲ್ಲಿ ಫೆಡರಲ್ ಬಿಲ್ಡಿಂಗಿಗೆ ನಡೆದರು. ಅಲ್ಲೇ ಮೇಲಿನ ಅಟ್ಟಳಿಗೆಗೆ ಜಾರ್ಜ್

ವಾಶಿಂಗ್‌ಟನ್‌ನನ್ನು ಕರೆದೊಯ್ಯಲಾಯಿತು. ಅಲ್ಲಿ ಆತನು ತನ್ನ ಹುದ್ದೆಯನ್ನು ಸ್ವೀಕರಿಸುವ ಪ್ರತಿಜ್ಞಾ ವಿಧಿಯನ್ನು ಕೈಗೊಳ್ಳತಕ್ಕದಿತ್ತು. ವೇದಿಕೆಯ ಮೇಲೆ ಈತನನ್ನು ಕಂಡೊಡನೆ ಜಯಜಯಕಾರವೆದ್ದಿತು.

ವಾಶಿಂಗ್‌ಟನ್ ಈ ಗದ್ದಲದಲ್ಲಿ ಅಭೂತ ಪೂರ್ವ ಸಂಭ್ರಮದ ಸನ್ನಿವೇಶದಲ್ಲಿ ಮ್ಲಾನವದನನಾದಂತೆ ಕಂಡುಬರುತ್ತಿದ್ದನು. ಈತ ನೇನು ಜ್ವರ ಪೀಡಿತನಿರುವನೆ? ಎನ್ನುವಷ್ಟು ಈತನು ಖಿನ್ನನಾದಂತೆ ಕಂಡು ಬರುತ್ತಿತ್ತು. ನಿಜಕ್ಕಾದರೂ ಜನರು ತನ್ನ ಮೇಲೆ ತೋರಿದ ಅಭಿ ಮಾನ, ಪ್ರೀತಿಗಳಿಂದಲೂ ಈಗ ತಾನು ಹೊರತಕ್ಕ ಭಾರದ ಕಾರಣ ದಿಂದಲೂ ವಾಶಿಂಗ್‌ಟನ್‌ನ ಮುಖವು ನಿಜಕ್ಕೂ ಗಂಭೀರವಾಗಿತ್ತು. ಅರೆ ತೆರೆದ ಕಂಗಳಿಂದ ಕೆಳಗಿನ ಜನಸ್ತೋಮವನ್ನು ಈಕ್ಷಿಸುವಾಗ ಈತ ನಿಗೆ ಅದರಲ್ಲಿ ತನ್ನ ಗೆಳೆಯರನೇಕರು, ಮುಖ್ಯ ಜನರಲ್ ನೋಕ್ಸ್ ಮತ್ತು ಬೇರನ್ ವಾನ್ ಸ್ಟ್ಯುಬೆನ್ ಮೊದಲಾದವರು ಕಂಡರು. ಇನ್ನೂ ಅಲೆಕ್ಸಾಂಡರ್ ಹೇಮಿಲ್ಟನ್ ಮೊದಲಾದ ಅನೇಕ ಹಳೆಯ ಸಹವರ್ತಿ ಗಳನ್ನು ಕಂಡು ಸಂತಸಪುಕ್ಕುವುದರ ಬದಲು ತಾನೀಗ ಇಲ್ಲಿ ಒಬ್ಬಂಟಿಗ ನಾದೆನಲ್ಲಾ ಒಂದು ಕ್ಷಣ ಕಾಲ ಅನಿಸದಿರಲಿಲ್ಲ. ಸ್ವಲ್ಪ ಹೊತ್ತಿನ ನಂತರ ಈತನೆದ್ದುನಿಂತು ಗಂಭೀರ ಮತ್ತು ಅಸ್ಖಲಿತ ವಾಣಿಯಿಂದ ಅಮೇರಿಕದ ಅಧ್ಯಕ್ಷರು ಅಂದಿನಿಂದ ಇಂದಿನ ತನಕವೂ ಓದುವ ಪ್ರಮಾಣ ವಚನವನ್ನು ಓದಿದನು: "ಅಮೇರಿಕದ ಅಧ್ಯಕ್ಷನಾಗಿ ನಾನು ಪ್ರಾಮಾಣಿ ಕನಾಗಿ ದುಡಿಯುವೆ, ಅಲ್ಲದೆ ಅಮೇರಿಕದ ಘಟನೆಯ ರಕ್ಷಣೆ ಮತ್ತು ಪಾಲನೆಯ ಬಗ್ಗೆ ನಾನು ನನ್ನಿಂದ ಸಾಧ್ಯವಿದ್ದಷ್ಟು ಶ್ರಮಿಸುವೆ."

ಅನಂತರ ಈತನು ಕಾಂಗ್ರೆಸಿಗರನ್ನುದ್ದೇಶಿಸಿ ನಾಲ್ಕು ಮಾತು ಗಳನ್ನು ಹೇಳಿದ ನಂತರ ಎಲ್ಲರೂ ಸೈಂಟ್ ಪಾಲ್ಸ್ ಚರ್ಚಿಗೆ ಹೋಗಿ ಈತನ ಶುಭವನ್ನು ಕೋರಲು ಹೇಳಿದ ಪ್ರಾರ್ಥನೆಗಳನ್ನು ಕೇಳಿದರು.

ಗದ್ದುಗೆಯನ್ನೇರಿದವನೇ ವಾಶಿಂಗ್‌ಟನ್ ಹಿಂದಿನ ಸರಕಾರವು ರಚಿಸಿದ ಎಲ್ಲಾ ಘಟನೆಗಳ ವಿವರಗಳನ್ನೂ ಮತ್ತು ಇನ್ನು ಉಳಿದಿರುವ ವಿಚಾರಗಳನ್ನೂ ಸಂಗ್ರಹಿಸಿ ದೇಶದ ರಾಜ್ಯಭಾರಕ್ರಮಗಳೆಲ್ಲವೂ ಶಿಸ್ತಿನಿಂದ ನಡೆಯುವಂತೆ ಮಾಡಿದನು. ಈತನು ಬಹಳ ಶ್ರಮಿಸಿದುದರ

ಫಲವಾಗಿ ಜೂನ್‌ನಲ್ಲೇ ಈತನು ಅಸೌಖ್ಯ ಬಿದ್ದುದಲ್ಲದೆ ಈತನ ತೊಡೆಯಲ್ಲೊಂದು ಬಾವು ಎದ್ದು ಬಹಳವಾಗಿ ಪೀಡಿಸಿತು. ದಿನಗಟ್ಟಳೆ ಈತನನ್ನು ಈ ಬಾವು ಬಾಧಿಸಿತು ಮತ್ತು ಈತನು ಗುಣಮುಖನಾಗುತ್ತ ಬಂದಂತೆ ಈತನ ವೈದ್ಯರು

"ಅಧ್ಯಕ್ಷರೆ, ಇನ್ನುಮುಂದಾದರೂ ದೈನಂದಿನ ಚಟುವಟಿಕೆಗಳನ್ನು ಸೀಮಿತಗೊಳಿಸಿರಿ, ಇಲ್ಲವಾದರೆ ನಿಮ್ಮ ಆರೋಗ್ಯವು ಪೂರ್ತಿ ಕೆಡುವುದು", ಎಂದು ಹೆದರಿಸಲೇಬೇಕಾಯಿತು.

ಲಿಯರನೊಡನೆ ಮತ್ತೂ ತಾನು ಒಬ್ಬನೇ ಆದರೂ ನಿತ್ಯವೂ ಪ್ರಾತಃ 5 ರಿಂದ 7ರತನಕ ಅಧ್ಯಕ್ಷನು ಅನಂತರ ಸುತ್ತಾಡಿಬರಲು ಆರಂಭಿಸಿದನು. ಇನ್ನು ಹಲವು ದಿನಗಳಲ್ಲಿ ಈತನು ಮಾರ್ತಾ ಮತ್ತು ಮಕ್ಕಳೊಡನೆ ಗಾಡಿಯಲ್ಲಿ ಕುಳಿತು ಸುತ್ತಿ ಬರುತ್ತಿದ್ದನು. ಇಂಥ ತಿರುಗಾಟಗಳನ್ನೇ ಆತನು ತನ್ನ ನಿತ್ಯದ ಅಂಗಸಾಧನೆ ಎಂದು ಕರೆದಿರುತ್ತಾನೆ.

ದೇಶದ ಸರಕಾರದಲ್ಲಿ ದುಡಿಯಬಲ್ಲ ಜನರನ್ನು ಈತನೇ ನೇಮಿಸಬೇಕಿತ್ತಷ್ಟೆ. ಮೇರಿಲೆಂಡದಿಂದೊಬ್ಬನನ್ನು ನ್ಯಾಯಾಲಯದಲ್ಲಿಯೂ, ಹೆನ್ರಿ ನೋಕ್ಸನನ್ನು ಯುದ್ಧಖಾತೆಯ ಕಾರ್ಯದರ್ಶಿಯಾಗಿಯೂ, ಹೇಮಿಲ್ಟನನ್ನು ಖಜಾನೆ, ಹಣಕಾಸುಗಳ ಖಾತೆಗೂ ಮತ್ತು ಥೋಮಸ್ ಜೆಫ್ಫರ್‌ಸನ್‌ನನ್ನು ಪ್ರಧಾನ ಕಾರ್ಯದರ್ಶಿಯಾಗಿಯೂ ನೇಮಿಸಲಾಯಿತು. ಜೆಫ್ಫರ್ಸನ್‌ನ ಆಯ್ಕೆಯಾದರೋ ಸ್ವಲ್ಪಮಟ್ಟಿಗೆ ಹೆದರಿಕೆಯನ್ನೂ ಹುಟ್ಟಿಸುತ್ತಿತ್ತು. ಈತನು ಜನರ ವೈಯಕ್ತಿಕ ಸ್ವಾತಂತ್ರ್ಯದ ಪ್ರವಾದಿಯಾಗಿರುತ್ತ ಕೆಲವೇ ಮಂದಿಯ ಆಳ್ವಿಕೆಯನ್ನು ದಬ್ಬಾಳಿಕೆ ಎನ್ನಲಾರನೆ? ಎಂಬ ಶಂಕೆಯು ಈತನಲ್ಲಿ ಬಲವಾಗಿತ್ತು.

ಇತ್ತೀಚೆಗೆ ಫ್ರಾನ್ಸಿನಲ್ಲಿ ನಡೆದ ಚಮತ್ಕಾರಗಳೂ ಈ ಸಂದೇಹಕ್ಕೆ ಕಾರಣವಾಗಿದ್ದುವು. ಜೆಫ್ಫರ್ಸ್ನನು ಫ್ರಾನ್ಸ್‌ನಲ್ಲಿ ಇತ್ತೀಚೆಗೆ ನಡೆದ ಕ್ರಾಂತಿಯನ್ನು ಮುಕ್ತಕಂಠದಿಂದ ಹೊಗಳಿದ್ದನು. ಇಲ್ಲಿಯೂ ಜನ ಕ್ರಾಂತಿಪರರೆಂದೂ, ಸಂಪ್ರದಾಯವಾದಿಗಳೆಂದೂ ಬೇರೆ ಬೇರೆ ಪಕ್ಷಗಳನ್ನೂ ಕಟ್ಟತೊಡಗಿದರು. ಲಾಫೇಯು ಕ್ರಾಂತಿಪರ ಜನರ ಮುಖಂಡ

ನಾದುದನ್ನೂ ಪಕ್ಷಭೇದವಿಲ್ಲದೆ ಎಲ್ಲರೂ ಹೊಗಳಿದ್ದರು. ಅಲ್ಲದೆ ಅಮೇರಿಕದವರ ಪ್ರಭಾವವು ಫ್ರಾನ್ಸ್‌ನ ಮೇಲೆ ಬಿದ್ದುದರಿಂದಲೇ ಫ್ರಾನ್ಸ್‌ನಲ್ಲಿ ಕ್ರಾಂತಿಯಾಗಲು ಕಾರಣವಾಯಿತು ಎಂದು ಜೆಫ್ಫರ್ಸನ್ ಬರೆದಿದ್ದನು. ಇತರ ಚಿಕ್ಕ ಅಧಿಕಾರಿಗಳೂ ಕ್ರಾಂತಿಯನ್ನು ಸ್ವಾಗತಿಸಿದ್ದರು. "ಆದರೆ ಈ ಕ್ರಾಂತಿಯು ಎಲ್ಲಿ ನಿಲ್ಲಬಲ್ಲುದು? ಹೇಗೆ ನಿಲ್ಲುವುದು?" ಎಂಬ ಶಂಕೆಗಳು ಜಾರ್ಜ್ ವಾಶಿಂಗ್‌ಟನ್‌ನನ್ನು ಭಾದಿಸ ಹತ್ತಿದುವು.

ಆಗಸ್ಟ್‌ನಲ್ಲಿ ಬಂದ ವಾರ್ತೆಯು ಫ್ರೆಂಚ ಸರಕಾರವು ಪತನಹೊಂದಿ ಲಾಫೇಯು ಕ್ರಾಂತಿಕಾರರ ಮುಖಂಡನಾಗಿದ್ದನೆಂಬುದನ್ನು ಅಮೇರಿಕಕ್ಕೆ ತಿಳಿಸಿತು.

ಇಲ್ಲಿ ಅಮೇರಿಕದ ಅಧ್ಯಕ್ಷನ ಮನಸ್ಸನ್ನು ಹಲವಾರು ಯೋಚನೆಗಳು ಕಾಡಲಾರಂಭಿಸಿದುವು. ವರ್ಸೆಲಿಯಲ್ಲಿ ನಡೆಯುತ್ತಿರುವದೆಲ್ಲಕ್ಕಿಂತಲೂ ತಮ್ಮ ರಾಷ್ಟ್ರದ ಘಟನೆ ಮತ್ತು ನ್ಯಾಯಾಂಗದ ರಚನೆಗೆ ಈತನ ಮನಸ್ಸಿನಲ್ಲಿ ಹೆಚ್ಚಿನ ಮಹತ್ವವಿತ್ತು. ಜೋನ್ ಡೇಯನ್ನು ಮುಖ್ಯ ನ್ಯಾಯಾಧೀಶನಾಗಿಯೂ ಎಡ್ಮಂಡ್ ರೇಂಡೋಲ್ಫನನ್ನು ಮುಖ್ಯ ಅಟೋರ್ನಿಯಾಗಿಯೂ ಈತನು ನೇಮಿಸಿದನು. ಆರ್ಥಿಕ ಪರಿಸ್ಥಿತಿಯನ್ನರಿತು ಅದನ್ನು ಪೂರ್ತಿ ಸುಧಾರಿಸುವಂತೆ ಹೇಮಿಲ್ಟನನ್ನೂ ಕೇಳಿಕೊಳ್ಳಲಾಯಿತು.

ಇದೇ ಸಮಯ, ವಾಶಿಂಗ್‌ಟನ್‌ನ ತಾಯಿಯು ತೀರಿಕೊಂಡಳು. ತನ್ನ ತಂಗಿಯನ್ನು ಸಂತಯಿಸಿ ಮೇಲಿನ ವಿಚಾರಗಳನ್ನೆಲ್ಲ ಅವಳಿಗೆ ವಾಶಿಂಗ್‌ಟನ್ ಬರೆದು ಒಪ್ಪಿಸಿದನು.

ಮೊದಲನೆ ಕಾಂಗ್ರೆಸ್‌ನ ಸಭೆಯಲ್ಲಿ ರಿಚಾರ್ಡ್ ಹೆನ್ರಿ ಲೀಯು ಘಟನೆಗೆ ತಿದ್ದುಪಡಿಗಳನ್ನು ಸೂಚಿಸಿ ಹಕ್ಕುಗಳ ಮಸೂದೆಯನ್ನು ಈ ಸಭೆಯೂ, ಸರಕಾರವೂ ಅಂಗೀಕರಿಸಿದುವು.

ದಕ್ಷಿಣ, ಉತ್ತರ ಭಾಗಗಳಲ್ಲಿ ಸೌಹಾರ್ದವನ್ನುಂಟುಮಾಡಲು ಅಕ್ಟೋಬರದಲ್ಲಿ ವಾಶಿಂಗ್‌ಟನ್ ನ್ಯೂಇಂಗ್ಲಂಡ್ ಪ್ರಾಂತಕ್ಕೆ ಭೇಟಿ

ಯನ್ನಿತ್ತನು. ಅಲ್ಲಿನ ಎಲ್ಲಾ ಚಟುವಟಿಕೆಗಳಲ್ಲೂ ಈತನು ಭಾಗ ವಹಿಸಿದನು.

ನವಂಬರದಲ್ಲಿ ಹಿಂದೆ ಬಂದ ಪ್ರೆಸಿಡೆಂಟನು ದೇಶದಲ್ಲಿ ನೆಲೆಯಾದ ಶಾಂತಿಯ ಬಗ್ಗೆ ಪ್ರಾರ್ಥನೆಯನ್ನು ಸಲ್ಲಿಸುವ ಕೃತಜ್ಞತೆಗಳನ್ನರ್ಪಿಸುವ ಮೊದಲನೆ ದಿನವನ್ನು ಆಚರಿಸಲು ರಾಷ್ಟ್ರಕ್ಕೆ ಕರೆ ಇತ್ತನು.

ಇಷ್ಟರಲ್ಲಿ ಜೆಫ್ಫರ್ಸನ್ ಬಂದು ಅಮೇರಿಕದಲ್ಲಿಳಿದನು, ಆತನಿಗೆ ನೇಮಕದ ವಿಚಾರವನ್ನು ತಿಳಿಸಿದರೂ ಮಾರ್ಚ್‌ನ ತನಕ ತಾನು ಹಾಜರಾಗಲಿಕ್ಕಿಲ್ಲವೆಂದುದರಿಂದ ಕೆಲವರು ಸ್ವಲ್ಪ ಕ್ಷೋಭೆಗೀಡಾದರು.

ಇತ್ತ ಅಮೇರಿಕದ ವಾಣಿಜ್ಯವು ಬಹಳ ಹೀನ ಸ್ಥಿತಿಯಲ್ಲಿತ್ತು. ಯುದ್ಧಾನಂತರದಲ್ಲಿ ಬ್ರಿಟಿಷ ವಸ್ತುಗಳು ವೆಸ್ಟ್ ಇಂಡೀಸ್ ದ್ವೀಪ ಗಳಿಂದಲೂ ಬರುತ್ತಿದ್ದಿಲ್ಲ. ಅಮೇರಿಕದ ನಾವೆಗಳು ಚೀನಾದ ತನಕ ಹೋಗಿ ಬರಲಾರಂಭಿಸಿದುವು. ಆದರೂ ಐರೋಪ್ಯ ರಾಷ್ಟ್ರಗಳೊಡನೆ ವಾಣಿಜ್ಯ ವ್ಯವಹಾರಗಳ ಅವಶ್ಯಕತೆಯು ಅಮೇರಿಕಕ್ಕೆ ಇತ್ತು. ಫ್ಲೋರಿಡಾ ಪ್ರಾಂತವನ್ನು ಆಕ್ರಮಿಸಿದ್ದ ಸ್ಪೈನ್ ಕೂಡ ಮಿಸಿಸಿಪಿ ನದಿಯಲ್ಲಿ ಅಮೇರಿಕನರನ್ನು ಸಾಗಲು ಬಿಡುತ್ತಿದ್ದಿಲ್ಲ. ಇವೆಲ್ಲಾ ವಿಚಾರಗಳಿಗಿಂತಲೂ ಆರ್ಥಿಕ ಸ್ಥಿತಿಯು ಅತ್ಯಂತ ಕೆಳಮಟ್ಟದಲ್ಲಿತ್ತು.

ಜನವರಿ 1790ರಲ್ಲಿ, ಹೇಮಿಲ್ಟನನ ಹಂಚಿಕೆಯನ್ನು ಕಾಂಗ್ರೆಸಿನ ಮುಂದಿಡಲಾಯಿತು. ಇದರಲ್ಲಿ ಹೆಚ್ಚಿನ ತೆರಿಗೆಯನ್ನು ಹೊರಿಸುವ ಪ್ರಶ್ನೆಯಿತ್ತು. ಆಗಲೇ ತನ್ನ ಪಾಲಿಗೆ ಬಂದ ಸಾಲದ ಹೆಚ್ಚಿನಂಶವನ್ನು ಪಾವತಿ ಮಾಡಿದ ವರ್ಜೀನಿಯಾ ಪ್ರಾಂತವು ಇದನ್ನು ಪ್ರಬಲವಾಗಿ ವಿರೋಧಿಸಿತು. ಹಾಗೆಯೇ ದಕ್ಷಿಣದ ಪ್ರಾಂತಗಳೂ ಇದನ್ನು ವಿರೋ ಧಿಸಿದ್ದುವು.

ಹೀಗೆ ಚರ್ಚೆಯು ವಿಷಮವಾಗುವುದರಲ್ಲಿತ್ತು, ಐಕ್ಯವನ್ನೇ ಕೆಡಿಸಿ ಬಿಡುತ್ತದೋ ಎನ್ನುವ ಭಾವನೆ ಎಲ್ಲರಿಗೂ ಬಂದಿತ್ತು. ಹೇಮಿಲ್ಟನನು ಆಗ ಜೆಫ್ಫರ್ಸನ್ನನೊಡನೆ ಸಹಕರಿಸುವಂತೆ ಪ್ರಾರ್ಥಿಸಿಕೊಂಡನು. ಈತನ ಪ್ರಚಾರಕ್ಕೀಡಾದ ದಕ್ಷಿಣದ ಪ್ರತಿನಿಧಿಗಳು ಇದನ್ನು ತೆರಲು ಒಪ್ಪಿ ದರು. ಈ ಬಗ್ಗೆ ಮುಖ್ಯ ಪಟ್ಟಣವನ್ನೇ ಅಲ್ಲಿ ಸ್ಥಾಪಿಸುವುದಾಗಿ

ಭರವಸೆಯನ್ನೀಯಲಾಯಿತು. ಅಷ್ಟರ ತನಕ ಫಿಲಡೆಲ್ಫಿಯಾವೇ ಮುಖ್ಯ ನಗರವಾಗಿತ್ತು. ಕೂಡಲೇ ಪಿಯರೇಲಾ ಎನ್ಫಾ ಎಂಬವನ ಸಹಾಯವನ್ನು ಪಡೆದು ಆಂಡ್ರೂ ಎಲಿಕ್ಸಾಲ್ ಎಂಬಾತನು ಹೊಸ ರಾಜಧಾನಿಯನ್ನು ಕಟ್ಟುವ ಕ್ರಮವನ್ನು ಕೈಗೊಂಡನು.

ಇದರ ನಂತರ ಕೆಲವು ದಿನಗಳ ತನಕ ಮೌಂಟ್ ವೆರ್ನ್ನಿನಲ್ಲಿ ವಾಶಿಂಗ್‌ಟನ್ ವಿಶ್ರಮಿಸಿದನು. ಈ ರಜೆಯ ನಂತರ ಹಿಂದಿರುಗಿದವನಿಗೆ ಹೇಮಿಲ್ಟನ್ ಮತ್ತು ಜೆಫ್ಫರ್ಸನ್ನರಲ್ಲಿ ಪ್ರಬಲ ವಿರೋಧವು ಬೆಳೆಯುತ್ತಿದೆ ಎಂಬುದು ತಿಳಿದು ಬಂತು. ತನಗೆ ವಿಶ್ವಾಸವಿಲ್ಲದ ಆರ್ಥಿಕ ವಿಧಾನಕ್ಕೆ ತನ್ನ ಬೆಂಬಲವನ್ನು ಪಡೆದಿದ್ದಾನೆಂದು ಹೇಮಿಲ್ಟನನನ್ನು ಜೆಫ್ಫರ್ಸನ್ ದೂರ ಹತ್ತಿದ್ದನು. ಹೇಮಿಲ್ಟನ್‌ನ ಪಕ್ಷಕ್ಕೆ ವಾಶಿಂಗ್‌ಟನ್‌ನ ಒಲವು ಇದ್ದರೂ ಜೆಫ್ಫರ್ಸನ್‌ನಂತಹ ಮೇಧಾವಿಯನ್ನು, ನಾಣ್ಯಗಳ ದಶಮಾಂಶ ಪದ್ಧತಿಯನ್ನು ಯೋಜಿಸಿದ ಈ ಬುದ್ಧಿವಂತನನ್ನು ವಾಶಿಂಗ್‌ಟನ್ ಉಪೇಕ್ಷಿಸುವುದು ಸಲ್ಲದ ಮಾತಾಗಿತ್ತು.

1790ರಲ್ಲಿ ಹೇಮಿಲ್ಟನನು ಯುನೈಟೆಡ್ ಸ್ಟೇಟ್ಸ್‌ನ ಬೇಂಕನ್ನು ಸ್ಥಾಪಿಸತಕ್ಕದೆಂಬ ಠರಾವನ್ನು ತಂದನು. ಇದನ್ನು ಜೇಮ್ಸ್ ಮೇಡಿಸನ ಮೊದಲಾದವರು ವಿರೋಧಿಸಿದರು. ಇದಕ್ಕೆ ದೇಶದ ಘಟನೆಯಲ್ಲೇನು ಪ್ರಮಾಣವಿದೆ? ಎಂಬ ಪ್ರಶ್ನೆಯನ್ನು ವಿರೋಧಕರು ಕೇಳಿದರು. ಕೂಡಲೇ ಹೇಮಿಲ್ಟನನು **Article 1,** ಸೆಕ್ಷನ್ 8 ಮತ್ತು 18ನೇ ಕ್ಲೋಸನ್ನು ಎತ್ತಿ ತೋರಿಸಿ 'ದೇಶದ ಯಾವ ಖಾತೆಯಲ್ಲಾದರೂ, ಯಾವ ಆಫೀಸಿನಲ್ಲಾದರೂ ಸಾರ್ವತ್ರಿಕ ಹಿತದೃಷ್ಟಿಯಿಂದ ಏನನ್ನು ಮಾಡಬೇಕೆಂದು ಸರಕಾರವು ನಿಶ್ಚಯಿಸಿದರೂ ಅದನ್ನು ಮಾಡಬಹುದು' ಎಂಬ ಪ್ರಮಾಣವನ್ನು ಹೇಳಿದನು. ಅಂತೂ ದೇಶದ ಹಣವನ್ನುಳಿಸಿ ಕ್ರಮ ಪ್ರಕಾರ ಸಾಮುದಾಯಿಕ ಸಾಲಗಳನ್ನು ಪಾವತಿ ಮಾಡಲು ಇಂಥ ಬೇಂಕು ಅವಶ್ಯವೆಂಬ ತನ್ನ ವಾದವನ್ನು ಹೇಮಿಲ್ಟನ್ ಮುಂದರಿಸಿದನು.

ಅಂತೂ ಘಟನೆಯ ಈ ಶರ್ತವೇ ಅಥವಾ ವಾಕ್ಯವೇ ಮುಂದೆ ದೇಶದಲ್ಲಿ ಎರಡು ರಾಜಕೀಯ ಪಕ್ಷಗಳ ಸ್ಥಾಪನೆಗೆ ಕಾರಣವಾಯಿತು.

ಎನ್ನಲಾಗಿದೆ. ತಮಗೆ ಬೇಕಾದಂತೆ ಇಂಥ ಶರ್ತಗಳನ್ನು ಬಳಸಿಕೊಳ್ಳ ತಕ್ಕುದಲ್ಲವೆಂದು ವಾದಿಸುವವರ ಗುಂಪಿಗೆ ಜೆಫ್ಫರ್ಸನ್ ಮತ್ತು ಮೇಡಿ ಸನ್‌ರು ಮುಂದಾಳುಗಳಾಗಿದ್ದರು. ಇವರನ್ನು ಮೊದಲು ರಿಪಬ್ಲಿಕನ ರೆಂದು ಕರೆದರೂ ಮುಂದೆ ಡೆಮೊಕ್ರೆಟಿಕ್ ರಿಪಬ್ಲಿಕನರೆಂದು ಕರೆಯ ಲಾಯಿತು. ಇವರಿಗೂ ಸುಧಾರಣೆ ಮತ್ತು ಘಟನೆಯ ವೈಶಾಲ್ಯವನ್ನು ಎತ್ತಿ ಹಿಡಿದವರಿಗೂ ತುಂಬಾ ವಾಗ್ಯುದ್ಧಗಳು ನಡೆದು, ಕೊನೆಗೂ ಈ ಮಸೂದೆಯು ಅಂಗೀಕಾರವಾಯಿತು.

1791ರಲ್ಲಿ, ಜನರಲ್ ಸೈಂಟ್ ಕ್ಲೇರನನ್ನು ಆವರಿಸಿ ಓಹಿಯೋ ಪ್ರಾಂತದಲ್ಲಿ ಇಂಡಿಯನರು ಕೊಂದು ಹಾಕಿದರು. ಆದರೆ ಇವರ ಹುಟ್ಟಡಗಿಸುವಂತೆ ಆಂಥೊನಿ ವೈನ್‌ನನ್ನು ಕಳುಹಲಾಯಿತು.

1792ರಲ್ಲಿ ರಿಪಬ್ಲಿಕನರ ಭಾವನೆಗಳು ಬಲವತ್ತರವಾಗಲಾ ರಂಭಿಸಿದುವು. ಇತ್ತ ಬೇಂಕಿನ ಹಣವನ್ನೆಲ್ಲ ತುಂಬಲಾಗಿ ಅದಕ್ಕೂ ಹೆಚ್ಚಿನ ಹಣವು ಕೂಡಿ ಬಂದಿತ್ತು. ಇದರಿಂದಾಗಿ ಹೇಮಿಲ್ಟನನ ನೀತಿಯ ಟೀಕೆಗಳು ಕೇಳಿಬಂದುವು. ನೂತನ ವ್ಯಾಪಾರಗಳೂ ವಹಿವಾಟು ಗಳೂ ಆರಂಭವಾದುವು. ಕೆಲವು ಧನಿಕರು ದಿವಾಳಿಹೋದರೂ ದೇಶದ ಒಟ್ಟು ವಾಣಿಜ್ಯ ವ್ಯವಹಾರಗಳು ಸುಧಾರಣೆಗೊಂಡುವು.

ಅತ್ತ ಪೋಲೆಂಡ್ ಮತ್ತು ಪ್ರಶ್ಯಾಕ್ಕೆ ಓಡಿಹೋದ ಧನಿಕರ ಮೇಲೆ ಫ್ರಾನ್ಸ್ ಯುದ್ಧವನ್ನು ಸಾರಿತು. ಲಾಫೇಯು ಈ ಸೈನ್ಯದ ಸರ್ವಾಧಿಕಾರಿಯಿದ್ದನು. ಆದರೆ ಫ್ರಾನ್ಸಿನಲ್ಲಿ ಪೇರಿಸಿನಲ್ಲಿ ನಿರ್ಧನಿಕರ ಮತ್ತು ಕ್ರಾಂತಿಕಾರರ ಉಪಟಳವು ಲೆಕ್ಕವಿಲ್ಲದಷ್ಟು ಮೀರಿ ಹೋಯಿತು. ಅರಸ ಮತ್ತು ಅರಸಿಯರನ್ನು ಎಳಿದು ಬಂಧಿಸ ಲಾಯಿತು. ಲಾಫೇಯಿಂದಲೂ ಇದನ್ನು ನಿಲ್ಲಿಸಲಾಗಲಿಲ್ಲ. ಹೆದರಿಕೆ ಬೆದರಿಕೆಗಳೇ ದೇಶದಲ್ಲಿ ತಾಂಡವವಾಡಹತ್ತಿದುವು. ಲಾಫೇಯು ಓಡಿ ಹೋಗಲೆತ್ನಿಸಿದಾಗ ಈತನನ್ನು ಪ್ರಶ್ಯನರು ಹಿಡಿದು ಬಂಧಿಸಿದರು. ಹೀಗೆ ಹಿಂಸ್ರ ಕಾರ್ಯಕ್ರಮಗಳಿಂದ ಫ್ರಾನ್ಸ್ ಅಧಃಪತನದ ಹಾದಿಯನ್ನು ಹಿಡಿದಂತಿತ್ತು ಎಂಬುದನ್ನು ಗಮನಿಸಿದಾಗ ವಾಶಿಂಗ್‌ಟನ್‌ನಿಗೆ ಮುಳ್ಳು

ಚುಚ್ಚಿದಂತಾಯಿತು. ಇಲ್ಲಿಯೂ ಎಲ್ಲೆಡೆಗಳಲ್ಲೂ ವಾಗ್ಯುದ್ಧಗಳು ಬಿರುಸಾಗಿ ನಡೆಯುಹತ್ತಿದ್ದುವು. ಪರಿಣಾಮವೇನಾಗಬಹುದು? ಈ ಪ್ರಶ್ನೆಯೇ ಕರುಳನ್ನು ಕತ್ತರಿಸುತ್ತಿತ್ತು. ತಾನು ಇಂಥ ಹುದ್ದೆಯನ್ನು ಬಿಟ್ಟುಬಿಡುವುದೇ ಒಳ್ಳೆಯದೆಂದು ಈತನು ಭಾವಿಸಹತ್ತಿದನು. ಇದನ್ನು ಜೇಮ್ಸ್ ಮೇಡಿಸನ್‌ನಿಗೂ ತಿಳಿಸಿದನು.

"ನೀವು ಬಿಡಬಾರದು, ನಿಮ್ಮನ್ನು ಬಿಟ್ಟರೆ ಈಗ ಯಾವನೂ ನಮ್ಮ ರಾಷ್ಟ್ರದ ಸೂತ್ರಧಾರಕನಾಗಲಾರ, ಪಾರ್ಟಿಗಳೇನೋ ಬೆಳೆಯುತ್ತಿವೆ. ಆದರೆ, ಇವುಗಳಲ್ಲಿ ನೀವೆಣಿಸಿದಷ್ಟು ವೈಷಮ್ಯದ ಮನೋವೃತ್ತಿ ಇಲ್ಲ"ವೆಂದು ಮೇಡಿಸನ್ ತನ್ನ ಹೃದಯದ ಅಭಿಪ್ರಾಯವನ್ನೇ ಅನುಮೋದಿಸಿದನು.

ಅತ್ತ ಜೆಫ್ಫರ್ಸನ್ನನೂ, "ಉತ್ತರ ದಕ್ಷಿಣಗಳೆರಡೂ ನಿನ್ನನ್ನೇ ಆಶಿಸುತ್ತಿವೆ, ನಿನ್ನನ್ನೇ ನಂಬುತ್ತಿವೆ. ನೀನೇನನ್ನು ಹೇಳಿದರೂ ಆಜ್ಞಾಧಾರಕಗಳಾಗಿ ವರ್ತಿಸುತ್ತವೆ" ಎಂದು ಬರೆದಿದ್ದನು.

ಹೇಮಿಲ್ಟನ್ನನೂ ಈತನನ್ನು ಒತ್ತಾಯಿಸಿದ್ದನು. ಈ ಎರಡು ಕಾರ್ಯದರ್ಶಿಗಳು ಪ್ರತ್ಯೇಕ ತತ್ವಗಳನ್ನೇ ಸ್ಥಾಪಿಸಿ ಪರಸ್ಪರ ದೂರವಾಗುತ್ತಿದ್ದರೂ ಇಬ್ಬರಲ್ಲೂ ಅಧ್ಯಕ್ಷರ ಬಗ್ಗೆ ಏಕಪ್ರಕಾರವಾದ ನಂಬಿಕೆ ಮತ್ತು ಅಭಿಮಾನಗಳಿದ್ದುವು.

ಅಂತೂ ಎರಡನೆ ಬಾರಿ ಈತನು ಅಧ್ಯಕ್ಷನಾಗಿ ನಿಲ್ಲಲು ತನ ಸಮ್ಮತಿಯನ್ನಿತ್ತಾಗ ಮಾರ್ತಾಳೊಡನೆ, "ಪೇಟ್ಸಿ ನಾನು ಈ ಆಟಕ್ಕೆಲ್ಲಾ ಮುದುಕನಾಗುತ್ತಿದ್ದೇನೆ. ಆದರೆ, ಉಪಾಯವಿಲ್ಲ; ಇನ್ನೂ ಸ್ವಲ್ಪ ತಾಳಬೇಕಾಗಿದೆ" ಎಂದು ಮರುಗಿದನು.

ಮಾರ್ಚ್ 4, 1783ರಲ್ಲಿ ಪುನಃ ಕಾಂಗ್ರೆಸ್ ಭವನದಲ್ಲಿ ಈತನು ಅಧಿಕಾರಾರೂಢನಾದನು. ಆದರೆ ಈ ಬಾರಿ ಈತನಲ್ಲಿ ಹೆಚ್ಚಿನ ಸ್ವವಿಶ್ವಾಸವಿದ್ದಿತು. ಸರಕಾರವು ಅವನ ಅಧೀನವಾಗಿತ್ತು.

ಅತ್ತ ಸಮುದ್ರದಾಚೆಯಿಂದ ಅರಸ 16ನೇ ಲೂಯಿಯನ್ನು ಗಲ್ಲಿಗೇರಿಸಿದ ಸುದ್ದಿಯೂ ಬಂದಿತ್ತು. ಇಂಥ ಅನಾಹುತಗಳ ತ್ಯಾಗ

ಪ್ರಮಾದಗಳೇನೂ ಅಮೇರಿಕದಲ್ಲಿ ನಡೆದಿರಲಿಲ್ಲವೆಂಬುದೇ ಸಮಾಧಾನ ವಾಗಿತ್ತು. ಮುಂದಿನ ನಾಲ್ಕು ವರ್ಷಗಳಂತೂ ಈತನ ಜೀವನದಲ್ಲೇ ಅತ್ಯಂತ ಕಠಿಣ ಮತ್ತು ಉತ್ಕಂಠೆಯ ವರ್ಷಗಳಾಗಿದ್ದುವು.

ಅಧ್ಯಾಯ ೧೬

"ಸೇಮ್, ಡಾ। ಕ್ರೈಕರೂ ನಾನೂ ವಾಚನಾಲಯದಲ್ಲಿ ಕುಳಿತಿರು ವೆವು. ಟಪ್ಪಾಲು ಬಂದೊಡನೆಯೇ ಅದನ್ನು ತಂದುಕೊಡುವೆಯಂತೆ," ಎಂದವನೇ ಜಾರ್ಜ್ ವಾಶಿಂಗ್‌ಟನ್ ಕ್ರೈಕರೊಡನೆ ಮುಂದರಿದನು. 'ಖಂಡಿತಕ್ಕೂ ತರುವೆ'ನೆನ್ನುತ್ತಾ ನೀಗ್ರೋ ಆಳು ವಾಚನಾಲಯದ ಬಾಗಿಲನ್ನು ತೆರೆದನು.

"ನೀನು ಮೌಂಟ್‌ವೆರ್ನಾನಿಗೆ ಬಂದುದು ಒಳ್ಳಿತೇ ಆಯಿತು. ಇನ್ನೂ ಕೆಲವು ವಾರಗಳತನಕ ಇರುವೆಯಷ್ಟೆ", ಎಂದರು ಡಾ| ಕ್ರೈಕ್.

"ನನ್ನ ಯೋಜನೆಯೇನೋ ಹಾಗಿದೆ, ಆದರೆ ಯುರೋಪದ ಮೇಲೆಲ್ಲಾ ಯುದ್ಧದ ಕಾರ್ಮೋಡಗಳು ಕವಿದಿವೆ. ಎಲ್ಲಾದರೂ ಯುದ್ಧವಾರಂಭಿಸಿದರೆ............'' ಮಾತು ಮುಗಿವಷ್ಟರಲ್ಲಿ ಸೇಮ್ ಟಪ್ಪಾಲನ್ನು ತಂದಿತ್ತನು.

ಜೆಫ್ಫರ್ಸನ್‌ನಿಂದ ಬಂದ ಪತ್ರವೊಂದನ್ನು ತೆಗೆದು ವಾಶಿಂಗ್‌ಟನ್ ಓದಿ ಉದ್ಗಾರತೆಗೆದನು "ಯುದ್ಧ! ಇಂಗ್ಲಂಡ್ ಫ್ರಾನ್ಸ್‌ಗಳೊಳಗೆ ಯುದ್ಧವು ನಿಶ್ಚಯವಾಗಿದೆ. ಇದೇನು, ನಮ್ಮ ಹಳೆ ಸ್ನೇಹಿತ ಮತ್ತು ಹಳೇ ವೈರಿಗಳನಡುವೆ ಯುದ್ಧ! ಇದರಲ್ಲೇನುಮಾಡೋಣ? ಡಾ| ಕ್ರೈಕ್ ನಾಳೆಯೇ ನಾನು ಫಿಲಡೆಲ್ಫಿಯಾಕ್ಕೆ ಹೊರಡುವೆ".

"ನಾಳೆಯೇ, ಇದೇನು ನಿನ್ನ ಮನೆ ವಾರ್ತೆಯ ಭೂಮಿ ಹೊಲ ಗಳತ್ತ ಕೊಂಚವಾದರೂ ಗಮನವೇ ಬೇಡವೆ?"

ಅವಸರದಿಂದ ಉತ್ತರವು ಬಂದಿತು "ರಾಷ್ಟ್ರೀಯ ವಿಚಾರಗಳ ಎದುರಿಗೆ ಮೌಂಟ್ ವೆರ್ನಾನಿನ ವಿಚಾರಗಳು ಅತ್ಯಂತ ಕ್ಷುಲ್ಲಕವಲ್ಲವೆ?"

ವಾಶಿಂಗ್‌ಟನ್‌ನನ್ನು ಅಭಿನಂದಿಸುತ್ತ "ಭಗವಂತ, ಈ ಮಹಾತ್ಮ

ನಿರುವ ತನಕ ನಾವು ನಿಶ್ಚಿಂತರಾಗಿರಬಹುದಲ್ಲವೆ?" ಎಂದು ತನಗೆ ತಿಳಿಯದಂತೆಯೇ ಡಾ| ಕ್ರೈಕ್ ಉದ್ಗಾರ ತೆಗೆದರು.

ಅತ್ತ ತನ್ನ ಸಚಿವರನ್ನು ತನಗೆ ಬೇಕಾದಂತೆ ತಿರುಗಿಸಬಲ್ಲನೆ ವಾಶಿಂಗ್‌ಟನ್? ಜೆಫ್ಫರ್ಸನ್ನನ ಯೋಚನೆ ಏನಿರಬಹುದು? ಹೀಗೆ ಇನ್ನೂ ಒಂದುಗೂಡದ ಅವ್ಯವಸ್ಥಿತವಾದ ನಾಡು ತಟಸ್ಥವಾಗಿರುವುದು ಸಾಧ್ಯವೆ? ಎಂದು ಆಲೋಚಿಸುತ್ತ ವಾಶಿಂಗ್‌ಟನ್ ಫಿಲಡೆಲ್ಫಿಯಾವನ್ನು ಮುಟ್ಟಿದನು.

ವಾಚನಾಲಯುದಲ್ಲಿ ಮಧ್ಯದ ಮೇಜಿನ ಸುತ್ತಲೂ 5 ಮಂದಿ ದೇಶದ ಮುಖ್ಯಸ್ಥರು ಕುಳಿತಿದ್ದಾರೆ; ಬ್ರಿಟಿಷರ ಪರ ವಾದಿಸುವ ಹೇಮಿಲ್ಟನ್, ಯಾವುದನ್ನು ಆಜ್ಞಾಪಿಸಿದರೂ ತಟ್ಟನೆ ಕಾರ್ಯಾಚರಣೆಗಿಳಿಯಲು ಸಿದ್ಧನಿದ್ದ ನೋಕ್ಸ್, ಫ್ರೆಂಚರ ಪರವಾಗಿ ವಾದಿಸುವ ಸ್ವಾತಂತ್ರ್ಯಪ್ರಿಯ ಜೆಫ್ಫರ್ಸನ್ ಮತ್ತು ಇತ್ತಲೂ ಅತ್ತಲೂ ಓಲಾಡುವ ಮನಸ್ಸುಳ್ಳ ರೇಂಡೋಲ್ಫ್, ಇವರೆಲ್ಲರ ಎದುರಿಗೆ ತಟಸ್ಥನಾಗಿಯೂ ಗಂಭೀರನಾಗಿಯೂ ಕುಳಿತ ವಾಶಿಂಗ್‌ಟನ್.

ಎಲ್ಲರೂ ತಮ್ಮ ರಾಷ್ಟ್ರವು ತಟಸ್ಥ ನೀತಿಯನ್ನನುಸರಿಸತಕ್ಕದೆಂದು ತೀರ್ಮಾನಿಸಿದರು. ಎರಡನೆಯದಾಗಿ ಹೊಸ ಫ್ರೆಂಚ ಮಂತ್ರಿಯನ್ನು ಸ್ವಾಗತಿಸುವುದೆಂದೂ ತೀರ್ಮಾನವಾಯಿತು.

ಆದರೆ ಈ ಮಂತ್ರಿ ಎಡ್ಮಂಡ್ ಚಾರ್ಲ್ಸ್ ಗೇನೇಯು ರಾಜಧಾನಿಯಿಂದ ಬಹಳ ದೂರದಲ್ಲಿಳಿದು ಅನೇಕ ಜನರನ್ನು ಕಂಡು ಅನಂತರ ರಾಜಧಾನಿಗೆ ಬರುತ್ತಿದ್ದನೆಂಬುದು ಎಲ್ಲರೂ ಒಪ್ಪದ ಮಾತಾಗಿತ್ತು.

"ಇದೇನು ಹೀಗೆ? ಈತನು ಚಾರ್ಲ್ಸ್‌ಟನ್‌ನಲ್ಲಿಳಿದು ನೂರಾರು ಮಂದಿಯನ್ನು ನೋಡಿದ ನಂತರವೇ ಅಧ್ಯಕ್ಷನನ್ನು ಕಾಣುತ್ತಿದ್ದಾನೆ? ಇದು ಶುದ್ಧ ಅನ್ಯಾಯ", ಎಂದು ಹೇಮಿಲ್ಟನ್ ಜೆಫ್ಫರ್ಸನ್ನನನ್ನು ಕಂಡು ಮೂದಲಿಸಿ ಮಾತನಾಡಿದನು.

ಜೆಫ್ಫರ್ಸನ್ನನಾದರೋ ಇದು ಶುದ್ಧ ತಪ್ಪೆಂದು ಒಪ್ಪಿದನು.

ಪ್ರೆಸಿಡೆಂಟನಾದರೋ ತಮ್ಮ ಶಾಂತಿಪ್ರಿಯತೆಯನ್ನೂ ತಮ್ಮ ರಾಷ್ಟ್ರದ ತಟಸ್ಥ ನೀತಿಯನ್ನೂ ಘೋಷಿಸಿದನು.

ಇತ್ತ ಇಂಗ್ಲಂಡದ ವಿರುದ್ಧವಾಗಿ ಗೇನೇಯು ಭಾಷಣಮಾಡುತ್ತ ಫ್ರಾನ್ಸಿನ ಪರವಾಗಿ ಜನರಲ್ಲಿ ಕರುಣೆಯನ್ನು ಹುಟ್ಟಿಸುತ್ತಿದ್ದನು. ಇದನ್ನು ಪ್ರತಿಭಟಿಸಿ ಬ್ರಿಟಿಷ್ ಪ್ರತಿನಿಧಿಯು ದೂರಿಟ್ಟಿದ್ದನು.

ತಟಸ್ಥ ನೀತಿಯನ್ನು ಪಾಲಿಸುವಂತೆ ಯಾವ ರೇವಿನಲ್ಲೂ ಯುದ್ಧ ಹಡಗಗಳನ್ನು ನಿಲ್ಲಗೊಡದಂತೆ ಸಾರಲಾಯಿತು; ಅಮೇರಿಕನರೂ ಸ್ವಯಂಸೇವಕರಾಗುವುದು ಸಾಧ್ಯವಿಲ್ಲದಂತಾಯಿತು.

ಇದನ್ನು ವಿರೋಧಿಸಿ ಗೇನೇಯು ಜನರು ಪ್ರೆಸಿಡೆಂಟನ ಅಭಿಪ್ರಾಯವನ್ನು ವಿರೋಧಿಸುತ್ತಾರೆಂದು ಪ್ರಚಾರಮಾಡತೊಡಗಿದನು. ಆದರೆ ಇಂಥ ಅಧಿಕಾರವನ್ನು ಘಟನೆಯು ಪ್ರೆಸಿಡೆಂಟನಿಗೆ ಇತ್ತಿದೆ ಎಂದು ಹೇಳಿ ಜೆಪ್ಫರ್ಸನ್ನನು ಈತನ ಬಾಯಿ ಮುಚ್ಚಿಸಬೇಕಾಯಿತು.

ಹೀಗೆ ಜನತೆಯು ಫ್ರಾನ್ಸಿನತ್ತ ಕರುಣೆಯನ್ನು ತೋರುತ್ತಿರುವುದನ್ನು ನೋಡಿ ಬ್ರಿಟನು ಕೂಡ ಅಮೇರಿಕನರನ್ನು ಹಗೆಗಳೆಂದೇ ಪರಿಗಣಿಸಹತ್ತಿತು.

ಗುಟ್ಟಿನಲ್ಲಿ ವಾಶಿಂಗ್‌ಟನ್‌ನ ಶತ್ರುಗಳೂ ಈ ಸಂದರ್ಭದಲ್ಲಿ ಆತನ ಮೇಲೆ ಮಣ್ಣೆರಚಲು ಯತ್ನಿಸುತ್ತಿದ್ದರು. "ಜಾರ್ಜ್ ವಾಶಿಂಗ್‌ಟನ್‌ನ ಮರಣ" ಎಂಬ ಚಿತ್ರವನ್ನು ಲುಯಿಯ ಮರಣದಂತೆಯೇ ಚಿತ್ರಿಸಲಾಗಿತ್ತು.

"ಇದರಲ್ಲೇನೂ ಅರ್ಥವಿಲ್ಲ, ಇಂಥ ಹುದ್ದೆಯ ಬದಲು ಅಥವಾ ಇಡೀ ಜಗತ್ತಿನ ದೊರೆಯಾಗಿರುವ ಬದಲು, ನನ್ನ ಭೂಮಿ ಹೊಲಗಳಲ್ಲೇ ನಾನು ಇರುವುದು ಒಳ್ಳೆಯದಿತ್ತು," ಎಂದು ಜುಗುಪ್ಸೆಯಿಂದ ಪ್ರೆಸಿಡೆಂಟ್ ತನ್ನ ಕೇಬಿನೆಟ್‌ಗೆ ಹೇಳಲೂ ಬೇಕಾಯಿತು.

ಸಭೆಯು ಇದೇ ಅಧಿವೇಶನದಲ್ಲಿ ಗೇನೇಯನ್ನು ಹಿಂದೆಗೆಯಬೇಕೆಂದು ಪ್ರಾರ್ಥಿಸಲಾಯಿತು. ಇದನ್ನು ವಿವರವಾಗಿ ವಿವರಿಸಲಾದ ಕಾರಣ ಜನರೆಲ್ಲರೂ ಗೇನೇಯ ಮೇಲೆ ತಿರುಗಿ ಬಿದ್ದರು. ಫ್ರೆಂಚನೊಬ್ಬನು ತಮ್ಮ ಪ್ರೆಸಿಡೆಂಟನನ್ನು ಅಪಮಾನಗೊಳಿಸಿದನೆಂಬುದನ್ನು ಇವರು ಸಹಿಸದಾದರು.

ಹೀಗೆ ಕೆಬಿನೆಟ್‌ನಲ್ಲಿ—ಸಚಿವ ಮಂಡಲದಲ್ಲಿ—ಬೇಕಾದಷ್ಟು

ಅಂತಃಕಲಹವು ಪರಸ್ಪರ ದೂಷಣೆಯೂ ನಡೆದಿತ್ತು. ಜೆಫ್ಫರ್ಸನ್‌ನೂ ಹೇಮಿಲ್ಟನನೂ ಪರಸ್ಪರ ಹೀಯಾಳಿಸಿಕೊಂಡು ಇಬ್ಬರೂ ತಂತಮ್ಮ ಸ್ಥಾನಗಳಿಗೆ ರಾಜಿನಾಮೆ ಹಾಕುವುದಾಗಿ ಬೆದರಿಕೆ ಹಾಕಿದರು. ಆಗ ವಾಶಿಂಗ್‌ಟನ್‌ನ ಒತ್ತಾಯದ ಮೇರೆಗೆ ಇಬ್ಬರೂ ಸುಮ್ಮನಾದರು.

ಅಮೇರಿಕದ ವಾಣಿಜ್ಯದಲ್ಲಿ ಬ್ರಿಟನ್ ಕೈಹಾಕಿ ಸಲ್ಲದ ಕೀಟಲೆ ಕೊಡಲಾರಂಭಿಸಿತ್ತು. ಅಮೇರಿಕವು ತನ್ನ ವಿರೋಧವನ್ನು ಪದೇಪದೇ ಸೂಚಿಸಿದ್ದರೂ ಪ್ರಯೋಜನವಾಗಲಿಲ್ಲ. ಈ ಕಾರಣಗಳಿಂದ ತಮ್ಮ ಶಾಂತಿಯನ್ನು ಕಾಯ್ದುಕೊಳ್ಳಲು ಸ್ವರಕ್ಷಣೆಯ ಸೈನಿಕರನ್ನು ಆರಿಸಿ ತರಬೇತಿಗೊಳಿಸುವ ನಿಶ್ಚಯವನ್ನು ಪ್ರೆಸಿಡೆಂಟ್ ಮತ್ತು ಆತನ ಸಭೆಯು ಮಾಡಲೇಬೇಕಾಯಿತು. 6 ಯುದ್ಧ ನಾವೆಗಳನ್ನು ಕಟ್ಟುವುದಕ್ಕೂ ಅನುಮತಿಯನ್ನೀಯಲಾಯಿತು. ಇವುಗಳಿಂದ ಸಾಗರಗಳಲ್ಲಿನ ಕಳ್ಳತನವನ್ನು ನಿಲ್ಲಿಸಲು ಅಮೇರಿಕ ಆಲೋಚಿಸಿತು.

ಇಷ್ಟರಲ್ಲಿ ಗೇನೇಯು ಅಮೇರಿಕದಲ್ಲಿನ ಸ್ಪೇನಿಶ್ ಪ್ರಾಂತಗಳೊಡನೆ ಯುದ್ಧಮಾಡಿದ್ದನು. ಈತನನ್ನು ದೇಶದಿಂದೋಡಿಸುವುದೆಂದೇ ನಿಶ್ಚಯವಾಯಿತು. ಆದರೆ ಆಗಲೇ ಫ್ರಾನ್ಸಿನ ಸರಕಾರವು ಉರುಳಿಬಿದ್ದು ಮತ್ತೊಂದು ಸರಕಾರವು ಅದರ ಸ್ಥಾನವನ್ನು ಆಕ್ರಮಿಸಿತು. ಈ ಸರಕಾರವೇ ಗೇನೆಯನ್ನು ತಳ್ಳಿಬಿಟ್ಟಿತು ಜನರು ಫ್ರಾನ್ಸಿನ ಅವಸ್ಥೆಯನ್ನು ನೋಡಿ ನಗುವಂತಾಯಿತು. ಗೇನೆಯೂ ಅಮೆರಿಕ ಪ್ರಜೆಯಾಗಿ ನ್ಯೂಯಾರ್ಕ್‌ನ ಗವರ್ನರನ ಮಗಳನ್ನು ಮದುವೆಯಾಗಿ ಅಲ್ಲೇ ಇರಹತ್ತಿದನು.

1794ರಲ್ಲಂತೂ ಇಂಗ್ಲಂಡದ ಮೇಲಿನ ದ್ವೇಷವು ಏರುತ್ತಲೇ ಹೋಯಿತು. ಇಲ್ಲಿನ ನಾವೆಯು ಎಲ್ಲಿಗೆ ಫ್ರೆಂಚ್ ನಾವೆಗಳು ಹೋಗುತ್ತಿದ್ದರೂ ಅವನ್ನು ಹಿಡಿದು ತಮ್ಮ ರೇವುಗಳಿಗೆ ಕೊಂಡುಹೋಗಿ ಅವುಗಳ ಎಲ್ಲ ವಿಚಾರಗಳನ್ನೂ ತೆಗೆದುಕೊಳ್ಳುತ್ತಿದ್ದುವು.

ಇಂಥ ಪರಿಸ್ಥಿತಿಯಲ್ಲಿ ಕಾಂಗ್ರೆಸ್ಸಿಗೆ ಇಂಗ್ಲಂಡಿನ ಮೇಲೆ ಯುದ್ಧ ಹೂಡುವುದು ಅನಿವಾರ್ಯವೆನಿಸಿತ್ತು. ಅದರೆ ಅಷ್ಟರಲ್ಲಿ ಇಂಗ್ಲಂಡ್ ತನ್ನ ಆಜ್ಞೆಗಳನ್ನು ಹಿಂದೆಗೆಯಿತು.

ವಾಶಿಂಗ್‌ಟನ್ ಪ್ರಧಾನ ನ್ಯಾಯಾಧೀಶ ಜೇ ಯನ್ನು ಇಂಗ್ಲಂಡಿಗೆ ರಾಯಭಾರಿಯಾಗಿ ಕಳುಹಲನುವಾದನು.

ಇಷ್ಟರಲ್ಲಿ ಹೇಮಿಲ್ಟನ್‌ನ ಎಕ್ಸಾಯಿಸ್ ತೆರಿಗೆಯು ಮತ್ತೊಂದು ಗಹನ ಸಮಸ್ಯೆಯನ್ನು ದೇಶದಲ್ಲಿ ತಂದುಹಾಕಿತು. ಈ ತೆರಿಗೆಯನ್ನು ವ್ಹಿಸ್ಕಿಯ ಮೇಲೆ ಹೊರಿಸಲಾಗಿತ್ತು. ಕೂಡಲೇ ಎಲ್ಲೆಡೆಗಳಲ್ಲೂ ಜನರು ರೊಚ್ಚಿಗೆದ್ದು ಬಂಡಾಯವೆದ್ದರು. ಈ ಬಂಡಾಯವನ್ನು ನಿಲ್ಲಿಸಲು ಹೋದವರನ್ನೂ ಸುಟ್ಟುಹಾಕಲಾಯಿತು.

ಜನತೆಯ ಒಂದು ಭಾಗದ ಈ ಉದ್ಧಟತನವನ್ನು ಸಹಿಸುವಂತಿರಲಿಲ್ಲ. ಈ ಅಲ್ಪ ಸಂಖ್ಯಾಕರೇ ಎಲ್ಲರಿಗೂ ಹೇಳುವಷ್ಟು ಉದ್ಧಟರಾದರೆ, ಅಲ್ಲಿಗೆ ನಮ್ಮ ರಿಪಬ್ಲಿಕ್ ಇಲ್ಲದೆ ಹೋಗುವುದು ನಿಶ್ಚಯವೆಂದೆನ್ನುತ್ತಾ ವಾಶಿಂಗ್‌ಟನ್ ಇದನ್ನು ನಿಲ್ಲಿಸಲು ಆಜ್ಞಾಪಿಸಿದನು.

7ನೇ ಆಗಸ್ಟರಂದು ಈತನಿತ್ತ ಆಜ್ಞೆಯನ್ನು ವ್ಹಿಸ್ಕೀ ವ್ಯಾಪಾರಿಗಳು ಕೇಳಲಿಲ್ಲ. ಅವರು ಮತ್ತೂ ತೆರಿಗೆಗಳನ್ನು ಕೊಡಲು ನಿರಾಕರಿಸಿದರು. ಪುನಃ ಎರಡನೆಯಬಾರಿ ಇದೇ ರಾಜಾಜ್ಞೆಯನ್ನು ಸಾರಲಾಯಿತು. ಅದನ್ನು ವಿರೋಧಿಸಿದಾಗ ಸೈನಿಕರನ್ನೇ ಕಳುಹಲಾಯಿತು.

ತಾನೇ ಮುಖಂಡನಾಗಿ ವಾಶಿಂಗ್‌ಟನ್ ಈ ಸೈನಿಕರನ್ನು ಕೊಂಡು ಹೋಗಿ ಯುದ್ಧ ಮಾಡಿದನು. ಪುನಃ ಸಮವಸ್ತ್ರಗಳಲ್ಲಿದ್ದು ರಾಜಕೀಯವನ್ನೆಲ್ಲ ಒತ್ತಟ್ಟಿಗಿಟ್ಟು ಮುಂದೆ ಸಾಗುವುದು ಸ್ವಲ್ಪ ಹಿತವೆನಿಸಿತು. ಕಾಂಗ್ರೆಸ್ ಕೂಡುವ ಮುಂಚೆಯೇ ತನ್ನ ಅಧಿಕಾರವನ್ನು ಲೀ ಗೊಪ್ಪಿಸಿ ಹಿಂದುರಿಗಿದನು. ಈತನೆಣಿಸಿದಂತೆಯೇ ದಂಗೆಕೋರರು ಸುಮ್ಮನಾದರು.

1795ರ ಮೊದಲಲ್ಲೇ ಹೇಮಿಲ್ಟನ್ ಮತ್ತು ನೋಕ್ಸ್ ತಂತಮ್ಮ ಪದವಿಗಳಿಗೆ ರಾಜಿನಾಮೆ ಇತ್ತರು. ಮಾರ್ಚ್‌ನಲ್ಲಿ ಜೇಯೂ ಇಂಗ್ಲಂಡಿನಲ್ಲಿ ನಡೆಸಿದ ಮಾತುಕತೆಗಳ ಫಲವಾಗಿ ಒಪ್ಪಂದದ ಕರಡು ಬಂದಿತು.

ಆತನು ಹಿಂದಿರುಗಿದಾಗ, 'ಇದಕ್ಕಿಂತ ಹೆಚ್ಚಿನ ಸವಲತ್ತುಗಳನ್ನು ಪಡೆಯುವುದು ಅಸಾಧ್ಯವಿತ್ತು' ಎಂದು ಈತನು ವಾಶಿಂಗ್‌ಟನ್‌ಗೆ ಹೇಳಿದನು: "ಇಷ್ಟನ್ನಾದರೂ ಬಿಟ್ಟು ಯುದ್ಧಕ್ಕೆ ಹೋಗುವುದು ತಿಳಿಗೇಡಿತನವಾಗಿತ್ತು".

ಇಷ್ಟರಲ್ಲಿ ಜೋರ್ಜ್ ಲಾಫೇಯು, ಈತನ ಸ್ನೇಹಿತ ಲಾಫೇಯ ಮಗನು, ಅಮೇರಿಕದಲ್ಲಿ ಆಶ್ರಯ ಪಡೆಯಲು ಬಂದಿದ್ದನು. ಆದರೆ ಪ್ರೆಸಿಡೆಂಟ್ ಈತನಿಗೆ ತನ್ನಲ್ಲಿ ಆಶ್ರಯವನ್ನೀಯಬಲ್ಲನೆ? ಇದು ಧರ್ಮ ಸಂಕಟದ ಪ್ರಸಂಗವಾಗಿತ್ತು. ಅಂತೂ ಇವನೂ ಮಾರ್ತಾಳೂ ಆಲೋಚಿಸಿ ಈತನಿಗೆ ತಮ್ಮಲ್ಲಿ ಅಲ್ಲವಾದರೂ ತಕ್ಕ ಆಶ್ರಯವನ್ನು ಇತ್ತು ಸಲಹಬೇಕೆಂದು ಯೋಚಿಸಿದರು.

1796 ಮಾರ್ಚಿನಲ್ಲಿ ಜೇಯ ಒಪ್ಪಂದದ ಬಗ್ಗೆ ಅದನ್ನು ಸಮರ್ಥಿಸುತ್ತ ಜಾರ್ಜ್ ತುಂಬಾ ಹೋರಾಡಬೇಕಾಯಿತು. ಕೊನೆಗೂ ಈತನ ನಿಲುವನ್ನು ಇವರೆಲ್ಲರೂ ಅನುಮೋದಿಸಿದರು.

ಇತ್ತ ಇಂಗ್ಲಿಷರ ಧೋರಣೆಯು ಹಿತಕರವಾಗುತ್ತ ಬಂದಂತೆ ಫ್ರೆಂಚರ ಧೋರಣೆಯು ಕಠಿಣವಾಗುತ್ತ ಬಂದಿತ್ತು. ಫ್ರಾನ್ಸಿನೊಡನೆ ಯುದ್ಧವು ಇನ್ನು ಅನಿವಾರ್ಯವೆನ್ನುವಷ್ಟು ಪರಿಸ್ಥಿತಿಯು ಹಾಳಾಯಿತು.

ಜಾರ್ಜ್ ವಾಶಿಂಗ್‌ಟನ್ ಸಿಟ್ಟಿಗೆದ್ದನು; ಆದರೆ, ಧೈರ್ಯಗೆಡಲಿಲ್ಲ ಈಗ ಅಮೇರಿಕವು ತಕ್ಕಷ್ಟು ಆರ್ಥಿಕ ಭದ್ರತೆಯನ್ನು ಪಡೆದಿತ್ತು. ದೇಶದಲ್ಲಿನ ಆಂತರಿಕ ಸಂಪರ್ಕವೂ ಉತ್ತಮವಾಗಿತ್ತು. ಜನ ಒಳ್ಳಿತನ್ನು ಸುಲಭವಾಗಿ ಅರಿತುಕೊಳ್ಳುತ್ತಿದ್ದರು. ಎಲ್ಲವನ್ನೂ ವಿಮರ್ಶಿಸಿ ಪರೀಕ್ಷಿಸುವ ಸಾಮರ್ಥ್ಯವನ್ನು ಪಡೆದಿದ್ದರು. ಸರಿ, ಇಂಥ ಪರಿಸ್ಥಿತಿಯಲ್ಲಿ ತಾನು ತನ್ನ ಅಧಿಕಾರವನ್ನು ಬಿಟ್ಟು ತನ್ನ ನಂತರದವನಿಗೊಪ್ಪಿಸುವುದು ಸರಿ ಎಂದು ಜಾರ್ಜ್ ಮನಗಂಡನು.

ತನ್ನ ವಿದಾಯ ಭಾಷಣದಲ್ಲಿ ಪ್ರೆಸಿಡೆಂಟ್ ಪುನಃ ಶಾಂತಿ ಮತ್ತು ತಟಸ್ಥ ನೀತಿಗಳ ವಿಚಾರ ಮಾತನಾಡಿದನು. ಜಗತ್ತಿನ ಎಲ್ಲ ಜನರ ಮೇಲೂ ಪ್ರೀತಿ ಆದರಗಳನ್ನು ತೋರುವುದು ತಮ್ಮ ಕರ್ತವ್ಯವೆಂದು ಜನರನ್ನು ಹುರಿದುಂಬಿಸಿದನು.

'ಎಲ್ಲಾ ರಾಷ್ಟ್ರಗಳ ಮೇಲೂ ನಂಬಿಕೆಯನ್ನಿಡಿರಿ. ಎಲ್ಲರೊಡನೆಯೂ ಶಾಂತತೆಯಿಂದ ಮತ್ತು ಸಮರಸದಿಂದ ಇದ್ದು ಬಿಡಿರಿ. ಇದೇ ನಮ್ಮ ಉತ್ತಮ ಭವಿಷ್ಯಕ್ಕೆ ಅವಶ್ಯವಿರುವ ಧೋರಣೆ' ಎಂಬುದೇ ಈತನ ಭಾಷಣದ ಸಾರಾಂಶವಾಗಿತ್ತು.

4ನೇ ಮಾರ್ಚ್, 1798; ಈ ದಿನ ಏಡಮ್ಸ್‌ನ್ನು ಮುಂದಿಟ್ಟು ಕೊಂಡು ಈತನು ವೇದಿಕೆಗೆ ಬಂದನು. ರಾಷ್ಟ್ರದ ಪ್ರಮುಖರೆಲ್ಲರೂ ಸೇರಿದ್ದರು ಜನರೆಲ್ಲರೂ ಒಗ್ಗೊರಲಿನಿಂದ 'ಜಯ ವಾಶಿಂಗ್‌ಟನ್' ಎಂದು ಜಯಕಾರ ಮಾಡಿದರು. ಆ ಸದ್ದು ಭೂವ್ಯೋಮಗಳಲ್ಲೆಲ್ಲ ಪ್ರತಿಧ್ವನಿಸಿತು. 8 ವರ್ಷಗಳ ನಂತರ ವಾಶಿಂಗ್‌ಟನ್ ತನ್ನ ಅಧಿಕಾರವನ್ನು ಬಿಟ್ಟುಕೊಡುತ್ತಿದ್ದಾನೆ. 8 ವರ್ಷಗಳ ಪ್ರಚಂಡ ಒದ್ದಾಟದಿಂದ ಈತನ ಭವ್ಯತೆಯು ಹೆಚ್ಚಿದೆ. ಹೆಚ್ಚಿನ ಉಪಟಳಗಳ ಅಲೆಗಳು ಈ ಭವ್ಯ ಪರ್ವತದ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡಿಲ್ಲವೆಂದು ಜನ ಹೇಳಿಕೊಳ್ಳುತ್ತಿದ್ದರು.

ಏಡಮ್ಸ್ ಪದವಿಯನ್ನೇರಿದ ನಂತರ ತಾನು ಗೆದ್ದೆನೆಂಬ ಮನೋಭಾವನೆಯಿಂದ ಜಾರ್ಜ್ ಏಡಮ್ಸ್‌ನನ್ನು ಈಕ್ಷಿಸಿದನು.

"ಆತನು ನನ್ನನ್ನು ಗೆದ್ದಂತಿತ್ತು—ಆತನ ದೃಷ್ಟಿ ಮತ್ತು ಮನೋಭಾವನೆಗಳು ಇದನ್ನೇ ಹೇಳುವಂತಿದ್ದುವು—ನಮ್ಮಲ್ಲಾರು ಇನ್ನು ಹೆಚ್ಚಿನ ಸುಖಿಗಳು ಎಂದು ಆತನು ಕೇಳುತ್ತಿರುವಂತೆ ನನಗೆ ಭಾಸವಾಯಿತು." ಎಂದು ಏಡಮ್ಸ್ ಈ ಸಂದರ್ಭವನ್ನು ವಿವರಿಸಿ ತನ್ನ ಪತ್ನಿಗೆ ಬರೆದಿದ್ದನು.

ಶಾಲೆಗೆ ರಜೆ ಸಿಕ್ಕಿದಕೂಡಲೆ ಪಟ್ಟಣದಿಂದ ಹಳ್ಳಿಗೆ ಧಾವಿಸುವ ಹುಡುಗರಂತೆ ಈತನು ಪಟ್ಟಣದಿಂದ ತನ್ನ ಹಳ್ಳಿಗೆ, ಮೌಂಟ್‌ವೆರ್ನಾನಿಗೆ. ಹೋದನು. ಈತ, ಮಾರ್ತಾ, ಸೆಲ್ಲಿ, ಚಿಕ್ಕ ಲಾಫೇ ಮತ್ತು ಆತನ ಶಿಕ್ಷಕರೆಲ್ಲರೂ ಅಲ್ಲಿಗೆ ಹೋದರು.

ಅನಂತರದ ಎರಡು ವರ್ಷಗಳೇ ವಾಶಿಂಗ್‌ಟನ್‌ನ ಜೀವನದಲ್ಲಿ ಅತ್ಯಂತ ಶಾಂತ ಮತ್ತು ಸುಖಮಯ ವರ್ಷಗಳಾಗಿದ್ದುವು. ಈಗ ವಾಶಿಂಗ್‌ಟನ್ ಹಳ್ಳಿಗ, ಜಮೀನ್ದಾರ. ತನ್ನ ನೆಲ ಹೊಲಗಳನ್ನು ನೋಡುತ್ತ ಈತನ ಹೃದಯ ತುಂಬಿಬರುತ್ತಿತ್ತು. ಆದರೂ ಈತನು ರಾಜಕೀಯದಲ್ಲಿ ತಕ್ಕ ಆಸ್ಥೆಯನ್ನು ತೋರುತ್ತಲೇ ಇದ್ದನು.

ಅದೇ ಅಕ್ಟೋಬರದಲ್ಲಿ ಚಿಕ್ಕ ಲಾಫೇಯು ಬಂದು, "ನನ್ನ ತಂದೆಯನ್ನು ಬಿಟ್ಟಿದ್ದಾರೆ, ನಾನೂ ಫ್ರಾನ್ಸಿಗೆ ಹೋಗುತ್ತೇನೆ," ಎಂದು

ವಾಶಿಂಗ್‌ಟನ್‌ನಿಗೆ ಚಿನ್ನವಿಸಿಕೊಂಡನು. 'ಅಯ್ಯೋ ಇನ್ನೂ ಅನಿಶ್ಚಿತತೆಯೇ ತಾಂಡವವಾಡುತ್ತಲಿರುವ ಊರಿಗೆ ಈತನು ಹೋಗುತ್ತಿರುವನಲ್ಲಾ' ಎಂಬ ಮಾನಸಿಕ ವೇದನೆಯಿಂದ ವಾಶಿಂಗ್‌ಟನ್ ಈ ಹುಡುಗನನ್ನು ಕಳುಹಿದನು.

ಪುನಃ 1798ರಲ್ಲಿ ವಾಶಿಂಗ್‌ಟನ್‌ನನ್ನು ರಾಜಕೀಯವು ತನ್ನತ್ತ ಆಕರ್ಷಿಸಿತು. ಫ್ರಾನ್ಸಿನೊಡನೆ ಯುದ್ಧವು ಅನಿವಾರ್ಯವೆನಿಸಿತು, ಕಾರಣ ಇವರಿಗೆ ವಸ್ತುಗಳನ್ನು ಕೊಂಡುಬರುತ್ತಿದ್ದ ಹಡಗಗಳನ್ನು ಹಿಡಿಯಲು ಕೊಟ್ಟ ಆಜ್ಞೆಯನ್ನು ಟೇಲರಾಂಡ್‌ನು ಹಿಂದೆಗೆಯಲು ಒಪ್ಪುತ್ತಿರಲಿಲ್ಲ.

ರಿಪಬ್ಲಿಕನರು ತಮ್ಮ ಪರವಾಗಿ ವಾದಿಸುವರೆಂಬ ಭ್ರಮೆ ಫ್ರಾನ್ಸಿನಲ್ಲಿತ್ತು. ಆದರೆ ಇವರೆಣಿಕೆಯು ತಪ್ಪಾಗಿತ್ತು. ಜನರೆಲ್ಲ ಸಿಡಿದೆದ್ದು ಯುದ್ಧಕ್ಕನುವಾದರು. ಪುನಃ ವಾಶಿಂಗ್‌ಟನ್‌ನನ್ನು ಪ್ರಮುಖ ಸೈನ್ಯಾಧಿಕಾರಿಯನ್ನಾಗಿ ನೇಮಿಸಲಾಯಿತು.

ಜೋರ್ಜ್ ವಾಶಿಂಗ್‌ಟನ್ ಕಸ್ಟಿಸನು ರಜೆಯಲ್ಲಿ ಬಂದಿದ್ದು ಉತ್ಸುಕನಾಗಿ ಅಜ್ಜ ಜಾರ್ಜ್ ವಾಶಿಂಗ್‌ಟನ್‌ನೊಡನೆ, 'ನಿಜಕ್ಕಾದರೂ ಯುದ್ಧವಾಗಲಿರುವುದೆ?' ಎಂದು ಪ್ರಶ್ನಿಸಿದನು.

"ನಮಗಾದ ಅನ್ಯಾಯವನ್ನು ಅವರು ಹಿಂದೆಗೆಯದಿದ್ದರೆ ಖಂಡಿತವಾಗಿಯೂ ಯುದ್ಧವಾಗತಕ್ಕುದೇ. ನಾನು ಶಾಂತಿಪ್ರಿಯನಿದ್ದರೂ ಅವಮಾನವನ್ನು ಸಹಿಸಲಾಗುವುದಿಲ್ಲ" ಎಂಬ ಉತ್ತರವು ಜಾರ್ಜ್‌ನಿಂದ ಬಂದಿತು.

ಆದರೆ ದಿನಗಳು ಕಳೆದಂತೆ ಯುದ್ಧಚಿಹ್ನೆಗಳು ತೊಲಗಿದುವು ಫ್ರಾನ್ಸ್ ಸ್ವಲ್ಪ ಸ್ವಲ್ಪ ಉದ್ಧಟಮಾರ್ಗದಿಂದ ಹಿಂದೆಗೆಯುತ್ತ ಬಂದ ಕಾರಣ ಯುದ್ಧವಾಗುವುದು ತಪ್ಪಿತು.

ಪುನಃ ಪತ್ರವ್ಯವಹಾರ, ಅತಿಥಿಗಳ ಸಂಭ್ರಮ ಹೆಂಡತಿ ಮಕ್ಕಳೊಡನೆ ವಿಹಾರ ಮೊದಲಾದ ಕಾರ್ಯಕ್ರಮಗಳೇ ಜಾರ್ಜ್‌ನ ದೈನಿಕ ಕ್ರಮಗಳಾದುವು.

13-12-1799: ಈ ದಿನ ಸಾಯಂಕಾಲ ಪತ್ರಿಕೆಗಳನ್ನೋದುತ್ತ ಕುಳಿತ ಜಾರ್ಜ್ ಹತ್ತಿರವೇ ಇದ್ದ ಲಿಯರನನ್ನು ಸಂಬೋಧಿಸಿದನು.

‘‘ನೋಡು ಲಿಯರ್, ಮನ್ರೋವೇ ಫ್ರಾನ್ಸಿನಲ್ಲಿ ಎಲ್ಲವನ್ನೂ ಸಾಧಿಸಿದ ನೆಂದು ಮೇಡಿಸನ್ ಆತನನ್ನು ಸ್ತುತಿಸುತ್ತಿದ್ದಾನೆ.”

ಅಲ್ಲೀ ಅಗ್ನಿಷ್ಟಿಕೆಯ ಹತ್ತಿರವಿದ್ದ ಮಾರ್ತಾಳು ಆಶ್ಚರ್ಯದಿಂದಲೂ ಉತ್ಕಂಠತೆಯಿಂದಲೂ ಕತ್ತೆತ್ತಿದಳು. ಜಾರ್ಜನ ಸ್ವರವು ನೆಗಡಿ ಯಿಂದಲೆಂಬಂತೆ ಅಸ್ಪಷ್ಟವಾಗಿತ್ತು.

‘‘ಇದೇನಾಗಿದೆ ನಿನಗೆ ಜಾರ್ಜ್? ತುಂಬಾ ನೆಗಡಿಯಾಗಿದೆ. ನಿನ್ನೆಮೊನ್ನೆ ಹೊರಬಯಲಲ್ಲಿ ಆ ಚಳಿ ಮತ್ತು ಮಂಜು ಬಿದ್ದಾಗ ನೀನು ಹೊರಗೆ ಹೋದದ್ದೇಕೆ? ಕುತ್ತಿಗೆಗೆ ಏನಾದರೂ ಮದ್ದು ಮಾಡೋಣ” ಎಂದಳು.

“ಏನಿಲ್ಲ ಪೇಟ್ಸ ಗಾಬರಿಯೇಕೆ? ಅದು ಬಂದಂತೆ ವಾಸಿಯಾಗು ತ್ತದೆ, ಇಗೋ ಲಿಯರನ್ನು ವರ್ಜೀನಿಯಾದ ಚುನಾವಣೆಯ ವರದಿ ಯನ್ನೋದಲಿ” ಎಂದು ಮರುನುಡಿದನು ಜಾರ್ಜ್ ವಾಶಿಂಗ್‌ಟನ್.

ಮಾರ್ತಾಳು ಸ್ವಲ್ಪ ಸಿಡುಕಿನಿಂದಲೇ ಅಂದಳು: “ದೇಶದ ಮೇಲಿನ ಅಭಿಮಾನದಿಂದ ನಿನ್ನ ದೇಹವನ್ನು ಮರೆತಿದ್ದೀ. ಇಷ್ಟೆಲ್ಲ ಆಸ್ಥೆಯನ್ನು ನೀವು ತೋರುತ್ತಿದ್ದರೂ ಇತರರು ಇದನ್ನೆಲ್ಲ ಅಭಿಮಾನ ದಿಂದ ಕಾಣುವರೆ?” ಎಂಬ ಶಂಕೆಯನ್ನು ಇವಳು ಪ್ರಸ್ತಾಪಿಸಿದಳು.

ಪಾಪ! ಇದನ್ನು ಹೇಳುವಾಗಲಂತೂ ಮಾರ್ತಾಳಿಗೆ ಇನ್ನೊಂದು ವಾರದೊಳಗಾಗಿ ಅಮೇರಿಕದ ದೊಡ್ಡ ಜ್ಯೋತಿಯು ನಂದಿ ಹೋಗುವು ದೆಂಬ ಅರಿವಿದ್ದಿಲ್ಲ. ಏಳು ದಿನಗಳೊಳಗಾಗಿ ಎಲ್ಲೆಲ್ಲೂ ಈತನ ಪುಣ್ಯ ಸ್ಮೃತಿಗಾಗಿ ಪತಾಕೆಗಳು ಅರ್ಧ ಏರಿಸಲ್ಪಟ್ಟಿದ್ದುವು, ಮಿಲಿಯಗಟ್ಟಳೆ ಜನ ಈತನಿಗಾಗಿ ಮರುಗಿದರು. ಪ್ರತಿಯೊಬ್ಬನೂ ತನ್ನಾತ್ಮೀಯನೊಬ್ಬ ನನ್ನು ಕಳೆದುಕೊಂಡಾಗ ಅಳುವಷ್ಟೇ ಕಾತರತೆಯಿಂದ ಕಣ್ಣೀರು ಮಿಡಿ ದಿದ್ದನು. ಹೇರ್ರಿ ಲೀ ಯ ಮಾತುಗಳಲ್ಲಿ ಹೇಳುವುದಾದರೆ, “ಯುದ್ಧದಲ್ಲಿ, ಶಾಂತಿಯಲ್ಲಿ ಮತ್ತು ತನ್ನೆಲ್ಲ ದೇಶಬಂಧುಗಳ ಹೃದಯದಲ್ಲಿ ಮೊದಲಿಗ ನಾಗಿದ್ದ ‘‘ವಾಶಿಂಗ್‌ಟನ್” ಮತ್ತೊಂದು ವಾರದೊಳಗೇನೇ ಮೃತನಾಗಿ ದ್ದನು.”

ಅದೇ ರಾತ್ರಿ ತನ್ನ ಕಂಠವು ಮುಚ್ಚುತ್ತಿರುವುದು ಜಾರ್ಜನಿಗೆ ಭಾಸವಾಯಿತು. ಮರುದಿನ ಬೆಳಗ್ಗೆ ಈತನಿಗೆ ಎಚ್ಚರವಾದಾಗ ಹಿಂದಿನ ರಾತ್ರಿ ಡಾ| ಕ್ರೈಕ್ ತನ್ನ ಗಂಟಲನ್ನು ಶಸ್ತ್ರಗಳಿಂದ ಕೊರೆದಿದ್ದುದು ಜ್ಞಾಪಕಕ್ಕೆ ಬಂದಿತು. ದೇಹವು ಭಾರವಾಗುತ್ತಿತ್ತು. ತನ್ನಂತ್ಯವು ಸಮೀಪಿಸಿದುದನ್ನು ಜಾರ್ಜ ಮನಗಂಡನು. ಆಗಲೇ, ತನ್ನ ಇಂಥ ಸ್ಥಿತಿಯಲ್ಲೇ ಮೃತ್ಯುವು ಬರುವುದು ಒಳ್ಳೆಯದೆಂಬ ಯೋಚನೆ ಇವನಿಗೆ ಬಂದಂತೆ ತನ್ನ ಬಾಲ್ಯದ, ಯೌವನದ ಮತ್ತು ಅನಂತರದ ಜೀವನದ ದೃಶ್ಯಗಳು ಒಂದೊಂದಾಗಿ ಈತನ ಅರ್ಧ ಮುಚ್ಚಿದ ಕಣ್ಣುಗಳ ಮುಂದೆ ಹಾದು ಹೋದುವು. ಈ ಚಿತ್ರವು ಅಂದಿನ ಸನ್ನಿವೇಶದಿಂದ ಹಿಂದೆ ಹಿಂದಕ್ಕೆ ಧಾವಿಸಿತು.

ಕಾಂಗ್ರೆಸಿನ ಮುಂದೆ ನಿಂತು ಶಾಂತಿಗಾಗಿ ವಾದಿಸಿದ ವಾಶಿಂಗ್‌ಟನ್, ಘಟನಾ ಸಮಿತಿಯ ಮುಂದೆ ಅದರ ಸ್ವೀಕಾರಕ್ಕಾಗಿ ಹೆಣಗಿದ ಯೋಧ, ರಾಜಕಾರಣಿ; ವಿಜಯಕ್ಕಾಗಿ ಹಿಂದೆ ಮುಂದೆ ತನ್ನ ಸೈನಿಕರ ನಡುವೆ ಓಡಾಡುತ್ತಿದ್ದ ಪ್ರಿನ್ಸ್‌ಟನ್ ಯುದ್ಧರಂಗದ ಸರದಾರ; ವಿಲಿಯಮ್ಸ್ ಬರ್ಗನ ಪ್ರತಿನಿಧಿಗಳ ಸಭೆಯಲ್ಲಿ ಭಾಗವಹಿಸಿದ ಯುವಕ; ತಾನು ಇತರರೊಡನೆ ಸಹಕರಿಸಿ ಸ್ಟೇಂಪ್ ಏಕ್ಟ್ ಮತ್ತು ಚಾದ ಮೇಲಣ ತೆರಿಗೆಯನ್ನು ವಿರೋಧಿಸಿದುದು; ಬ್ರೆಡ್ಡೋಕನ ಅನುಯಾಯಿ; ಇದಕ್ಕಿಂತಲೂ ಹಿಂದೆ ಲಜ್ಜಾಶೀಲನಾದ, ಮೃದು ಸ್ವಭಾವದ ಸರ್ವೆ ಪಂಗಡದ ಬಾಲಕ; ಬೆಲ್ವಾರಿನರಮನೆಯ ಒಡತಿಯ ಮುಂದೆ ನಿಂತ ಮುಗ್ಧ ವಾಶಿಂಗ್‌ಟನ್; ಅನಂತರ ಫೊಟೊಮೇಕ್ ತೀರದಲ್ಲಿ ಭವಿಷ್ಯದ ಹೊಂಗನಸು ಕಾಣುತ್ತಲಿದ್ದ ನವ ಯುವಕ! ತಾನೇ ಇವೆಲ್ಲವೂ ಆಗಿದ್ದೆನೆ? ಹೀಗೆ ಇದ್ದೆನೆ? ಎಂಬ ಅಸ್ಪಷ್ಟ, ಅರ್ಧಮರ್ಧ ಅಚ್ಚರಿಯು ಈತನಿಗೆ ಆಗಿರಬೇಕು. ಅನಂತರ ಸ್ಮೃತಿತಪ್ಪಿ ಈತನು ಅಮರನಾದನು

Navayuga Press, Udipi. S. Kanara.
8—1958—2000

ನವಯುಗ ಪ್ರೆಸ್, ಉಡುಪಿ